ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ, "2003ನೇ ಸಾಲಿನ ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

9) ಗಮನ ಸೆಳೆಯುವ ಸೂಚನೆ:

6) ವಿಷಯ: ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನ ಆಡಳಿತ ಮಂಡಳಿಗೆ ಆಡಳಿತಾಧಿಕಾರಿಯನ್ನು ನಾಮನಿರ್ದೇಶನ ಮಾಡಲಿರುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್(ತಿಕೋಟಾ):- ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನ ಆಡಳಿತ ಮಂಡಳಿಗೆ ಆಡಳಿತಾಧಿಕಾರಿಯನ್ನು ನಾಮನಿರ್ದೇಶನ ಮಾಡಲಿರುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

+ಶ್ರೀ ಹೆಚ್.ವಿಶ್ವನಾಥ್(ಮಾನ್ಯ ಸಹಕಾರ ಸಚಿವರು):- ಮಾನ್ಯ ಉಪಾಧ್ಯಕ್ಷರೆ,

ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ, ಬಿಜಾಪುರ ಈ ಬ್ಯಾಂಕ್ ಲಾಭಗಳಿಸುತ್ತಾ ಬರುತ್ತಿದೆ. ಈ ಬ್ಯಾಂಕಿನ ಆಡಳಿತ ಮಂಡಳಿಯ ಅವಧಿ ದಿ:31.3.2000ಕ್ಕೆ ಮುಕ್ತಾಯವಾಗಿದ್ದು, ಅದರಂತೆ ಬ್ಯಾಂಕು ದಿ:26.02.2000 ರಂದು ಚುನಾವಣಾ ವೇಳಾಪಟ್ಟಿ ನಿಗಧಿಪಡಿಸಿತ್ತು. ಆದರೆ, ಬ್ಯಾಂಕಿನ ಅಧ್ಯಕ್ಷರು ರಿಟ್ ಅರ್ಜಿ ಸಂ:22527:2000ದಲ್ಲಿ ಗೌ:ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಮೇರೆಗೆ ನ್ಯಾಯಾಲಯವು ಮಧ್ಯಂತರ ಆದೇಶ ಹೊರಡಿಸಿದ್ದು, ಈ ಆದೇಶವು ದಿನಾಂಕ:22.10.2002 ರಿಂದು ಅಂತಿಮವಾಗಿ ತೆರವುಗೊಂಡಿದ್ದರ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆಯನ್ನು ನಡೆಸಬಹುದೆಂದು ತಿಳಿಸಿರುತ್ತದೆ. ಆದರೆ, ಬ್ಯಾಂಕು ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆಯನ್ನು ಸಕಾಲದಲ್ಲಿ ನಡೆಸಲಿಲ್ಲ.

ಈ ಮಧ್ಯೆ ಈ ಬ್ಯಾಂಕನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ನಬಾರ್ಡ್ ಒಪ್ಪಿಗೆ ಮೇರೆಗೆ ವಿಭಜನೆ ಮಾಡಿ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಸ್ತಿತ್ವಕ್ಕೆ ಬಂದಿದ್ದು, ಕಾಯ್ದೆ ರೀತ್ಯಾ ದಿ:1.2.2003 ರಂದು ನೋಂದಣಿ ಪ್ರಮಾಣ ಪತ್ರ ನೀಡಲಾಗಿದೆ. ಅದೇ ರೀತ್ಯಾ ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಸಹ ಕಾಯ್ದೆ ರೀತ್ಯಾ ಹೊಸದಾಗಿ ನೋಂದಾಯಿಸಿದ ಬಗ್ಗೆ ದಿನಾಂಕ:01.02.2003 ರಂದು ನೋಂದಣಿ ಪ್ರಮಾಣ ಪತ್ರ ನೀಡಲಾಗಿದೆ.

ಬಾಗಲಕೋಟೆ ಡಿಸಿಸಿ ಬ್ಯಾಂಕು ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದರಿಂದ ಅದರ ಪ್ರಥಮ ಆಡಳಿತ ಮಂಡಳಿಗೆ ನಾಮಕರಣ ಮಾಡಿದ್ದು ಬಿಜಾಪುರ ಡಿಸಿಸಿ ಬ್ಯಾಂಕಿನ(Residual) ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಅನುವಾಗುವಂತೆ ಚುನಾವಣಾಧಿಕಾರಿಯಾಗಿ ಗದಗ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರನ್ನು ನೇಮಕ ಮಾಡಲಾಯ್ತು. ದಿನಾಂಕ:01.02.2003ರಂದು ಈ ಬ್ಯಾಂಕಿನ ವಿಭಜನೆ ಪ್ರಕ್ರಿಯೆ ಪೂರ್ಣಗೊಂಡು ನೋಂದಣಿ ಪ್ರಮಾಣ ಪತ್ರವನ್ನು ನೀಡಿದ ಪರಿಣಾಮವಾಗಿ ಬಿಜಾಪುರ ಡಿಸಿಸಿ ಬ್ಯಾಂಕಿಗೆ (Residual) ಹಿಂದಿನ ಆಡಳಿತ ಮಂಡಳಿಯು ಅಸ್ತಿತ್ವ ಕಳೆದುಕೊಂಡಿದೆ. ಚುನಾವಣಾಧಿಕಾರಿಯವರು ದಿನಾಂಕ:28.01.2003 ರಂದು ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ಅನುಮೋದಿಸಿದ್ದರು.

ದಿನಾಂಕ:17.02.2003 ರಿಂದು ಸಹಕಾರ ನಿಂಬಂಧಕರ ಆದೇಶದ ರೀತ್ಯಾ ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ, ಬಿಜಾಪುರ (ರೆಸಿಡ್ಯೂಯಲ್) ಇದಕ್ಕೆ ಸಹಕಾರ ಸಂಘಗಳ ಕಾಯ್ದೆ 59ರ ಕಲಂ 7(1)ರ ಪ್ರಕಾರ ಈ ಬ್ಯಾಂಕಿನ ಉಪನಿಧಿಗಳು ನೋಂದಣಿಯಾಗಿರುವುದರಿಂದ ಈ ಬ್ಯಾಂಕಿನ ಆಡಳಿತ ಮಂಡಳಿಯು ಅಸ್ತಿತ್ವವನ್ನು ಕಳೆದುಕೊಂಡ ಹಿನ್ನೆಲೆಯಲ್ಲಿ ಹಾಗೂ ಈ ಬ್ಯಾಂಕ್ ಮಾನ್ಯ ಉಚ್ಚ ನ್ಯಾಯಾಲಯವು ನಿರ್ದೇಸಿದಂತೆ ಚುನಾವಣೆಯನ್ನು ಸಕಾಲದಲ್ಲಿ ಜರುಗಿಸದೆಯಿದ್ದ ಕಾರಣದಿಂದ ಹಾಗೂ ಈ ಬ್ಯಾಂಕಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅನುವಾಗುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 28(ಎ) (5) ರನ್ವಯ ಆಡಳಿತಗಾರರನ್ನು ನಿಯಮಾನುಸಾರ ನೇಮಿಸಲಾಗಿರುತ್ತದೆ. ಅದರಂತೆ ದಿ:18.2.2003ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾಂ ಪ್ರಾಂತ, ಬೆಳಗಾಂರವರು ಈ ಬ್ಯಾಂಕಿನ ಆಡಳಿತಗಾರರ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾಂ ಪ್ರಾಂತ, ಬೆಳಗಾಂ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬಿಜಾಪುರ ರವರು ದಿ:18.02.2003 ರಂದು ಸಹಕಾರ ಸಂಘಗಳ ನಿಬಂಧಕರಿಗೆ ಪ್ರಸ್ತಾವೆ ಸಲ್ಲಿಸಿ, ಜಿಲ್ಲೆಯ ಎಲ್ಲಾ 5 ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಕ್ಕೆ ಒಳಪಟ್ಟಿದ್ದು, ಸರ್ಕಾರವು ಬರಪೀಡಿತ ಪ್ರದೇಶವೆಂದು ಘೋಷಿಸಿ, ಬರಗಾಲ ನಿವಾರಣಾ ಕಾಮಗಾರಿಗಳನ್ನು ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿದ್ದು, ರೈತರು ವಲಸೆ ಹೋಗುತ್ತಿದ್ದು, ಬ್ಯಾಂಕಿನ ಚುನಾವಣೆಯಲ್ಲಿ ಭಾಗವಹಿಸಲು ಬಹುದೂರದಿಂದ ಬಂದು ಭಾಗವಹಿಸುವುದಕ್ಕೆ ತೊಂದರೆಯಾಗುತ್ತದೆಂದು ತಿಳಿಸುತ್ತ, ಚುನಾವಣೆ ಜರುಗಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂ:ಸಿಎಂಡಬ್ಲ್ಯೂ 31 ಸಿಎಲ್‌ಎಂ 2002, ದಿನಾಂಕ:19.02.2002ರಂದು ಸಹಕಾರ ಸಂಘಗಳ ಅಧಿನಿಯಮ ಕಲಂ 39(ಎ)(4) ರನ್ವಯ ಬ್ಯಾಂಕಿಗೆ ದಿ:28.01.2003ರಂದು ನಿಗಧಿಪಡಿಸಿದ್ದ ಆಡಳಿತ ಮಂಡಳಿ ಚುನಾವಣೆಯನ್ನು 6 ತಿಂಗಳವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದೂಡಿರುತ್ತದೆ.

ಈ ಬ್ಯಾಂಕಿಗೆ ನಿಯಮ 73ರಡಿಯಲ್ಲಿ ಗಮನ ಸೆಳೆದಿರುವಂತೆ ಈ ತನಕ ಯಾವುದೇ ನಾಮನಿರ್ದೇಶನವನ್ನು ಮಾಡಿರುವುದಿಲ್ಲ ಹಾಗೂ ಮೇಲ್ಕಂಡ ಎಲ್ಲಾ ಸಕಾಲಿಕ ಕ್ರಮಗಳನ್ನು ಕಾಯ್ದೆ ರೀತ್ಯಾ ಕೈಗೊಳ್ಳಲಾಗಿದೆಯೇ ಹೊರತು ಯಾವುದೇ ರಾಜಕೀಯ ದುರುದ್ದೇಶದಿಂದ ಕೈಗೊಂಡಿರುವುದಿಲ್ಲ.

ಇತ್ತೀಚೆಗೆ ಈ ಬ್ಯಾಂಕಿನ ಹಿಂದಿನ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಇತರರು ಬ್ಯಾಂಕಿಗೆ ಆಡಳಿತಗಾರರನ್ನು ನೇಮಿಸಿರುವುದನ್ನು ಹಾಗೂ ಚುನಾವಣೆ ಮುಂದೂಡಿರುವುದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ:7815:2003 ಅನ್ನು ಸಲ್ಲಿಸಿದ್ದು ಈ ಅರ್ಜಿಯು ಇತ್ಯರ್ಥಕ್ಕೆ ಬಾಕಿಯಿರುತ್ತದೆ. ಅಲ್ಲದೆ ಬ್ಯಾಂಕಿನ ವಿಭಜನೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:3925:2003 ಮತ್ತು 4818:2003 ಅನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗಳೂ ಸಹ ಇತ್ಯರ್ಥಕ್ಕೆ ಬಾಕಿಯಿರುತ್ತವೆ.

+ಶ್ರೀ ಶಿವಾನಂದ ಎಸ್.ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಒಂದು ಕಡೇ ಯಾರೋ ಆಗಲೇ ಹೇಳುತ್ತಿದ್ದರು. ಮಾನ್ಯ ಸಹಕಾರ ಸಚಿವರು ಯಾವಾಗಲೂ ನಗುತ್ತಾ ಇರುತ್ತಾರೆಂದು. ಅವರು

ಮಾತ್ರ ನಗುತ್ತಿದ್ದಾರೆ, ನಾವು ಮಾತ್ರ ಈಗ ಅಳುತ್ತಿದ್ದೇವೆ. ಆ ಪರಿಸ್ಥಿತಿ ಅವರಿಂದ ಉದ್ಭವವಾಗುತ್ತದೆಂದು ನಾನು ಆಶೆ ಪಟ್ಟಿದಿಲ್ಲ. ಏಕೆಂದರೆ, ನಿಮ್ಮ ಸರ್ಕಾರ ಬಂದಮೇಲೆ ಬಹಳ ಜನ ಸಹಕಾರ ಇಲಾಖೆಯ ಬಗ್ಗೆ ಬಹಳಷ್ಟು ಮಾತನಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಹೊಸ ಸಹಸ್ರಮಾನದಲ್ಲಿ ಸಹಕಾರಿಗಳನ್ನು ಕುರಿತು ಸಹಕಾರಿಗಳ ಒಂದು ಸಮಾವೇಶ ಮಾಡಿದ್ದರು. ಅದಕ್ಕೆ ಮಾನ್ಯ ಮಹಾರಾಷ್ಟ್ರದ ಮುಖ್ಯಮಂತ್ರಿಗಳೂ ಕೂಡ ಬಂದಿದ್ದರು. ಇದರ ಬಗ್ಗೆ ನಿಮಗೂ ಗೊತ್ತಿದೆ. ಮೂರು ವರ್ಷಗಳ ಹಿಂದೆಯೇ ತಾವು ಘೋಷಣೆಯನ್ನು ಮಾಡಿ ಸಹಕಾರಿ ಸಂಘಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲವೆಂದು ಹೇಳಿರುತ್ತೀರಿ. ಇನ್ನೊಂದು ಘೋಷಣೆಯನ್ನೂ ಕೂಡ ತಾವು ಮಾಡಿದ್ದೀರಿ. ಸಹಕಾರಿ ಸಂಘಗಳಿಗೆ ವ್ಯತಿರಿಕ್ತವಾಗತಕ್ಕಂಥ ಯಾವುದೇ ಕಾಯಿದೆಗಳನ್ನು ನಾವು ಜಾರಿಗೆ ತರುವುದಿಲ್ಲ ಎಂದು ಆದರೂ ಕೂಡ ನಿಮಗೆ ಗೊತ್ತಿದೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ 15 ದಿವಸಗಳಲ್ಲಿಯೇ ಬಿಲ್ ಇಂಟ್ರಡ್ಯೂಸ್ ಆಗಿಯೇ ಬಿಟ್ಟಿತು. ಆಗ ಇಲ್ಲಿ ಕುಳಿತಿರತಕ್ಕಂಥವರೆಲ್ಲಾ ಅದಕ್ಕೆ ವಿರೋಧ ವ್ಯಕ್ತಪಡಿಸಿತಿದರು. ಆದರೆ ಆಗ ನೀವೇನಾದರೂ ಸಚಿವರು ಆಗಿದ್ದರೆ ಅದನ್ನು ನೀವು ಒಪ್ಪಿಕೊಳ್ಳುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಆದರೆ ಆಗ ಒಪ್ಪಿಕೊಳ್ಳದೇ ಇರುವುದು; ಈಗ ಅದನ್ನು ಬೇರೆಯವರು ಮಾಡಿದ್ದನ್ನು ನೀವು ಪ್ರಹಾರ ಮಾಡಿದ್ದನ್ನು ನೋಡಿದರೆ ನನಗೆ ಬಹಳ ವ್ಯತಿರಿಕ್ತವೆನಿಸುತ್ತದೆ. ತಾವು ಸಹಕಾರಿಗಳಲ್ಲ. ತಮಗಂತೂ ಸಹಕಾರಿ ವಿಚಾರದಲ್ಲಿ ಇಷ್ಟವಿಲ್ಲವೆಂದು ನನಗನಿಸುತ್ತದೆ. ಅಲ್ಲಿ ಬಹುತೇಕ ಎಜ್ಯುಕೇಶನ್ ಲಾಬಿಗೆ ತಾವು ಬಹಳ ಹಳಿಸಿರುತ್ತೀರೆಂದು, ನಮ್ಮನ್ನು ಹಳಿಸುವುದಕ್ಕೆ ಸಹಕಾರಿ ಖಾತೆಗೆ ತಮ್ಮನ್ನು ಕಳುಹಿಸಿದ್ದಾರೆಂದು ನಮಗೆ ಅನ್ನಿಸುತ್ತದೆ. ಅದರಲ್ಲಿ ವಿಶೇಷವಾಗಿ ನಿಮ್ಮ ಇಲಾಖೆಯಲ್ಲಿ ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಾನು ನಿಂದನೆ ಮಾಡುತ್ತೇನೆಂದು ಅಲ್ಲ, ಇವತ್ತು ನಾನು ನಿಜವಾಗಲೂ ಹೊಗಳುತ್ತೇನೆ. ಒಬ್ಬ ಆನೆಸ್ಟ್ ರಿಜಿಸ್ಟ್ರಾರ್ ಇದ್ದಾರೆ, ಒಬ್ಬ ಆನೆಸ್ಟ್ ಸೆಕ್ರೆಟರಿಗಳಿದ್ದಾರೆ, ಅವರಿಂದ ಇಂಥ ಹೇಳಿಕೆಗಳು ಬರುವುದನ್ನು ನಾನು ಎಂದೂ ಅಪೇಕ್ಷೆಪಟ್ಟಿರಲಿಲ್ಲ. ನೀವು ಮೊದಲನೆಯ ಪ್ಯಾರಾದಲ್ಲಿ ಒಂದನ್ನು ಹೇಳಿರುತ್ತೀರಿ, ಏನೆಂದರೆ, "ದಿನಾಂಕ:26-2-2000ದಂದು ಚುನಾವಣೆಯ ವೇಳಾಪಟ್ಟಿಯನ್ನು ನಿಗಧಿಪಡಿಸಿತ್ತು, ಅಂದರೆ ಎರಡು ವರ್ಷದ ಹಿಂದೆಯೇ ನಾವು ಚುನಾವಣೆಯನ್ನು ಮಾಡುವುದಕ್ಕೆ ಸಿದ್ಧರಿದ್ದೇವೆಂದು ವೇಳಾಪಟ್ಟಿಯನ್ನು ಪ್ರಕಟಣೆಯನ್ನು ಮಾಡಿದ್ದೆವು, ಚುನಾವಣೆಯನ್ನೂ ಕೂಡ ನಡೆಸುವುದಕ್ಕೆ ಆದೇಶವನ್ನು ನಾವು ಹೊರಡಿಸಿದ್ದೆವು. ಆದರೆ ದುರ್ದೈವವಶಾತ್ ನಿಮಗೆ ಗೊತ್ತಿರಬಹುದು, ಈ ಡಿ.ಸಿ.ಸಿ. ಬ್ಯಾಂಕುಗಳನ್ನು ವಿಭಜನೆ ಮಾಡುವುದರಿಂದ ಆಗತಕ್ಕಂಥ ಅನಾಹುತಗಳ ಬಗ್ಗೆ ಯಾರೂ ಕೂಡ ಮುಂದಾಲೋಚನೆಯನ್ನು ಮಾಡಿರಲಿಲ್ಲ. ಈ ಡಿ.ಸಿ.ಸಿ. ಬ್ಯಾಂಕುಗಳನ್ನು ವಿಭಜನೆಯನ್ನು ಮಾಡತಕ್ಕಂಥದ್ದು ಹಿಂದೆ ನಮ್ಮ ಸರ್ಕಾರ ಇದ್ದಾಗಲೇ ಆಗಿರುವುದು ಪ್ರಾಯಶಃ ನಮ್ಮ ಸಹಕಾರ ಸಚಿವರು ಸುಂದರ್‌ವರ್ಧನ್ ಕಮಿಟಿ ಎಂದು ನೇಮಕಾತಿಯನ್ನು ಮಾಡಿ, ಆ ಕಮಿಟಿಯ ವರದಿ ಆಧಾರದ ಮೇಲೆ ಡಿ.ಸಿ.ಸಿ. ಬ್ಯಾಂಕ್‌ಗಳನ್ನು ಒಡೆಯತಕ್ಕಂಥ ಪ್ರಕ್ರಿಯೆ ಈ ರಾಜ್ಯದಲ್ಲಿ ಪ್ರಾರಂಭವಾಯಿತು. ಅದರಲ್ಲಿ ಮೊದಲನೆಯದಾಗಿ ಅನಾಹುತಕ್ಕೆ ಒಳಗಾಗಿರುವ ಬ್ಯಾಂಕ್ ಅಂದರೆ ಡಿ.ಸಿ.ಸಿ. ಬ್ಯಾಂಕ್, ಚಿತ್ರದುರ್ಗ ಮತ್ತು ದಾವಣಗೆರೆ ಇವತ್ತು ಆ ಬ್ಯಾಂಕುಗಳ ಪರಿಸ್ಥಿತಿ ಏನಾಗಿದೆ? ಒಂದು ಕಡೆ ರಾಷ್ಟ್ರದಲ್ಲಿ ಬ್ಯಾಂಕ್‌ಗಳನ್ನು ಅಮಾಲ್ಗಮೇಷನ್ ಮಾಡತಕ್ಕಂಥ ಕಮಿಟಿಗಳನ್ನು ನೇಮಕಾತಿ ಮಾಡಿದ್ದಾರೆ. ಕಪೂರ್ ಕಮಿಟಿ ರಿಪೋರ್ಟ್ ಇದೆ, ವಿ.ಕೆ. ಪಾಟೀಲ್ ಕಮಿಟಿ ರಿಪೋರ್ಟ್

ಇದೆ, ಅವುಗಳು ಏನು ಹೇಳುತ್ತವೆ ಎಂದರೆ ರಾಷ್ಟ್ರೀಕೃತ ಬ್ಯಾಂಕ್‌ಗಳವರು ವೀಕ್ ಬ್ಯಾಂಕ್‌ಗಳನ್ನು ಸ್ಟ್ರಾಂಗ್ ಬ್ಯಾಂಕ್‌ಗಳಿಗೆ ಒಯ್ದು ಮರ್ಜ್ ಮಾಡುತ್ತಾರೆ. ಆದರೆ ನಿಮ್ಮ ಸರ್ಕಾರ ಏನು ಮಾಡಿದೆ ಎಂದರೆ, ಸ್ಟ್ರಾಂಗ್ ಬ್ಯಾಂಕ್‌ಗಳನ್ನು ಒಡೆದು ವೀಕ್ ಬ್ಯಾಂಕ್‌ಗಳನ್ನಾಗಿ ಮಾಡುತ್ತದೆ. ಇದು ವಿಪರ್ಯಾಸ! ನಾನು ನಿಮಗೆ ಹೇಳಬೇಕೆಂದರೆ, ನಾವು ಕೂಡ ಒಂದು ಸಂದರ್ಭದಲ್ಲಿ ವಿಭಜನೆಯ ಸಲುವಾಗಿ ಒಪ್ಪಿಕೊಂಡಿದ್ದೆವು. ಕಾರಣ ಇಷ್ಟೇ? ಹಿಂದೆ ಬಹಳಷ್ಟು ಜನ ಆಡಳಿತ ಪಕ್ಷದ ಸಚಿವರು, ಶಾಸಕರು, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆ ಬೇರೆಯಾದ ಮೇಲೆ ಪ್ರತ್ಯೇಕವಾಗಿರುವುದರಿಂದ ಒಡೆದು ಕೊಡಿ ಎಂದು ಹೇಳಿ ಏನೋ ಒಂದು ಆವೇಶದಲ್ಲಿ ನಾವು ಒಪ್ಪಿಕೊಂಡಿದ್ದೆವು. ಆಮೇಲೆ ಅದರ ಒಂದು ಪರಿಣಾಮ ಏನು ಏನಾಗಿದೆ? ಚಿತ್ರದುರ್ಗ ಹಾಗೂ ದಾವಣಗೆರೆ ಬ್ಯಾಂಕಿನಲ್ಲಿ ಏನಾಗಿದೆ? ಆ ಸುಂದರ್‌ವರ್ಧನ್ ಕಮಿಟಿಯವರು ದಾರವಾಡ ಡಿ.ಸಿ.ಸಿ. ಬ್ಯಾಂಕ್ ಕೂಡ ವಿಭಜನೆಗೆ ಫೀಸಿಬಿಲಿಟಿ ಇದೆ ಎಂದು ವರದಿಯನ್ನು ಕೊಟ್ಟಿದ್ದರು. ಇದನ್ನಾದರೂ ನೀವು ಒಪ್ಪುತ್ತಿರೋ ಇಲ್ಲವೋ? ಯಾವ ಬ್ಯಾಂಕ್‌ನಲ್ಲಿ ಠೇವಣಿದಾರರಿಗೆ ದುಡ್ಡು ಕೊಡಲಿಕ್ಕೆ ರೊಕ್ಕವಿಲ್ಲ ಆ ಬ್ಯಾಂಕ್ ಫೀಸಿಬಿಲಿಟಿ ಇದೆ ಎಂದು ಬೈಫರ್‌ಕೇಶನ್‌ಗೆ ಸುಂದರ್‌ವರ್ಧನ್ ಕಮಿಟಿ ರಿಪೋರ್ಟ್ ಕೊಟ್ಟರೆ ಬರತಕ್ಕಂಥ ದಿವಸಗಳಲ್ಲಿ ರಾಜ್ಯದಲ್ಲಿರತಕ್ಕಂಥ ಡಿ.ಸಿ.ಸಿ. ಬ್ಯಾಂಕ್‌ಗಳ ಹಣೇಬರಹ ಏನಾಗುತ್ತದೆ? ಇದರ ಬಗ್ಗೆ ನೀವು ಒಂದು ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ನಾನು ಇದನ್ನು ಡಿಮಾಂಡ್ ಮೇಲೆ ಮಾತನಾಡಬೇಕೆಂದು ಇದ್ದೆ, ಆದರೂ ಕೂಡ ಈ ರೆಫರೆನ್ಸ್ ಅಲ್ಲಿಂದ ಸ್ಟಾರ್ಟ್ ಆಗುತ್ತದೆ. ಉಚ್ಚನ್ಯಾಯಲಯಕ್ಕೆ ಆಡಳಿತ ಮಂಡಳಿಯು ಯಾವ ಕಾರಣಕ್ಕಾಗಿ ಹೋಯಿತು ಎಂದರೆ,

5.40 ಪಿಎಂ

ಈ ಸುಂದರ್‌ವರ್ಧನ್ ಕಮಿಟಿಗೆ ಹಿಂದು ಇಲ್ಲ ಮುಂದು ಇಲ್ಲ, ಆ ವರ್ಷದಲ್ಲಿ ಆ ಬ್ಯಾಂಕಿನ ವರ್ಕಿಂಗ್ ಕ್ಯಾಪಿಟಲ್ ಅಥವಾ ಡಿಪಾಸಿಟ್ಸ್ ಫೀಸಿಬಿಲಿಟಿ ಇದ್ದರೆ Just he go on recommending for bifurcation? ಸುದೈವದಿಂದ ಇನ್ನು ಬಹಳಷ್ಟು ಬ್ಯಾಂಕುಗಳು ಬೈಫರ್‌ಕೇಷನ್ ಆಗಿಲ್ಲ. ಉದಾಹರಣೆಗೆ ಹೇಳುವುದಾದರೆ ಉಡುಪಿ ಜಿಲ್ಲಾ ಬ್ಯಾಂಕ್, ರಾಯಚೂರು ಡಿಸಿಸಿ ಬ್ಯಾಂಕ್ ಅವುಗಳನ್ನು ಏನಾದರೂ ಈ ಸುದಂರ್‌ವರ್ಧನ್ ಕಮಿಟಿಯನ್ನು ಹಿಡಿತುಕೊಂಡು ನೀವು ಬೈಫರ್‌ಕೇಟ್ ಮಾಡಿದರೆ ಇಡೀ ರಾಜ್ಯದಲ್ಲಿರತಕ್ಕಂತಹ ಬ್ಯಾಂಕುಗಳ ಮೇಲೆ ಅದರ ಪರಿಣಾಮವಾಗುತ್ತದೆ. ನೀವೇ ಒಂದು ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದೀರಿ ಬಹುಶಃ ಅದು ನಿಮಗೆ ನೆನಪಿರಬಹುದು. ಈ ಸಹಕಾರಿಗಳ ತಾಯಿಬೇರು ಯಾವುದು ಎಂದರೆ ಈ ಡಿಸಿಸಿ ಬ್ಯಾಂಕ್ ಎಂದು ತಾವೇ ಒಂದು ಕಡೆ ಹೇಳಿದ್ದೀರಿ. ಆ ತಾಯಿ ಬೇರನ್ನು ತಾವು ಬಂದ ಮೇಲೆ ಒಂದೊಂದಾಗಿ ಕತ್ತರಿಸುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಇದರ ಬಗ್ಗೆ ನನಗೂ ಸಹ ಗೊತ್ತಿದೆ, ಈ ಅನಾಹುತವು ನಿಮ್ಮ ಕೈಯಿಂದ ಆಗಿಲ್ಲವೆಂದು ನನಗೂ ಸಹ ಗೊತ್ತಿದೆ. ಇದರ ಬಗ್ಗೆ ತಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೀರೆಂದು ನನಗನಿಸುತ್ತದೆ, ಇದು ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಅಥವಾ ಜಿಲ್ಲೆಯ ಶಾಸಕರುಗಳ ಒತ್ತಡದ ಮೇರೆಗೆ ಆಗಿದೆ ಎಂದು ನಾನೂ ಸಹ ಭಾವಿಸುತ್ತೇನೆ. ಆದರೆ ಇದಕ್ಕೆ ನೀವು ಪಾರ್ಟಿಯಾಗಬಾರದಾಗಿತ್ತು, ಏಕೆಂದರೆ ತಾವು ಯಾವಾಗಲೂ ನಿರ್ಧಿಷ್ಟವಾಗಿ ನೇರವಾಗಿ ಮಾತನಾಡತಕ್ಕಂತಹ ಒಬ್ಬ ಸಚಿವರು ಇಂತಹ ಅನಾಹುತಕ್ಕೆ ಈಡಾಗಿರುವುದು ಬಹಳ ಶೋಚನೀಯ.

ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಬ್ಯಾಂಕ್ 1919ರಲ್ಲಿ ಸ್ಥಾಪನೆಯಾಗಿದೆ. ಕೇವಲ 35 ಸಾವಿರ ರೂಪಾಯಿಗಳ ಷೇರು, 50 ಸಾವಿರ ರೂಪಾಯಿಗಳ ಡೆಪಾಸಿಟ್‌ನಿಂದ ಇದು ಪ್ರಾರಂಭವಾಗಿರತಕ್ಕಂತಹ ಬ್ಯಾಂಕು ಇವತ್ತು 600 ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಇದೆ. ನೀವು ಇದನ್ನು ಕಟ್ಟಲಿಕ್ಕೆ ಎಷ್ಟು ಜನರ ಪರಿಶ್ರಮ ಅದರ ಹಿಂದೆ ಇತ್ತು. ಅದು ಯಾವ ಮಟ್ಟಕ್ಕೆ ಇವತ್ತು ಬೆಳೆದು ಬಂದಿದೆ. ಇಂತಹವನ್ನು ನೋಡಿ ನೀವು ಏನಾದರೂ ಒಂದು ಶಹಭಾಷಗಿರಿಯನ್ನು ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಆದರೆ ದುರ್ದೈವದಿಂದ ತಾವು ಅದನ್ನು ಎರಡು ಮಾಡಿದ್ದೀರಿ. ಇವತ್ತು ಅದರ ಬಗ್ಗೆ ನಿಮಗೂ ಸಹ ಗೊತ್ತಿದೆ, ಇಂಟರೆಸ್ಟ್ ಕನ್‌ಸೆಷನ್ ವೇವ್ ಆಫ್ ಮಾಡುತ್ತೇವೆಂದು ನೀವೇ ಒಂದು ನೀತಿಯನ್ನು ಘೋಷಣೆ ಮಾಡಿದ್ದೀರಿ. ಈಗ ನೀವು ರಾಜ್ಯದಲ್ಲಿ 127 ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡಬೇಕು. ಅದನ್ನು ಡಿಸೆಂಬರ್ ಮತ್ತು ಮಾರ್ಚಿಯೊಳಗೆ 2 ಕಂತುಗಳಲ್ಲಿ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದುವರೆವಿಗೂ ಯಾವುದೇ ಡಿಸಿಸಿ ಬ್ಯಾಂಕುಗಳಿಗೆ 10 ಪೈಸೆ ಸರ್ಕಾರದಿಂದ ಬಂದಿರುವುದಿಲ್ಲ. ನೀವು ಶಾಸಕರುಗಳ ಅನುದಾನದಲ್ಲಿ ಈ ರಾಜ್ಯದ ರೈತರ ಬಡ್ಡಿ ಮನ್ನಾ ಮಾಡಲಿಕ್ಕೆ ನಮ್ಮ ಹಣವನ್ನು ಮುರಿದುಕೊಂಡಿದ್ದೀರಿ. ಅದನ್ನಾದರೂ ನೀವು ಕೊಟ್ಟಿದ್ದರೆ ಒಂದು ಸ್ವಲ್ಪ ಸಂತೋಷವಾಗುತ್ತಿತ್ತು. ಕೇಂದ್ರ ಸರ್ಕಾರವು 20 ಪರ್ಸೆಂಟ್ ಹಣವನ್ನು ಕೊಡುತ್ತೇನೆಂದು ಹೇಳಿದ್ದರು; ಅದನ್ನಾದರೂ ಕೊಟ್ಟಿದ್ದರೆ ನಮಗೆ ಸಂತೋಷವಾಗುತ್ತಿತ್ತು. ಅಕಸ್ಮಾತ್ ಈ ಬಡ್ಡಿ ಹಣವು ಮಾರ್ಚಿ 31ರೊಳಗೆ ಬರದೇ ಹೋದರೆ ಇಡೀ ರಾಜ್ಯದಲ್ಲಿರತಕ್ಕಂತಹ 14 ಡಿಸಿಸಿ ಬ್ಯಾಂಕುಗಳು ಹಾನಿಯಲ್ಲಿ ಬರುತ್ತವೆ. ಇದರಲ್ಲಿ 11 ಡಿಸಿಸಿ ಬ್ಯಾಂಕುಗಳು ಬಿ.ಆರ್.ಆ್ಯಕ್ಟ್ ಸೆಕ್ಷನ್ 11ನ್ನು ಕಂಪ್ಲೈ ಮಾಡುತ್ತಿಲ್ಲವೆಂದು ತಮಗೆ ಗೊತ್ತಿದೆ; ನಮ್ಮ ಡಿಸಿಸಿ ಬ್ಯಾಂಕೂ ಕೂಡ ಸೆಕ್ಷನ್ 11 ರಿಂದ ಹೊರಬರಬೇಕಾದರೆ 11 ವರ್ಷಗಳ ಕಾಲ ನಾವು ಪ್ರಯತ್ನವನ್ನು ಮಾಡಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ಬ್ಯಾಂಕುಗಳನ್ನು, ಇವತ್ತು ಒಂದು ಕಡೆ ಆರ್‌ಬಿಐಯನ್ನು ನಿಲ್ಲಿಸತಕ್ಕಂತಹ ಪ್ರಯತ್ನ ಮಾಡತಕ್ಕಂತಹ ಸಂದರ್ಭದಲ್ಲಿ ನೀವು ಇಂತಹ ಹೊಸ ಹೊಸ ನೀತಿಯನ್ನು ತರುವುದರ ಬದಲು ಆಡಳಿತದಲ್ಲಿ ಸ್ವಲ್ಪಮಟ್ಟಿಗಾದರೂ ಪಾರದರ್ಶಕತೆಯನ್ನು ತಾವು ಇಟ್ಟುಕೊಂಡು ಬಂದಿದ್ದರೆ ಪ್ರಾಯಶಃ ಈ ಡಿಸಿಸಿ ಬ್ಯಾಂಕುಗಳಿಗೆ ಏನು ಅನಾಹುತ ನಿಮ್ಮ ಕಾಲದಲ್ಲಿ ಆಗುತ್ತಿದೆ, ಇದು ಸ್ವಲ್ಪಮಟ್ಟಿಗೆ ನಿಲ್ಲುತ್ತಿತ್ತೇನೋ ಎಂದು ನನಗನ್ನಿಸುತ್ತದೆ. ನಿಮ್ಮ ಬಗ್ಗೆ ನನಗೆ ಬಹಳ ಅಭಿಮಾನವಿತ್ತು, ಆದರೆ ಈ ಕೋ-ಆಪರೇಟೀವ್ ಆ್ಯಕ್ಟ್‌ನ್ನು 2000ದಲ್ಲಿ ಅಮೆಂಡ್‌ಮೆಂಟ್ ಮಾಡಿದ್ದನ್ನು ತೆಗೆದುಕೊಂಡು ಅದರ ಆಧಾರದ ಮೇಲೆ ಒಂದೊಂದು ಒಂದೊಂದಾಗಿ ತಾವು ಕೆಡವುತ್ತೀರೇನೋ ಎಂಬ ಭಯ ನಮಗೆ ಇದೆ. ಈ ಸಬೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಸ್ವಲ್ಪ ನನ್ನ ಮನಸ್ಸಿಗೆ ನೋವಾಗಿಯೇ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಆಡಳಿತ ಮಂಡಳಿಯ ಚುನಾವಣೆಯನ್ನು ಜರುಗಿಸುವುದಕ್ಕೆ ಆಡಳಿತ ಮಂಡಳಿಯು ವಿಫಲವಾಯಿತು ಅದಕ್ಕೆ ನಾವು ಆಡಳಿತಾಧಿಕಾರಿಯನ್ನು ನೇಮಿಸಿದ್ದೇವೆ ಎಂದು ಹೇಳಿದ್ದೀರಿ. ನಾನು ಉಚ್ಚ ನ್ಯಾಯಾಲಯದ ರಿಟ್ ದಾವೆಗಳನ್ನು ಕೂಡ ನಾನು ಮಾನ್ಯ ಸಚಿವರಿಗೆ ಕೊಡುತ್ತೇನೆ. ಅವುಗಳನ್ನು ತಾವು ಓದಬಹುದು, ಅಕಸ್ಮಾತ್ ಏನಾದರೂ ಆಡಳಿತ ಮಂಡಳಿಯು ಚುನಾವಣೆಯನ್ನು ನಡೆಸುವುದಕ್ಕೆ ಹಿಂದೆ ಬಿದ್ದಿದ್ದರೆ ನೀವು ಈ ಕ್ರಮವನ್ನು ಕೈಗೊಂಡಿರುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಅಕಸ್ಮಾತ್ ಇದರಲ್ಲಿ ನಿಮ್ಮ ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರ ಮೇಲೆ ತಾವು ಏನು

ಕಾನೂನಿನ ಕ್ರಮವನ್ನು ಕೈಗೊಳ್ಳುತ್ತೀರಿ ಎಂಬುದನ್ನು ತಾವು ನನಗೆ ಹೇಳಬೇಕು. ನಾನು ವಿಭಜನೆಯ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ, ನಂತರ ನಾನು ಮಾತನಾಡುತ್ತೇನೆ. ಏಕೆಂದರೆ ಬಾಗಲಕೋಟೆ ಡಿಸಿಸಿ ಬ್ಯಾಂಕ್ ವಿಭಜನೆ ಆಗಬೇಕೆಂದು ಹೇಳುತ್ತಿದ್ದರು. ನಾವು ವಿಭಜನೆಯನ್ನು ಮಾಡಿದೆವು. ಆದರೆ ಬಿಜಾಪುರ ಡಿಸಿಸಿ ಬ್ಯಾಂಕ್‌ಗೆ ಆಡಳಿತ ಅಧಿಕಾರಿಯನ್ನು ನೇಮಿಸುವುದಕ್ಕಿಂತ ಪೂರ್ವದಲ್ಲಿಯೇ ಆ ರಿರ್ಟನಿಂಗ್ ಆಫೀಸರ್‌ನ್ನು ತಾವು ನೇಮಿಸಿದ್ದೀರಿ. ಚುನಾವಣೆಯನ್ನು ಜಾರಿ ಮಾಡಿದ್ದೀರಿ, ಚುನಾವಣೆಯು ಪ್ರಾರಂಭವಾಗಿದೆ, ನೋಟೀಸ್ ಮತ್ತು ನಾಮಿನೇಷನ್ ಫೈಲ್ ಆಗಿದೆ, 28ನೇ ತಾರೀಖಿನೊಳಗಾಗಿ ಚುನಾವಣೆಯು ಮುಗಿಯಬೇಕಾಗಿತ್ತು, ಆದರೆ ನೀವು ಏನು ಮಾಡಿದ್ದೀರೆಂದರೆ, ಆ ರಿರ್ಟನಿಂಗ್ ಆಫೀಸರನ್ನು ನೇಮಿಸಿ ಚುನಾವಣೆಯ ಪ್ರಕ್ರಿಯೆಯು ಪ್ರಾರಂಭವಾದ ಮೇಲೆ ಅಡ್ಮಿನಿಸ್ಟ್ರೇಟರ್‌ನ್ನು ಅಪಾಯಿಂಟ್ ಮಾಡುತ್ತೀರಿ, 16ನೇ ತಾರೀಖು ಫೆಬ್ರವರಿಯವರೆಗೆ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡುತ್ತೀರಿ, 17ನೇ ತಾರೀಖಿಗೆ ಅವನು ಚಾರ್ಜ್ ರಿಸೀವ್ ಮಾಡುತ್ತಾನೆ, 18ನೇ ತಾರೀಖಿಗೆ ನಿಮ್ಮ ಸರ್ಕಾರಕ್ಕೆ ನೀವು ಹೇಳಿದ ರೀತಿಯಲ್ಲಿ ಒಂದು ವರದಿಯನ್ನು ಕೊಡುತ್ತಾನೆ. ಪಾಪಾ ಅವನು ಬೆಳಗಾಂನಿಂದ ಬಂದಿದ್ದ 17ನೇ ತಾರೀಖು. ಆತನು 18ನೇ ತಾರೀಖಿಗೆ ಚಾರ್ಜ್‌ನ್ನು ತೆಗೆದುಕೊಂಡ, ಆತನು ನಿಮ್ಮ ಒತ್ತಾಯದ ಮೇರೆಗೆ ಜಿಲ್ಲೆಯಲ್ಲಿ ಈಗ ಬರಗಾಲವಿದೆ ಆದ್ದರಿಂದ ಈ ಚುನಾವಣೆಯನ್ನು ಮುಂದೂಡಬೇಕೆಂದು ವರದಿಯನ್ನು ಕೊಡುತ್ತಾನೆ. ನಿಮ್ಮ ಆದೇಶದ ಮೇರೆಗೆ ಆ ವರದಿಯನ್ನು ಕೊಟ್ಟಿದ್ದಾನೆಂದು ನಾನು ನೇರವಾಗಿ ಆಪಾದನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ನೀವು ಚುನಾವಣೆಯಲ್ಲಿ ಎಲ್ಲಿ ಸೋಲುತ್ತೀರೋ ಎನ್ನುವ ಭಯ ನಿಮಗೆ ಇರಬಹುದು ಎಂದು ನನಗನ್ನಿಸುತ್ತದೆ. ಸೋಲು ಮತ್ತು ಗೆಲುವು ಇಬ್ಬರಿಗೂ ಇದ್ದೇ ಇರುತ್ತದೆ. ಆದರೆ ಸೋಲು ಮತ್ತು ಗೆಲುವನ್ನು ಪ್ರಾಮುಖ್ಯವಾಗಿ ಇಟ್ಟುಕೊಳ್ಳದೆ ನೀವು ಏನಾದರೂ ಚುನಾವಣೆಯನ್ನು ಜರುಗಿಸಿದ್ದರೆ ಈ ಸರ್ಕಾರಕ್ಕೆ ಈ ಅಪಕೀರ್ತಿಯು ಬರುತ್ತಿರಲಿಲ್ಲ.ನಿಮ್ಮ ಮುಖಾಂತರ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಯಾವ ಆಡಳಿತಾಧಿಕಾರಿ ಜಿಲ್ಲೆಯಲ್ಲಿ ಬರಗಾಲವಿದೆ ಎಂದು ಹೇಳುತ್ತಿದ್ದಾನೆ. ಅದೇ ಆಡಳಿತಾಧಿಕಾರಿಯು ಜಿಲ್ಲೆಯಲ್ಲಿ 140 ಸೊಸೈಟಿಗಳಿಗೆ ಚುನಾವಣೆಯನ್ನು ಜಾರಿಮಾಡುತ್ತಾನೆ. 3 ಸಕ್ಕರೆ ಕಾರ್ಖಾನೆಗಳಿಗೆ ಚುನಾವಣೆಯನ್ನು ಜಾರಿ ಮಾಡುತ್ತಾನೆ, ಆದರೆ ಇವು ಯಾವುದಕ್ಕೂ ಕೂಡ ಬರಗಾಲ ಬರುವುದಿಲ್ಲ. ಆದರೆ ನೇರವಾಗಿ ಡಿಸಿಸಿ ಬ್ಯಾಂಕುಗಳಿಗೆ ಚುನಾವಣೆ ಮಾಡುವಾಗ ಮಾತ್ರ ಬರಗಾಲ ಬರುತ್ತದೆಯೇ ಇದರ ಬಗ್ಗೆ ತಾವೇ ಹೇಳಬೇಕು, ನನಗೆ ಆಶ್ಚರ್ಯವಾಗುತ್ತದೆ, ಇಷ್ಟು ವ್ಯತಿರಿಕ್ತವಾಗಿ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯ ಆದೇಶ ಇಡುತ್ತಾ ಹೋದರೆ, ಭಾರಿ ದಿನಗಳಲ್ಲಿ ಸಹಕಾರಿ ಚಳುವಳಿ ನಿಮ್ಮ ಕೈಯಲ್ಲಿ ನಿರ್ನಾಮವಾಗುತ್ತದೆಂದು ನನಗನ್ನಿಸುತ್ತದೆ. ನಾನು ಇದರ ಬಗ್ಗೆ ವಿತ್ ರೆಕಾರ್ಡ್ಸ್ ತಮಗೆ ಕೊಡುತ್ತೇನೆ, ನಾನು ಈ ಬಗ್ಗೆ ಮುಚ್ಚುಮರೆ ಮಾಡುವುದಿಲ್ಲ. ಈ ಉತ್ತರ ತಮ್ಮದು ಏನು ಇದೆ, ಇದರ ಬಗ್ಗೆ ನಾನೇನಾದರೂ ಕೋರ್ಟಿನಲ್ಲಿ ಚಾಲೆಂಡ್ ಮಾಡಿದರೆ ಖಂಡಿತವಾಗಿಯೂ ಇದರಲ್ಲಿ ಅಧಿಕಾರಿಗಳು ಸಿಕ್ಕಿಬೀಳುತ್ತಾರೆಂದು, ತಾವು ಯಾರೂ ಕೂಡ ಸಿಕ್ಕಿಬೀಳುವುದಿಲ್ಲವೆಂದು ನಾನು ಹೇಳುತ್ತೇನೆ. ನನಗೆ ಅದು ಬೇಡವಾಗಿದೆ, ಏಕೆಂದರೆ ಅಧಿಕಾರಿಗಳ ಜೊತೆ ಕಾಂಪಿಟೇಷನ್ ಮಾಡುವುದು ನನಗೂ ಅರ್ಥವಿಲ್ಲ. ಏಕೆಂದರೆ ಅವರನ್ನು ತಪ್ಪುದಾರಿಗೆ ಎಳೆಯುವಂತಹವರು ತಾವು ಆಗಬಾರದು ಮತ್ತು ತಮ್ಮ ಇಲಾಖೆಯು ಆಗಬಾರದು. ನನ್ನ ಹತ್ತಿರ ಕೋರ್ಟ್ ಜಡ್ಜ್‌ಮೆಂಟ್ ಕಾಫಿ ಇದೆ, ನೀವು ಹಾಕಿರುವಂತಹ ರಿಟ್ ಬಗ್ಗೆ ನಿಮಗೆ

ಗೊತ್ತಿದೆ, ಅದು ಮೊನ್ನೆ ತಾನೇ ಸೆಟ್‌ಅಸ್ಸೈಡ್ ಆಗಿದೆ, ಅದು ಆಗಿ 15 ದಿವಸಗಳ ಕಾಲ ನಿಮಗೆ ಟೈಮ್‌ನ್ನು ಕೊಟ್ಟಿದ್ದಾರೆ, ನಿಮಗೆ ಎಲ್ಲಿ ಚುನಾವಣೆಯ ಪ್ರಕ್ರಿಯೆ ನಿಂತುಹೋಗಿದೆ ಅದನ್ನು ಪ್ರಾರಂಭಮಾಡಬೇಕೆಂದು ಹೇಳಿದ್ದಾರೆ. ಇವತ್ತಿನವರೆವಿಗೂ ಅದಕ್ಕೆ ತಮ್ಮಿಂದ ಉತ್ತರವಿಲ್ಲ, ಈ ತರಹ ಅಧೋಗತಿಗೆ ಇಳಿದಿದೆ. ಇವತ್ತು ತಾವು ನ್ಯಾಯಾಲಯವನ್ನು ಕೇರ್ ಮಾಡುವುದಿಲ್ಲ, ಇದ್ದಂತಹ ಕಾಯಿದೆಯ ಚೌಕಟ್ಟನ್ನು ಸಹ ತಾವು ಪರಿಪಾಲನೆ ಮಾಡುವುದಿಲ್ಲ, ನಿಮ್ಮ ಕೈಯಿಂದ ಈ ತರಹ ಅನಾಹುತವಾಗುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ರೀತಿ ಅನಾಹುತವಾಗುವುದನ್ನು ಇನ್ನುಮೇಲೆ ತಾವು ನಿಲ್ಲಿಸುತ್ತೀರೇನೋ ಎನ್ನುವಂತಹ ಆಸೆ ನನಗೆ ಇದೆ. ಏಕೆಂದರೆ, ಈ ಸಹಕಾರಿ ಚಳುವಳಿ ಏನೇ ಆಗಲಿ ಒಂದೊಂದು ಜಿಲ್ಲೆಯಲ್ಲಿ ಮಾತ್ರ ಉಳಿದಿದೆ. ಇಡೀ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿ ಅದಕ್ಕೊಂದು ಅನಾಹುತ ಬಂದೊದಗಿದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಅಲ್ಲಲ್ಲಿ ಯಾರ್‍ಯಾರೋ ಸ್ವಲ್ಪ ಪ್ರಯತ್ನವನ್ನು ಮಾಡಿ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿ ಸ್ವಲ್ಪ ಮಟ್ಟಿಗೆ ಉಳಿದಿದೆ. ಯಾವ ಬ್ಯಾಂಕುಗಳು ಸೆಕ್ಷನ್-11ರಿಂದ ಹೊರಬಂದು ಸತತವಾಗಿ 5 ರಿಂದ 7 ವರ್ಷಗಳ ಕಾಲ ಲಾಭ ಮಾಡುತ್ತಾ ಬಂದಿದೆ. ಅಷ್ಟೇ ಅಲ್ಲ ಇಡೀ ರಾಷ್ಟ್ರದಲ್ಲಿ ಅತ್ಯುತ್ತಮ ಬ್ಯಾಂಕ್ ಆಗಿ ನಬಾರ್ಡ್‌ನಿಂದ ಆವಾರ್ಡ್‌ನ್ನು ತೆಗೆದುಕೊಂಡಿದೆ. ಇಡೀ ರಾಷ್ಟ್ರದಲ್ಲಿ ಯಾರೂ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ಕೊಡಲಿಲ್ಲ. ಅದರಲ್ಲಿಯೂ ಕರ್ನಾಟಕ ರಾಜ್ಯದಲ್ಲಿ ಕೇವಲ ಬಿಜಾಪುರ ಡಿಸಿಸಿ ಬ್ಯಾಂಕ್ 1 ಲಕ್ಷದ 20 ಸಾವಿರ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ಕೊಟ್ಟು ಅದು ಹೆಗ್ಗಳಿಕೆಗೆ ಪಾತ್ರವಾಗಿದೆ. ಅಂತಹ ಬ್ಯಾಂಕ್‌ಗೆ ಇಂತಹ ಅನಾಹುತವನ್ನು ತರುವಂತಹ ದಿವಸ ಬರುತ್ತದೆ ಎಂದೂ ನಾನು ಭಾವಿಸಿರಲಿಲ್ಲ. ಆಟ್‌ಲೀಸ್ಟ್ ನಾವು ಬೇಡವಾಗಿದ್ದರೆ ನಿಮಗೆ ಬೇರೆಯವರನ್ನು ಕೂರಿಸಿವುದು. ಚುನಾವಣೆ ಪ್ರಕ್ರಿಯೆಯಿಂದ ಬಂದಿರತಕ್ಕಂತಹ ವ್ಯಕ್ತಿಗಳು ಅಧಿಕಾರಕ್ಕೆ ಬಂದರೆ ಆ ಸಂಸ್ಥೆಯ ಬಗ್ಗೆ ಸ್ವಲ್ಪ ಕಳಕಳಿ ಇರುತ್ತದೆ. ನಿಮ್ಮ ಸರ್ಕಾರದ ಷೇರು ಅದರಲ್ಲಿ ಎಷ್ಟು ಇದೆ? 600 ಕೋಟಿ ರೂಪಾಯಿಗಳಲ್ಲಿ ಸರ್ಕಾರದ ಷೇರು ಕೇವಲ 130 ಲಕ್ಷ ರೂ ಇರುತ್ತದೆ. ಅದನ್ನು ಕೂಡ ನಾವು ಪುನಃ ವಾಪಸ್ಸು ಕೊಡುವುದಕ್ಕೆ ತಯಾರಿದ್ದೇವು. ನಾವು ಆ ರೀತಿಯಾಗಿ ಕೊಟ್ಟಿದ್ದರೆ ಪ್ರಾಯಶಃ ನಿಮ್ಮ ಅನಾಹುತವು ನಮಗೆ ಆಗುತ್ತಿರಲಿಲ್ಲ. ಏಕೆಂದರೆ, ಬೆಳಗಾಂ ಡಿಸಿಸಿ ಬ್ಯಾಂಕ್ ಯಾವುದೇ ಸರ್ಕಾರದ ಸಹಾಯವಿಲ್ಲದೆ ಇವತ್ತಿನವರೆವಿಗೂ ನಡೆದುಕೊಂಡು ಬಂದಿದೆ. ಅಂತಹದ್ದನ್ನು ನಾವು ಮಾಡಲಿಲ್ಲ, ಏಕೆಂದರೆ ಸರ್ಕಾರ ಮತ್ತು ಸಹಕಾರ ಎರಡೂ ಕೂಡಿರಲಿ ಎಂಬ ಭಾವನೆಯಿಂದ ನಾವು ಉಳಿಸಿಕೊಂಡು ಬಂದೆವು. ಆದರೆ ಇವತ್ತು ಬಿಜಾಪುರ ಡಿಸಿಸಿ ಬ್ಯಾಂಕ್‌ಗೆ ಅನಾಹುತವಾಯಿತು. ಇದರ ಬಗ್ಗೆ ನಾನು ಇನ್ನು ಬಹಳಷ್ಟು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅಲ್ಲಿ ನಾನು ಯಾವ ಯಾವ ಲೋಪದೋಷಗಳಾಗಿವೆ ಎಂಬುದಕ್ಕೆ ನಿಮ್ಮಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ನನಗೆ ನಿಮ್ಮ ಬಯೋಡಾಟವನ್ನು ಓದಿ ಬಹಳ ಕೆಟ್ಟದೆನಿಸಿತು. 'ಹೂ ಈಸ್ ಹೂ' ನಿನ್ನೆ ನಾನು ನೋಡಿದೆ, ಅದನ್ನು ನೋಡಿದಾಗ ನನಗೆ ನಿಮ್ಮ ಬಯೋಡಾಟ ಸಿಕ್ಕಿ ಬಹಳ ಕೆಟ್ಟದು ಎನಿಸಿತು.

Biodata reads like this:

"Born on 15th December 1949 in Adagur Village. Qualification: B.Sc., L.L.B. Advocate by profession". ನಿಮ್ಮ ಬಯೋಡಾಟದಲ್ಲಿ ಇನ್ನು ಮುಂದೆ

ಹೋಗಿ ಹೇಳುತ್ತಾರೆ. "Rendered free legal-aid to the poor and depressed classes of the society". ನಾನು ನಿಮ್ಮ ಲೀಗಲ್ ಏಡ್ ಸಲುವಾಗಿ ನಿಮ್ಮ ಹತ್ತಿರ ಬರಬೇಕಾಗಿದೆ! ಇವತ್ತು ನೀವು ಡಿಸಿಸಿ ಬ್ಯಾಂಕುಗಳಿಗೆ ನ್ಯಾಯವನ್ನು ಕೊಡುತ್ತಿಲ್ಲವೆಂದು ನನಗನಿಸುತ್ತದೆ. ಇಷ್ಟೆಲ್ಲಾ ಸಮಾಜಕ್ಕೆ ಕೊಟ್ಟಿದ್ದೀರಿ, ಸ್ವಲ್ಪ ದಯಮಾಡಿ ಈಗಲಾದರೂ ಇದನ್ನು ತಿದ್ದಿಕೊಳ್ಳುವುದಕ್ಕೆ ಒಂದು ಅವಕಾಶವಿದ್ದರೆ ಕೊಟ್ಟರೆ ಒಳ್ಳೆಯದು. ನಿಮಗೇನಾದರೂ ಮನಸ್ಸಿಗೆ ನೋವಾಗುತ್ತಿರಬಹುದು, ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ನೋವಾಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅವರಿಗೆ ನೋವಾಗಬೇಕಾಗಿತ್ತು. ಏಕೆಂದರೆ, ಅವರ ಬಾಯಿಯಿಂದಲೇ ಸಹಕಾರಿ ಚಳುವಳಿ ಬಗ್ಗೆ ಅನೇಕ ಒಳ್ಳೆಯ ಅಭಿಪ್ರಾಯಗಳು ವ್ಯಕ್ತವಾಗಿವೆ. ಈ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಮಾನ್ಯ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಮಹಾರಾಷ್ಟ್ರ ಮುಖ್ಯಮಂತ್ರಿಗಳು, ಒಂದು ಬೃಹತ್ ಸಮ್ಮೇಳನವನ್ನು ಮಾಡಿ ಸಹಕಾರಿ ಇಲಾಖೆಯ ಬಗ್ಗೆ, ಸಹಕಾರಿ ಚಳುವಳಿಯ ಬಗ್ಗೆ ಎಷ್ಟೊಂದು ಉತ್ಕೃಷ್ಟವಾಗಿ ಮಾತನಾಡಿರತಕ್ಕಂತಹ ವ್ಯಕ್ತಿಗಳು ಎಂದು ನನಗೆ ಅನ್ನಿಸುತ್ತದೆ. ಬಿಜಾಪುರ ಜಿಲ್ಲೆಯ ಒಂದು ಸಣ್ಣ ಡಿ.ಸಿ.ಸಿ. ಬ್ಯಾಂಕ್ ನೋಡುತ್ತೀರಿ, ರಾಜ್ಯದಲ್ಲಿರತಕ್ಕಂತಹ ಎಸ್.ಎಲ್.ಡಿ. ಬ್ಯಾಂಕ್ 91 ಕೋಟಿ ರೂಪಾಯಿಗಳ ಹಾನಿ ಮಾಡಿದೆ ಅದಕ್ಕೆ ಏನು ಮಾಡುತ್ತೀರಿ? ಅದನ್ನು ಹೇಳಿ. ಕೆ.ಎಸ್.ಎಫ್.ಸಿ. 350 ಕೋಟಿ ರೂಪಾಯಿಗಳಷ್ಟು ದಿವಾಳಿ ಮಾಡಿದೆ, ಅದರ ಕಡೆ ನಿಮ್ಮ ಲಕ್ಷ್ಯ ಇಲ್ಲ. ಕೆ.ಎಸ್.ಎಸ್.ಐ.ಡಿ. ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಶಂಕರರೆಡ್ಡಿಯವರು ಇಲ್ಲೇ ಇದ್ದಾರೆ. ಅವರನ್ನು ನಿಮಿತ್ತ ಮಾತ್ರಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರು ಐ.ಡಿ.ಬಿ.ಐ.ನ ಡಿಫಾಲ್ಟರ್ ಆಗಿದ್ದಾರೆ. ಆ ಕಡೆ ನೀವು ಲಕ್ಷ್ಯ ಕೊಡುತ್ತಿಲ್ಲ. ರಾಜ್ಯದಲ್ಲಿರುವ 11.ಡಿ.ಸಿ.ಸಿ. ಬ್ಯಾಂಕ್‌ಗಳು ಸೆಕ್ಷನ್ 11 ರಿಂದ ಇನ್ನೂ ಹೊರಕ್ಕೆ ಬಂದಿಲ್ಲ. ಅವುಗಳ ಕಡೆ ನೋಡಲಿಕ್ಕೆ ಹೋಗಿಲ್ಲ. ಯಾವುದು ಚೆನ್ನಾಗಿ ನಡೆದಿದೆ ಅದರ ಬೆನ್ನು ಹತ್ತಿಬಿಡುತ್ತೀರಿ. ನನಗೆ ಅನ್ನಿಸುತ್ತದೆ ಇನ್ನು ಮುಂದಾದರೂ ಸ್ವಲ್ಪ ಎಚ್ಚೆತ್ತುಕೊಂಡು, ಈಗ ಆಗಿರುವ ತಪ್ಪನ್ನು ತಿದ್ದಿಕೊಳ್ಳುವ ಬಗ್ಗೆ ಏನಾದರೂ ಭರವಸೆಯನ್ನು ಕೊಟ್ಟರೆ ಸ್ವಲ್ಪಮಟ್ಟಿಗೆ ನಮಗೆ ನೆಮ್ಮದಿ ಉಂಟಾಗುತ್ತದೆ. ಇಲ್ಲದಿದ್ದರೆ, ನಮ್ಮದೇ ಆದ ರೀತಿಯಲ್ಲಿ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ನಿಮಗೂ ಕೂಡ ಈ ಬಗ್ಗೆ ಗೊತ್ತಿದೆ. ನಾನು ಮಂದಿನ ಕಾಯ್ದೆ ಕಾನೂನುಗಳಿಗೆ ಹೋಗುವುದಿಲ್ಲ. ಅಲ್ಲಿ ಈಗಾಗಲೇ ವಾಕ್ಯೂಮ್ ಕ್ರಿಯೇಟ್ ಆಗಿದೆ. ನೀವು ಒಂದು ಕಡೆ ಹೇಳುತ್ತೀರಿ, this is a newly registered bank. ಎಂದು ಯಾವುದೇ ಒಂದು ಸಹಕಾರಿ ಸಂಸ್ಥೆ ತನ್ನ ಅಸ್ತಿತ್ವವನ್ನು ಕಳೆದುಕೊಂಡು, ಹೊಸ ಬ್ಯಾಂಕ್ ನೋಂದಣಿಯಾದ ನಂತರ within 30 days they have to call the general body meeting and they should hold the electin. ಎಂಬುದು ನಿಮಗೂ ಕೂಡ ಗೊತ್ತಿದೆ. ಈ ರೀತಿ ಕಾಯ್ದೆ ಇದ್ದಾಗ ಅಲ್ಲೊಬ್ಬ ಆಡಳಿತಾಧಿಕಾರಿಯನ್ನು ಕಾನೂನಿಗೆ ವಿರುದ್ಧವಾಗಿ ನೇಮಿಸುತ್ತೀರಿ. ನನಗನ್ನಿಸುತ್ತದೆ, ಇದು ಅಧಿಕಾರದ ಪರಮಾವಧಿಯನ್ನು ತಾವು ಉಪಯೋಗ ಮಾಡಿಕೊಂಡಿದ್ದೀರಿ. ದಯಮಾಡಿ ಇದಕ್ಕೆ ತಾವು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ(ವೇಮಗಲ್):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಎಸ್.ಪಾಟೀಲ್ ರವರು ಸವಿವರವಾಗಿ ನಡೆದಿರುವುದನ್ನೆಲ್ಲಾ ಹೇಳಿದ್ದಾರೆ. ಈ ಸರ್ಕಾರದಲ್ಲಿ ಯಾರಾದರೂ ಒಳ್ಳೆಯ ಕೆಲಸ ಮಾಡಿದ್ದರೆ, ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಅಥವಾ ಸರ್ಕಾರಗಳಲ್ಲಿ ಅವರಿಗೆ ಪ್ರಶಸ್ತಿಯನ್ನು ಕೊಡುತ್ತಾರೆ. ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರ

ಮಟ್ಟದ ಪ್ರಶಸ್ತಿಯನ್ನು ಕೊಡತಕ್ಕದ್ದು. ಇವೆಲ್ಲವನ್ನು ಮಾಡುತ್ತಾರೆ. ಈ ಬ್ಯಾಂಕೂ ಕೂಡ ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ಪಡೆದಿದೆ. ಇಡೀ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆದಿರತಕ್ಕಂತಹ ಈ ಬ್ಯಾಂಕಿಗೆ ಈ ರಾಜ್ಯ ಸರ್ಕಾರ ಕೊಟ್ಟಿರುವಂತಹ ಪ್ರಶಸ್ತಿ ಎಂದರೆ ಅಲ್ಲಿನ ಚುನಾಯಿತ ಪ್ರತಿನಿಧಿಗಳನ್ನು "ನೀವು ಪ್ರಶಸ್ತಿ ಪಡೆದಿದ್ದೇ ಮಹಾಪರಾಧ, ದೊಡ್ಡ ಅಪರಾಧವನ್ನು ಮಾಡಿದ್ದೀರಿ", ಇದಕ್ಕಾಗಿ ಶಿಕ್ಷೆಯೇನು ಅಂದರೆ "ಮನೆಗೆ ಹೋಗಿ ಎಂದು" ಹೇಳುವಂಥ ಕೆಲಸವನ್ನು ಮಾಡಿದ್ದಾರೆ. ಇಂಥ ಸಣ್ಣ ರಾಜಕೀಯ, ಸಣ್ಣತನ ಎಲ್ಲಿ ಯಾವ ಸಂಸ್ಥೆ ಸರಿಯಾಗಿ ನಡೆಯುತ್ತಿದೆ, ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆದಿದೆ; ಅದಕ್ಕೆಲ್ಲಕ್ಕಿಂತ ಮುಖ್ಯವಾಗಿ ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂತಹ ರೈತರಿಗೆ ಅನುಕೂಲವನ್ನು ಮಾಡಿದೆ. ಅನುಕೂಲ ಮಾಡಿದ್ದರಿಂದಲೇ ಆ ಸಂಸ್ಥೆ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆಯಲಿಕ್ಕೇ ಸಾಧ್ಯವಾಯಿತು. ಸಾಮಾನ್ಯವಾಗಿ ಸಹಕಾರಿ ಸಂಸ್ಥೆಗಳು ಹೇಗೆ ನಡೆಯುತ್ತಿವೆ ಎಂಬುದು ಎಲ್ಲರಿಗೂ ಕೂಡ ಗೊತ್ತಿದೆ. ಸರಿಯಾಗಿ ನಡೆಯುತ್ತಿರುವಂತಹ ಸಹಕಾರಿ ಸಂಸ್ಥೆಗಳು ಕೆಲವೇ ಕೆಲವು ಮಾತ್ರ ಇವೆ. ಅದರಲ್ಲಿ ಇದು ಮೊದಲನೆಯ ಸ್ಥಾನವನ್ನು ಪಡೆದಿದೆ. ನಮ್ಮ ದೇಶಕ್ಕೂ, ರಾಜ್ಯಕ್ಕೂ ಹೆಮ್ಮೆ ತಂದಿರತಕ್ಕಂತಹ ಬ್ಯಾಂಕಿಗೆ ಇವರು ಆಡಳಿತಾಧಿಕಾರಿಯನ್ನು ನಿಷ್ಕಾರಣವಾಗಿ ನೇಮಿಸುತ್ತಾರೆ. ಅಂದರೆ ಎಂತಹ ಕ್ಷುಲ್ಲಕ ರಾಜಕೀಯದಲ್ಲಿ ಇವರು ತೊಡಗಿದ್ದಾರೆ ಎನ್ನುವುದಕ್ಕೆ ಇದೊಂದು ಜ್ವಲಂತ ಉದಾಹರಣೆ. ಆದರೆ ಮಾತನಾಡುವಾಗ ಮಾತ್ರ ಬಹಳ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತಾರೆ, ಬರೆಸಿಕೊಳ್ಳುತ್ತಾರೆ. ಇವೆಲ್ಲವು ಕೂಡ ಸಾರೋದ್ಧಾರವಾಗಿ ನಡೆಯುತ್ತಲೇ ಇದೆ. ಸಣ್ಣ ಉದಾಹರಣೆ ಅಂದರೆ ಈ ಬ್ಯಾಂಕಿಗೆ ಚುನಾವಣೆ ನಡೆಸಬೇಕಾದರೆ ನಿಮಗೆ ಕ್ಷಾಮ ಅಡ್ಡಿ ಬಂತು, ಆದ್ದರಿಂದ ಚುನಾವಣೆ ಮುಂದೂಡಬೇಕಾಗಿದೆಯೆಂದು ಅಲ್ಲಿನ ಅಧಿಕಾರಿಗಳು ಬರೆದು ಕಳಿಸುತ್ತಾರೆ. ಆ ರೀತಿ ಅವರು ತೀರ್ಮಾನಕ್ಕೆ ಬರಬೇಕಾಗಿದ್ದರೆ, ಅವರ ಮೇಲೆ ಎಷ್ಟು ಒತ್ತಡ ಬಂದಿರಬಹುದು ಎನ್ನತಕ್ಕಂತಹದ್ದನ್ನು ನಾವು ಊಹಿಸಬಹುದು. ಆದರೆ ಅದೇ ಚುನಾವಣಾಧಿಕಾರಿ ಮೂರು ಸಕ್ಕರೆ ಕಾರ್ಖಾನೆಗಳಿಗೆ ಚುನಾವಣೆ ನಡೆಯಲಿಕ್ಕೆ ಅವಕಾಶ ನೀಡುತ್ತಾರೆ. ಆಗ ಅಲ್ಲಿ ಬರ ಇಲ್ಲವೇ? ಸಕ್ಕರೆ ಕಾರ್ಖಾನೆಗಳು ನೇರವಾಗಿ ರೈತರಿಗೆ ಸಂಬಂಧಪಟ್ಟಿರುವಂತಹದು, ಮತ್ತೆ ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆ ಎಷ್ಟು ಟನ್ ದಾಸ್ತಾನು ಇದೆ ಎನ್ನುವ ಬಗ್ಗೆ ಕೂಡ ಇವತ್ತಿನ ದಿವಸ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಮೂರು ಸಕ್ಕರೆ ಕಾರ್ಖಾನೆಗಳಿಗೆ ಚುನಾವಣೆ ನಡೆಯುತ್ತದೆ ಮತ್ತೆ ಪ್ರಾಥಮಿಕ ಹಂತದಲ್ಲಿನ ಸಹಕಾರ ಸಂಸ್ಥೆಗಳಿಗೆ ಚುನಾವಣೆ ನಡೆಯುತ್ತದೆ. ಆಗ ಮಾತ್ರ ಬರಗಾಲ ಇಲ್ಲ. ಹುಮ್ನಾಬಾದ್‌ನಲ್ಲಿ ಇಡೀ ರಾಜ್ಯದಲ್ಲಿ ಚುನಾವಣೆ ನಡೆಯುತ್ತದೆ. ಅಲ್ಲಿ ನೀವೇ ಗೆದ್ದಿರಬಹುದು. ಜಯವನ್ನು ಸಾಧಿಸಿದ್ದೇವೆಂದು ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳಿರಿ. ಆದರೆ ಅಲ್ಲಿ ಚುನಾವಣೆಯನ್ನು ನಡೆಸಿದ್ದೀರಿ. ಅಲ್ಲಿ ಮಾತ್ರ ಬರಗಾಲವಿಲ್ಲ. ಬಿಜಾಪುರ ಜಿಲ್ಲೆ ಸಹಕಾರಿ ಬ್ಯಾಂಕಿಗೆ ಮಾತ್ರ ಬರಗಾಲ ಬಂದಿದೆಯೇ? ಏತಕ್ಕೆ ಈ ರೀತಿ, ಕಳ್ಳನಿಗೊಂದು ಪಿಳ್ಳೆನೆವ? ಇದನ್ನೆಲ್ಲ ಬಿಟ್ಟು ಎಲ್ಲಿ ಸರಿಯಾಗಿ ಕೆಲಸ ಮಾಡುತ್ತಾರೋ, ಜನರ, ರೈತರ ಹಿತವನ್ನು ಕಾಪಾಡುತ್ತಾರೋ ಅಂತಹ ಸಂಸ್ಥೆಗಳಿಗೆ ನೀವು ಬೆಂಬಲವನ್ನು ಕೊಡಬೇಕಾಗಿರುವುದು, ಅವರ ಬೆನ್ನು ತಟ್ಟಬೇಕಾಗಿರುವುದು ಸರ್ಕಾರದ ಕರ್ತವ್ಯ. ಆದರೆ, ಅದಕ್ಕೆ ಬದಲಾಗಿ ನೀವು ಮಾಡಿರುವುದೇನೆಂದರೆ, ಒಳ್ಳೆಯ ಕೆಲಸವನ್ನು ಮಾಡಿರುವುದೇ ಒಂದು ದೊಡ್ಡ ಅಪರಾಧ, ಅದಕ್ಕೆ ಶಿಕ್ಷೆಯನ್ನು ಅನುಭವಿಸಬೇಕು ಅನ್ನತಕ್ಕಂತಹ ನಿಮ್ಮ ಧೋರಣೆ ಏನಿದೆ ಅದು ಖಂಡನೀಯ. ನಿಮ್ಮ ಕೈಯಲ್ಲೇ, ಅಧಿಕಾರ ಯಾವತ್ತೂ ಶಾಶ್ವತವಾಗಿ ಇರುತ್ತದೆಂದು

ತಿಳಿದುಕೊಳ್ಳಬೇಡಿ. ಯಾರಿಗೂ ಈ ಸ್ಥಾನ ಶಾಶ್ವತವಲ್ಲ. ಜನ ನಮ್ಮೆಲ್ಲರಿಗಿಂತಲೂ ಬುದ್ಧಿವಂತರಿದ್ದಾರೆ. ನಾವೇ ಬುದ್ಧಿವಂತರು, ಮಹಾ ಮೇಧಾವಿಗಳು, ಪ್ರವೀಣರೂ ಅಂತ ಯಾರಾದರೂ ತಿಳಿದುಕೊಂಡಿದ್ದರೆ ಅಂತಹ ಮೂರ್ಖರೂ ಬೇರೆ ಯಾರೂ ಇಲ್ಲ. ನೀವು ಕೂಡ ಸತತವಾಗಿ ಇಲ್ಲೇ ಕುಳಿತುಕೊಂಡಿರುತ್ತೇವೆಂದು ತಿಳಿದುಕೊಂಡಿದ್ದರೆ ನಿಮ್ಮಂತಹ ಮೂರ್ಖರು ಯಾರೂ ಇಲ್ಲ. ಈ ಮೂರ್ಖತನವನ್ನು ನೀವು ದಯವಿಟ್ಟು ಪ್ರದರ್ಶನ ಮಾಡಲಿಕ್ಕೆ ಹೋಗಬೇಡಿ. ಇವತ್ತು ಎಲ್ಲರಿಗೂ ಇದರ ಅರಿವು ಇರಬೇಕಾದಂತಹ ಅವಶ್ಯಕತೆಯಿದೆ. ಅದನ್ನು ಮರೆತು ನೀವು ಇವತ್ತಿನ ದಿವಸ ಅಧಿಕಾರ ಇದೆಯೆಂದು ಕಳ್ಳನಿಗೊಂದು ಪಿಳ್ಳೆನೆವ ಎಂದು ಹೇಳಿ ಒಂದು ಪಿಳ್ಳೆನೆವವನ್ನು ಹುಡುಕಿ ಇವತ್ತಿನ ದಿವಸ ನೀವು ಆಡಳಿತಾಧಿಕಾರಿಯನ್ನು ನೇಮಿಸಲಿಕ್ಕೆ ಕೈ ಹಾಕಿದ್ದೀರಿ. ಇದು ಯಾವ ನೀತಿ? ಎಂತಹ ನೀತಿ? ಒಳ್ಳೆಯ ಕೆಲಸವನ್ನು ಮಾಡಿದ್ದೇ ಅಪರಾಧವೇ? ದಯವಿಟ್ಟು ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕು. ಜನತೆಯ ಕ್ಷಮೆಯನ್ನು ಕೇಳಬೇಕಾಗಿದೆ. ಸರಿಯಾದಂತಹ ಕೆಲಸ ಮಾಡುತ್ತಿದ್ದ ಸಹಕಾರಿ ಸಂಸ್ಥೆಯನ್ನು ನುಂಗಿದ್ದಕ್ಕೆ ನೀವು ಜನತೆಯ ಕ್ಷಮಾಪಣೆಯನ್ನು ಕೇಳಬೇಕು ಎಂದು ಒತ್ತಾಯ ಮಾಡುತ್ತೇನೆ ಮತ್ತು ನೀವು ತೆಗೆದುಕೊಂಡಿರತಕ್ಕಂತಹ ಕ್ರಮ ಖಂಡನೀಯವಾದ ಕ್ರಮವೆಂದು ನಾನು ಹೇಳಲೇಬೇಕಾಗಿದೆ.

+ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ):- ಮಾನ್ಯ ಉಪಾಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಯನ್ನು ನಾವು ಪ್ರತ್ಯೇಕವಾಗಿ ನಮ್ಮ ಪಕ್ಷದಿಂದ ಕಳುಹಿಸಿದ್ದೆವು. ಅದೇಕೋ ನೀವು ಅದರಲ್ಲಿ ನಮ್ಮ ಪಕ್ಷದವರ ಹೆಸರನ್ನು ನಮೂದಿಸಿಲ್ಲ. ಕಾರಣವೇನೆಂದು ನನಗೆ ಅರ್ಥವಾಗಲಿಲ್ಲ. ಬೆಳಿಗ್ಗೆ ನಾನು ಮಾನ್ಯ ಅಧ್ಯಕ್ಷರನ್ನು ಕಂಡು, ಮಾತನಾಡಲಿಕ್ಕೆ ನನಗೆ ಅವಕಾಶ ಕೊಡಬೇಕು ಎಂದು ಕೇಳಿದ್ದಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ನಾನು ಬೇರೆ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿರುವುದರಿಂದ, ತಮ್ಮ ಹಾಗೂ ವಿರೋಧ ಪಕ್ಷದ ನಾಯಕರು ಸಂಪ್ರದಾಯದ ಪ್ರಕಾರ ಮೊದಲು ಮಾತನಾಡಬೇಕಾಗಿರುವುದರಿಂದ, ಅವರ ಅನುಮತಿಯನ್ನೂ ಸಹ ನಾನು ಪಡೆದು ಮಾತನಾಡುತ್ತೇನೆ. ನಿಮ್ಮ ಸರ್ಕಾರ ಈ ರೀತಿ ಮಾಡುತ್ತದೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಇದು ಹಗಲಲ್ಲೇ ಮಾಡಿರತಕ್ಕಂತಹ ದರೋಡೆಯ ಕ್ರಮ. ನಮಗೆಲ್ಲಾ ಒಂದು ಹೆಮ್ಮೆ ಇದೆ. ವಿಶೇಷವಾಗಿ ಬೆಂಗಳೂರಿನ ಸುತ್ತಮುತ್ತಲಿರುವ ನಾವು ಯಾರೂ ಬಹಳ ದೊಡ್ಡ ಸಹಕಾರಿ ಚಳುವಳಿಗಾರರೇನೂ ಅಲ್ಲ. ಆದರೆ ಕಾರವಾರ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಕೊಡಗು, ಉತ್ತರಕನ್ನಡ, ದಕ್ಷಿಣಕನ್ನಡ ಹೀಗೆ 5-6 ಜಿಲ್ಲೆಗಳಲ್ಲಿ ನಮ್ಮ ರಾಜ್ಯದಲ್ಲೇ ಈ ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿ ಅನೇಕ ಸಹಕಾರಿ ಸಂಘಸಂಸ್ಥೆಗಳನ್ನು ಕಟ್ಟಿರತಕ್ಕಂತಹದು ತಮಗೆ ಗೊತ್ತಿದೆ. ಅದು ಸಕ್ಕರೆ ಕಾರ್ಖಾನೆಗಳು ಇರಬಹುದು ಮತ್ತೊಂದು ಇರಬಹುದು. ಶ್ರೀ ಕೆ.ಹೆಚ್.ಪಾಟೀಲ್‌ರವರನ್ನು ನಾವು ಇಂದು ನೆನಪಿಸಿಕೊಳ್ಳಬೇಕು. ಅವರನ್ನು ಒಬ್ಬ ಆದರ್ಶ ರಾಜಕಾರಣಿ ಎಂದು ಕರೆದರೆ ತಪ್ಪಾಗುವುದಿಲ್ಲ. ಅವರಿಗೆ ನಾವ್ಯಾಕೆ ಅಷ್ಟೊಂದು ಗೌರವ ಕೊಡುತ್ತೇವೆ ಅಂದರೆ, ಅದರಲ್ಲೂ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಬೇಕಾಗಿತ್ತು. ಅನೇಕ ಸಂದರ್ಭಗಳಲ್ಲಿ ಅವರು ಬಂಡಾಯ ಎದ್ದು, ಜನಗಳನ್ನು ವಿರೋಧ ಮಾಡಿಕೊಂಡರು, ಶ್ರೀಮತಿ ಇಂದಿರಾಗಾಂಧಿ, ಶ್ರೀ ದೇವರಾಜ್ ಅರಸ್, ಶ್ರೀ ಬಂಗಾರಪ್ಪನವರ ವಿರೋಧ ಕಟ್ಟಿಕೊಂಡರು, ಇಂದು ಅವರು ಸತ್ತು ಹೋದ ನಂತರವೂ ಸಹ ನಾವು ಏಕೆ ಅವರನ್ನು ನೆನಪಿಸಿಕೊಳ್ಳುತ್ತೇವೆ. ಏಕೆಂದರೆ ಅವರು ಸಂಘ ಸಂಸ್ಥೆಗಳನ್ನು ಬಹಳ ಮಾದರಿಯಾಗಿ ಕಟ್ಟಿದ್ದಾರೆ.

ಮಾನ್ಯ ಎ.ಬಿ. ಪಾಟೀಲ್‌ರವರ ತಂದೆ ಅವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ದಿವಂಗತ ಶ್ರೀ ಅಪ್ಪಣ್ಣಗೌಡ ಪಾಟೀಲ್ ಇವರನ್ನೆಲ್ಲಾ 100 ವರ್ಷ ಆಗಿದ್ದರೂ ಸಹಿತ ನಾವು ಅವರನ್ನು ಏಕೆ ನೆನಪಿಸಿಕೊಳ್ಳುತ್ತೇವೆ ಅಂದರೆ ಈ ಸಹಕಾರಿ ಚಳುವಳಿ ಹುಟ್ಟಿದ್ದೇ, ಉತ್ತರ ಕರ್ನಾಟಕದಲ್ಲಿ, ಧಾರವಾಡದಲ್ಲಿ ಅನ್ನುವಂತಹ ವಿಚಾರ ನಮಗೆಲ್ಲಾ ಗೊತ್ತಿರುವ ವಿಚಾರ. ರೈತರಿಗೆ ಬೇಕಾಗಿರುವಂತಹ ಸಕ್ಕರೆ ಕಾರ್ಖಾನೆಗಳು, ಎಣ್ಣೆ, ಖಾದಿ, ಅಡಿಕೆ, ಈ ವಿಚಾರದಲ್ಲಿ ಇವತ್ತಿಗೂ ಸಹ ಕ್ಯಾಂಪ್ಕೋಗೆ ಎಷ್ಟೊಂದು ಒಳ್ಳೆಯ ಹೆಸರು ಇದೆ ಎಂಬ ವಿಚಾರ ತಮಗೆಲ್ಲಾ ಗೊತ್ತಿದೆ. ಇವತ್ತು ಪ್ರಪಂಚದ ಆರ್ಥಿಕ ಬದಲಾವಣೆಯ ಸಂದರ್ಭದಲ್ಲಿ ಈ ಸಹಕಾರಿ ಸಂಸ್ಥೆಗಳ ಪಾತ್ರ, ಸಹಕಾರಿ ಕ್ಷೇತ್ರದಲ್ಲಿ ಇರತಕ್ಕಂತಹ ಸಂಘ ಸಂಸ್ಥೆಗಳು ಕಷ್ಟದಲ್ಲಿ ಸಿಕ್ಕಿ ಹಾಕಿಕೊಂಡಿವೆ. ಅವಕ್ಕೆಲ್ಲಾ ನಾವು ಶಕ್ತಿಯನ್ನು ಕೊಡಿಸಬೇಕಾಗುತ್ತದೆ. ಇವತ್ತು ರಾಜಕೀಯ ವಾತಾವರಣ ಬೇರೆಯಾಗಿ ಹೋಗಿಬಿಟ್ಟಿದೆ. ನಿಷ್ಠೆ, ಪ್ರಾಮಾಣಿಕತೆ ಅಥವಾ ಜನಗಳ ಬಗ್ಗೆ ಇರತಕ್ಕಂಥ ನಿಷ್ಠೆ ಎಲ್ಲವೂ ಸಹಿತ ಕಡಿಮೆ ಆಗಿರತಕ್ಕಂಥ ವಾತಾವರಣ ಇಡೀ ದೇಶದಲ್ಲಿ ಸೃಷ್ಟಿಯಾಗಿದೆ. ಇದು ಎಲ್ಲ ರಾಜಕೀಯ ಪಕ್ಷಗಳಲ್ಲೂ ಸಹಿತ ಸೃಷ್ಟಿಯಾಗಿದೆ. ಆದರೆ ನನಗೆ ಅನ್ನಿಸತಕ್ಕಂಥಾದ್ದು ಏನೆಂದರೆ, ನಿಮ್ಮ ಕೈಯಲ್ಲಿ ಇಂತಹ ಕಾನೂನಿಗೆ ನೀವು ಸಹಿ ಹಾಕಿಸುತ್ತಿರಲಿಲ್ಲವೆಂದು ನಾನು ಭಾವಿಸಿಕೊಂಡಿದ್ದೆ. ಏಕೆಂದರೆ ನಮಗೆ ಸ್ವಲ್ಪ ವಾಸನೆ ಆವತ್ತು ಮುಂಚಿತವಾಗಿಯೇ ಬಂದಿತ್ತು. ಈಗ ಅವರು ಭಾರತೀಯ ಜನತಾ ಪಾರ್ಟಿಯವರು, ನಮ್ಮ ಪಾರ್ಟಿಯವರಲ್ಲ. ನಮ್ಮ ಪಾರ್ಟಿಯಲ್ಲಿ ಹಿಂದೆ ಇದ್ದವರು. ಈಗ ಬಿ.ಜೆ.ಪಿ.ಗೆ ಹೋಗಿ ಅಲ್ಲಿಂದ ಗೆದ್ದು ಬಂದಿದ್ದಾರೆ. ಈಗ ಇದು ಬಹುಶಃ ರಾಜ್ಯದಲ್ಲೇ ಒಂದು ಉತ್ತಮ ಸಹಕಾರಿ ಬ್ಯಾಂಕ್ ಎನ್ನುವಂಥಾದ್ದು ನಮ್ಮ ರಾಷ್ಟ್ರಾಧ್ಯಕ್ಷರು ಹೇಳಿರತಕ್ಕಂಥ ವಿಚಾರ. ನಿಮಗೆ ಏನಾದರೂ ಇದರಲ್ಲಿ ಅವ್ಯವಹಾರಗಳು ನಡೆದಿದೆ ಅಥವಾ ಅವರು ಏನಾದರೂ ತಪ್ಪು ಮಾಡಿದ್ದಾರೆ. ಎನ್ನತಕ್ಕದ್ದರಲ್ಲಿ ಬೇರೆಬೇರೆ ಬ್ಯಾಂಕುಗಳನ್ನು ನಾನು ಹೋಲಿಸುವುದಕ್ಕೆ ಹೋಗುವುದಿಲ್ಲ. ಬೇರೆಬೇರೆ ಬ್ಯಾಂಕುಗಳ ಬಗ್ಗೆ ಇರತಕ್ಕಂಥ ವಿಚಾರಣಾ ತನಿಖೆಗಳ ಬಗ್ಗೆ ಸಹಿತ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಷ್ಟೊಂದು ತನಿಖೆಗಳು ಯಾವ್ಯಾವ ಬ್ಯಾಂಕಿನಲ್ಲಿ ನಡೆಯುತ್ತಿದೆ, ಆ ತನಿಖೆಗಳ ಗತಿ ಏನಾಗಿದೆ, ಆ ತನಿಖಾ ವರದಿಗಳು ಏನಾಗಿದೆ ಎಂದು ಇದೆಲ್ಲವೂ ಸಹಿತ ನಮಗೆ ಗೊತ್ತಿರತಕ್ಕಂಥ ವಿಚಾರ. ಈಗ ಬೇರೆ ಯಾರದ್ದೋ ಸರ್ಕಾರ ಇದ್ದಿದ್ದರೆ ನಾನು ಅರ್ಥಮಾಡಿಕೊಳ್ಳುತ್ತಿದ್ದೆ. ಆದರೆ ನೀವು ಬಹಳ ತತ್ವಗಳ ಬಗ್ಗೆ, ಮೌಲ್ಯಗಳ ಬಗ್ಗೆ, ಪಾರದರ್ಶಕತೆ ಬಗ್ಗೆ ಎಷ್ಟು ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತೀರಿ. ದಯವಿಟ್ಟು ತಾವು ಯೋಚನೆ ಮಾಡಿ. ನಿಮ್ಮ ಮುಖ್ಯಮಂತ್ರಿಗಳು ಮಾತನಾಡುವುದನ್ನು ನೋಡಿಬಿಟ್ಟರೆ ಫಸ್ಟ್‌ಕ್ಲಾಸ್ ಶ್ರೀರಾಮಚಂದ್ರ ಅಥವಾ ಹರಿಶ್ಚಂದ್ರ, ಈ ಎರಡರಲ್ಲಿ ಒಂದು ಹೆಸರನ್ನು ಕೃಷ್ಣ ಅವರಿಗೆ ಕಟ್ಟಬೇಕು. ಈ ಕೃಷ್ಣ ಎನ್ನುವ ಹೆಸರನ್ನೇ ಬದಲಾಯಿಸಿ ಬಿಡಬೇಕು ಅಥವಾ ನಾಟಕದ ಕೃಷ್ಣ ಎಂದು ಹೆಸರು ಇಡಬೇಕು. ಮುಖ್ಯಮಂತ್ರಿಗಳು ಏನಾದರೂ ಮರೆವಿನಲ್ಲಿ ಇದಕ್ಕೆ ಸಹಿ ಹಾಕಿಬಿಟ್ಟಿದ್ದಾರಾ ಏನು ಎಂಬುದು ನನಗರ್ಥವಾಗುತ್ತಿಲ್ಲ. ಇದೇನು ಅವರು ಗೊತ್ತಿಲ್ಲದೆಯೇ ಸಹಿ ಹಾಕಿಬಿಟ್ಟರೋ ಹೇಗೆ? ನನಗರ್ಥವಾಗುತ್ತಿಲ್ಲ. ಏಕೆ ಮುಖ್ಯಮಂತ್ರಿಗಳು ಹೀಗೆ ಮಾಡುತ್ತಾರೆ. ಅವರಿಗೆ ಎಪ್ಪತ್ತು ವರ್ಷವಾಗಿದೆ. ಜೊತೆಗೆ ಅವರು ರಾಜಕೀಯವಾಗಿ ಉನ್ನತ ಸ್ಥಾನವನ್ನು ಕರ್ನಾಟಕದಲ್ಲಿ ಈಗಾಗಲೇ ತಲುಪಿಬಿಟ್ಟಿದ್ದಾರೆ. ಕರ್ನಾಟಕದಲ್ಲಿ ಇನ್ನೂ ಅವರು ತಲುಪಬೇಕಾಗಿರತಕ್ಕಂಥಾದ್ದು ಏನೂ ಉಳಿದಿಲ್ಲ. ಈಗಾಗಲೇ ಮೂರೂವರೆ ವರ್ಷ

ಆಗಿಹೋಯಿತು. ಆದರೆ ಈಗ ನಿಮ್ಮೆಲ್ಲರ ವರ್ತನೆಯನ್ನು ನೋಡಿದರೆ, ಇನ್ನೂ ಒಂದು ವರ್ಷ ಅವರ ಸ್ಥಾನ ಖಾಯಂ ಆದಂತೆ ಕಾಣುತ್ತದೆ.

ಶ್ರೀ ಸಿ.ಎಂ. ಲಿಂಗಪ್ಪ:- ಇನ್ನೂ ಒಂದೂವರೆ ವರ್ಷ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನೋಡಿ, ಸಿ.ಎಂ. ಲಿಂಗಪ್ಪನವರು ಒಂದೂವರೆ ವರ್ಷ ಎಂದು ಹೇಳಿದರು. ನಿಮ್ಮ ಸೀಟು ಖಾಯಂ ಆಗಿರುವ ಹಾಗೆ ಕಾಣುತ್ತದೆ. ಇಲ್ಲ, ಅವರು ಏಳೂವರೆ ವರ್ಷ ಎಂದು ಮೈಸೂರಿನಲ್ಲಿ ಹೇಳಿದ್ದಾರೆ. ಇದು ನಿಮಗೆ ಗೊತ್ತಾ? ನೋಡಿ, ಈಗ ನಿಮ್ಮ ಬಾಯಿಯಿಂದ ಇದು ಹೊರಬಂದಿತು.

ಶ್ರೀ ಶಿವಾನಂದ ಎಸ್.ಪಾಟೀಲ್:- 'ಡಿಸ್‌ಮಿಸ್' ಎಂದು ಫೈಲ್ ಮೇಲೆ ಬರೆದಿದ್ದಾರೆ. ನನಗನ್ನಿಸುತ್ತದೆ, ಒಬ್ಬರು ಮುಖ್ಯಮಂತ್ರಿಗಳ ಕೈಯಲ್ಲಿ ಈ ತರಹ ಷರಾ ಬರೆಸಿಕೊಳ್ಳುವ ಕೆಟ್ಟ ಕೆಲಸವನ್ನು ನಾವು ಮಾಡಲಿಲ್ಲ. ದಯಮಾಡಿ, ನೀವು ಬೇಕಾದರೆ ಹೋಗಿ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ, ಇವರು ಮಾನ್ಯ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸಬಹುದಾಗಿತ್ತು. ಈ ರೀತಿ ಮಾಡುತ್ತಿರುವುದು ತಪ್ಪು ಎಂದು ಹೇಳಬಹುದಾಗಿತ್ತು. ನಿಮ್ಮ ಮಾತು ಎಷ್ಟು ನಡೆಯುತ್ತದೆಯೆಂದು ನನಗೆ ಗೊತ್ತಿಲ್ಲ. ಸ್ವಲ್ಪವಾದರೂ ನಡೆಯುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಿಮ್ಮ ಮಾತು ಮುಖ್ಯಮಂತ್ರಿಗಳ ಹತ್ತಿರ ಸ್ವಲ್ಪ ನಡೆಯುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನೀವೆಲ್ಲಾ ಲಾಬಿ ಮಾಡಿ, ನಿಮ್ಮಲ್ಲಿ ಸಹಕಾರ ಕ್ಷೇತ್ರದಲ್ಲಿ ಷಡಕ್ಷರಿ ಇವರೆಲ್ಲಾ ಇದ್ದಾರೆ. ಎಲ್ಲರನ್ನೂ ಕರೆದುಕೊಂಡು ಹೋಗಿ ಮಾಡಬಹುದಾಗಿತ್ತು. ಇನ್ನು ಒಂದೂವರೆ ವರ್ಷವಾದ ಮೇಲೆ ನಾವು ಬರುವುದು ಗ್ಯಾರಂಟಿ. ನೀವು ಇವತ್ತೇ ಇದನ್ನು ಬೇಕಾದರೆ ಡೈರಿಯಲ್ಲಿ ಬರೆದಿಟ್ಟುಕೊಳ್ಳಿ. ಇವತ್ತು 17ನೇ ಮಾರ್ಚ್ 2003ನೇ ಇಸವಿ. 2004ರ ಡಿಸೆಂಬರ್‌ನಲ್ಲಿ ನಾವು ಎಲ್ಲಿ ಇರುತ್ತೇವೆ ಎಂಬುದನ್ನು ಬರೆದಿಟ್ಟುಕೊಳ್ಳಿ. ನಾವು ಅಲ್ಲಿ ಕೂತಿರುತ್ತೇವೆ. ಆಗ ಮಾನ್ಯ ವಿಶ್ವನಾಥ್‌ರವರೇ, ನಿಮ್ಮ ಪಕ್ಷದಲ್ಲಿ ಇರತಕ್ಕಂಥ, ಮುಖಂಡರು ಇರತಕ್ಕಂಥ ಬ್ಯಾಕುಗಳನ್ನು ನಾವು ಸೂಪರ್‌ಸೀಡ್ ಮಾಡಿದರೆ ಸಹಕಾರಿ ಕ್ಷೇತ್ರ ಎಲ್ಲಿಗೆ ಹೋಗುತ್ತದೆ ಎಂದು ದಯವಿಟ್ಟು ನೀವು ಯೋಚನೆ ಮಾಡಿ. ನಾವು ಆ ತರಹ ಪಾಪದ ಕೆಲಸವನ್ನು ಮಾಡಿದ್ದೇವೆಯೇ? ಈ ಚೌಡಯ್ಯನವರು ಪಿ.ಇ.ಎಸ್. ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಅವರು ಕಾಂಗ್ರೆಸ್ ಪಾರ್ಟಿಯಲ್ಲಿದ್ದರು, ಇಲ್ಲಿಯ ನಾಯಕರಾಗಿದ್ದರು, ಉಪನಾಯಕರಾಗಿದ್ದರು. ಚೌಡಯ್ಯನವರೇ, ತಾವು ದಯವಿಟ್ಟು ಸದನದಲ್ಲಿ ಹೇಳಬೇಕು. ನಾವು ಆಡಳಿತ ನಡೆಸಿದಾಗ, ವಿರೋಧ ಪಕ್ಷ ಆಡಳಿತ ನಡೆಸುತ್ತಿದ್ದಾಗ ಎಷ್ಟು ಬ್ಯಾಂಕುಗಳನ್ನು ಸೂಪರ್‌ಸೀಡ್ ಮಾಡಿದ್ದೇವೆ, ಡಿಸ್‌ಮಿಸ್ ಮಾಡಿದ್ದೇವೆ? ಕೊನೆಕೊನೆಗೆ ನಾವು ಸ್ವಲ್ಪ ಹದಗೆಟ್ಟೆವು. ನಾನು ಇಲ್ಲ ಅಂತ ಹೇಳುವುದಿಲ್ಲ. ಅದಕ್ಕೇ ನಾವು 19ಕ್ಕೆ ಇಳಿದಿದ್ದು ಅವರು 12-10ಕ್ಕೆ ಬಂದು ಈಗ ಕೊನೆಗೆ ನಾಲ್ಕು ಜನ ಮಾತ್ರ ಉಳಿದಿರುವುದು. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನೀವು ಅದೇನೋ ಪಂಚಾಯಿತಿ ಕಮಿಟಿ ಮಾಡುತ್ತೇವೆ ಎಂದು ಹೊರಟಿದ್ದೀರಲ್ಲ ಯಾರ್ಯಾರೋ ಡೆಲ್ಲಿಯಿಂದ ಬಂದು ಹೋಗಿದ್ದಾರಲ್ಲಾ, ಅವರು ಯಾವ್ಯಾವುದೋ ಭಾಷೆಯಲ್ಲಿ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ಕರ್ನಾಟಕಕ್ಕೂ ಅದಕ್ಕೂ ಸಂಬಂಧವೇ ಇಲ್ಲ. ಜನ ಎಲ್ಲ ಬಯ್ಯುತ್ತಾ ಕುಳಿತಿದ್ದಾರೆ. ಉಪಾಧ್ಯಕ್ಷರೇ, ಈಗ ತಾವು ಕೂಡ ಗಮನಿಸಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಬಹುಶಃ ಕನ್ನಡಪ್ರಭ ಪತ್ರಿಕೆ ಇರಬೇಕು, ಬಹಳ ಒಳ್ಳೆಯ ಸಂಪಾದಕೀಯವನ್ನು ಬರೆದಿದ್ದಾರೆ.

"ಡೆಲ್ಲಿಯ ದೊರೆಗಳು ಬಂದು ನಮ್ಮ ಆಡಳಿತ ಪಕ್ಷದವರಿಗೆ ಬುದ್ಧಿ ಹೇಳಿದ್ದಾರೆ. ನೀವು ಮತೀಯ ಶಕ್ತಿಗಳ ವಿರುದ್ಧ ಹೋರಾಟ ಮಾಡಬೇಕು." ಇನ್ನು ಏನೇನೋ ಎಕ್ಸ್-ವೈ-ಜೆಡ್ ಅಂತ ಹೇಳಿದ್ದಾರೆ. ಇದು ಕರ್ನಾಟಕಕ್ಕೆ ಸಂಬಂಧವಿಲ್ಲ. ಏಕೆ ಇವರೆಲ್ಲಾ ಬಂದು ಮಾತನಾಡುತ್ತಾರೆ? ಯಾವ ಉದ್ದೇಶಕ್ಕಾಗಿ ಇವರು ಇಲ್ಲಿ ಬರುತ್ತಾರೆ? ಅದರ ಬಗ್ಗೆ ಹೇಳುವುದು ಅಪ್ರಸ್ತುತ ಎಂದುಕೊಳ್ಳುತ್ತೇನೆ. ಆದರೆ ನಾವು ಮಾಡಿದ ತಪ್ಪನ್ನು ನೀವು ಮಾಡುತ್ತೀರಾ? ಈಗ ಶ್ರೀಮಾನ್ ಡಿ.ಆರ್.ಪಾಟೀಲರು ಇದ್ದಾರೆ. ಅವರ ಬಗ್ಗೆ ಬಹುತೇಕ ಸದಸ್ಯರಿಗೆ ರಾಜಕೀಯವಾಗಿ ಭಿನ್ನಾಭಿಪ್ರಾಯ ಇದೆ. ಆದರೆ ನಾವು ಅವರಿಗೆ ಬಹಳ ಗೌರವ ಕೊಡುತ್ತೇವೆ. ಸಚಿವ ಸಂಪುಟದಲ್ಲಿ ಒಂದು ಸಾರಿ ಅವರಿಗೆ ಸೇರಿದ ಯಾವುದೋ ಸ್ಪಿನ್ನಿಂಗ್ ಮಿಲ್ ವಿಚಾರದಲ್ಲಿ, ಕ್ಯಾಬಿನೆಟ್‌ನಲ್ಲಿ ಕೊಡಬೇಕು, ಕೊಡಬಾರದು ಎನ್ನುವ ಬಗ್ಗೆ ವಿಚಾರ ಬಂತು. ಆಗ ಎಸ್.ಎಸ್. ಪಾಟೀಲರು was the first man to say - ಇಲ್ಲ, ಕೊಡಬೇಕು. ಇಲ್ಲದಿದ್ದರೆ ನನಗೆ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದರು. ಹಿಂದುಳಿದ ವರ್ಗದವರು, ಬಡವರು, ರೈತರು ಇಂತಹ ವರ್ಗಗಳಿಗೆ ಸೇರಿದ ಜನ ಉಳಿಯಬೇಕಾದರೆ ನೀವು 1972ರಲ್ಲಿ ಇಲ್ಲಿ ಕುಳಿತು ಏನೇನು ಭಾಷಣ ಮಾಡಿದ್ದೀರಿ. ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗ ಏನೇನು ಮಾತನಾಡಿದ್ದಾರೆ ಎಂಬುದನ್ನು ತೆಗೆದು ಓದಿಕೊಳ್ಳಿ. ಚರಿತ್ರೆ ಮರುಕಳಿಸುತ್ತದೆ, ಏನು ರೈತರು, ಪರಿಶಿಷ್ಟ ಜಾತಿಯವರು, ಹಿಂದುಳಿದ ವರ್ಗಗಳು ಮಾರವಾಡಿಗಳ ಹತ್ತಿರ ಹೋಗಿ ಸಾಲ ತೆಗೆದುಕೊಂಡು ಬರುತ್ತಾರೆ, ಅವರು ಸಿಟಿಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವೇನು? ಈಗ ನೋಡಿ, ಮೊಬೈಲ್ ಫೋನ್ ಬಿಲ್‌ನ್ನು ಬಹಳ ಕಡಿಮೆ ಮಾಡಿಬಿಟ್ಟಿದ್ದಾರೆ. ನಿಮ್ಮ ಲ್ಯಾಂಡ್‌ಫೋನ್‌ಗಳ ಬಿಲ್ ಈಗ ಜಾಸ್ತಿಯಾಗಿದೆ. ಇದೆಲ್ಲಾ ಕಿತ್ತುಹಾಕಿಬಿಡುತ್ತಾರೆ; ಲ್ಯಾಂಡ್‌ಫೋನ್ ಎಲ್ಲಾ ಹೊರಟುಹೋಗುತ್ತದೆ. ಆಮೇಲೆ- ultimately it will go to the hands of Ambani. ಸಹಕಾರ ಚಳುವಳಿಯನ್ನು ಉಳಿಸಬೇಕು ಮತ್ತು ಬೆಳಸಬೇಕು. ಇಂತಹ ಪಾಪದ ಕೆಲಸವನ್ನು ನೀವು ಏಕೆ ಮಾಡಿದ್ದೀರಿ ಎಂದರೆ, ನಿಮಗೆ ಗೊತ್ತಾಯಿತು. ಹನ್ನೊಂದು ಜನರಲ್ಲಿ ಒಬ್ಬರೋ ಇಬ್ಬರೋ ಗೆಲ್ಲುತ್ತೀರಿ, ಬಾಕಿ ಇರುವವರೆಲ್ಲಾ ಶಿವಾನಂದ ಪಾಟೀಲರ ಕಡೆಯವರು; ಅವರೇ ಗೆಲ್ಲುವವರು ಎಂದು ಗೊತ್ತಾದ ಮೇಲೆ ಈ ಪಾಪದ ಕೆಲಸವನ್ನು ನೀವು ಮಾಡಿದ್ದೀರಲ್ಲಾ, ಇದಕ್ಕೆ ಪ್ರಾಯಶ್ಚಿತ್ತ ಏನಪ್ಪ ಎಂದರೆ, ಕ್ಷಮೆ ಎಲ್ಲಾ ಕಷ್ಟದ ಕೆಲಸ, ನೀವು ಅದೆಲ್ಲಾ ಮಾಡುವುದಕ್ಕೆ ಆಗುವುದಿಲ್ಲ. ಅವರನ್ನು ನೀವು ಮಾಡುವವರಲ್ಲ. ಮುಂದೆ ನೀವು ನಮ್ಮ ಹಾಗೆ ಆದಾಗ ಆಗ ಕ್ಷಮೆ ಕೇಳುತ್ತೀರಿ. ಈಗ ನಾವು ಕೇಳುತ್ತಿದ್ದೇವೆ ನೋಡಿ, ಜನರ ಮುಂದೆ ಹೋಗಿ 'ತಪ್ಪು ಮಾಡಿದ್ದೇವೆ ಕ್ಷಮಿಸಿಬಿಡಿ' ಅಂತ ಹೇಳಿ ನೀವು ಹಾಗೆ ಕೇಳಿಕೊಳ್ಳುತ್ತೀರಿ. ಆ ಕಾಲ ನಿಮಗೆ ಬೇಗ ಬರುತ್ತದೆ. ನಾವು ನೀರೀಕ್ಷೆ ಮಾಡಿದ್ದಕ್ಕಿಂತಲೂ ಅದು ಬೇಗನೇ ಬರುತ್ತದೆ. ಆಮೇಲೆ ನಿಮ್ಮಲ್ಲಿ ಏನೇನು ಒಳಜಗಳಗಳು ಇದೆ, ಇವೆಲ್ಲಾ ನಮಗೆ ಅರ್ಥವಾಗುವುದಿಲ್ಲವೆಂದು ತಿಳಿದುಕೊಳ್ಳಬೇಡಿ. ನಮಗೆಲ್ಲಾ ಗೊತ್ತಿದೆ. ನಾವು ಸ್ವಲ್ಪ ಹಳ್ಳದಲ್ಲಿ ಬಿದ್ದಿರುವುದರಿಂದ ಮೇಲೆತ್ತುವವರೆಗೆ ಸ್ವಲ್ಪ ಸುಮ್ಮನಿದ್ದೇವೆ, ಅಷ್ಟೇನೇ. ಆದ್ದರಿಂದ ನಾನು ನಿಮ್ಮನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಮುಖ್ಯಮಂತ್ರಿಗಳು ಇಲ್ಲಿ ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು. ಬಹುಶಃ ಬಜೆಟ್ ತಯಾರಿಕೆ ನೆಪದಲ್ಲಿ ಅವರು ಗೈರುಹಾಜರಾಗುತ್ತಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಬಜೆಟ್ ತಯಾರು ಮಾಡುತ್ತಿರಬೇಕಾದರೆ, ಇದು ಅವರಿಗೆ ಕೊನೆಯ ಬಜೆಟ್. ಸ್ವಲ್ಪ ತೋರಿಸಿಕೊಳ್ಳಬೇಕಲ್ಲ, ಮೇಲ್ನೋಟಕ್ಕೆ ನಾವು ರೈತರ ಪರವಾಗಿ ಇದ್ದೇವೆ ಎಂದು....

ಶ್ರೀ ಸಿ.ಎಂ. ಲಿಂಗಪ್ಪ:- ಇನ್ನೂ ಒಂದು ವರ್ಷ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇನ್ನು ನಿಮ್ಮನ್ನೇ ಕೇಳುವುದಿಲ್ಲ. ಇನ್ನು ನಿಮ್ಮ ಬಜೆಟ್‌ನ್ನು ಯಾರು ಕೇಳುತ್ತಾರೆ? ಅದಕ್ಕೆ ಈ ಬಜೆಟ್ ಏನಾದರೂ ರೈತರ ಪರವಾಗಿ ಇದೆ ಎಂದು ಹೇಳಿ ಸ್ವಲ್ಪ ಸುಣ್ಣಬಣ್ಣ ಹಚ್ಚಿಕೊಳ್ಳಬೇಕಾಗುತ್ತದೆ, ಲಿಪ್‌ಸ್ಟಿಕ್ ಎಲ್ಲಾ ಎಲ್ಲಾ ಹಚ್ಚಿಕೊಳ್ಳಬೇಕಾಗುತ್ತದೆ ಎಂದು ಹೇಳಿ ಅದರಲ್ಲಿ ಬ್ಯುಸಿಯಾಗಿರಬೇಕು. ಅವರು ಬಂದಿದ್ದರೆ ಚೆನ್ನಾಗಿರುತ್ತಿತ್ತು. ದಯವಿಟ್ಟು ನಾನು ಸಹಕಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ಕ್ಯಾಬಿನೆಟ್‌ಗೆ ವಾಪಸ್ಸು ತೆಗೆದುಕೊಂಡು ಹೋಗಿ ಈ ಬಿಜಾಪುರ ಡಿ.ಸಿ.ಸಿ. ಬ್ಯಾಂಕ್‌ನ ಎಲೆಕ್ಷನ್ ಏನಿದೆ, ಅದನ್ನು ಇನ್ನು ಒಂದು ತಿಂಗಳೊಳಗೆ ನಾವು ಮಾಡುತ್ತೇವೆ ಎಂದು ಅನೌನ್ಸ್ ಮಾಡಿದರೆ ಒಳ್ಳೆಯದು. ಬರಗಾಲ ಇದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಜನರಿಗೆ ಬರಗಾಲದಲ್ಲೂ ಸಹಿತ ಕೆಲವು ಚಟಗಳು ಇರುತ್ತವೆ. ಅದರಲ್ಲಿ ಎಲೆಕ್ಷನ್ ಅನ್ನುವುದೂ ಕೂಡ ಒಂದು ಚಟ. ಎಷ್ಟೇ ಬರಗಾಲ ಇದ್ದರೂ, ಎಲೆಕ್ಷನ್ ಎಂದರೆ ಎಲ್ಲಿದ್ದರೂ ಅವರು ಬಂದುಬಿಡುತ್ತಾರೆ. ಆದ್ದರಿಂದ ನೀವು ಚುನಾವಣೆಗೆ ದಿನಾಂಕವನ್ನು ನಿಗಧಿ ಮಾಡಬೇಕು. ಹೈಕೋರ್ಟ್‌ನವರು ಹೇಳಿಬಿಟ್ಟಿದ್ದಾರೆ. ಆದರೆ ಹೈಕೋರ್ಟ್ ಕೆಲವು ಜಡ್ಜ್‌ಗಳ ಬಗ್ಗೆ ನಾವು ಮಾತನಾಡುವ ಹಾಗಿಲ್ಲ. ಆದರೆ ಆರ್ಡರ್‌ಗಳ ಬಗ್ಗೆ ಮಾತನಾಡಬಹುದಲ್ಲಾ? ಇದಕ್ಕೆ ಇಂಟರ್‌ಪ್ರಿಟೇಶನ್‌ನ್ನು ಎರಡು ತರಹದಲ್ಲಿ ಕೊಡಬಹುದು. ನೀವು ನಿಮ್ಮ ಕಾರ್ಯದರ್ಶಿಯವರಿಗೂ ಅದೇ ತರಹ ಬರೆಯಿರಿ ಎಂದು ಹೇಳಿರುತ್ತೀರಿ. ನೋಡಪ್ಪ ಹುಡುಕು, ಇದಕ್ಕೆ ಇಂಟರ್‌ಪ್ರಿಟಿಶನ್ ಹೀಗೆ ಬರುವ ಹಾಗೆ ಏನು ಮಾಡಬೇಕು ಎಂದು ರಿಜಿಸ್ಟ್ರಾರ್, ಸೆಕ್ರಟರಿಗಳಿಗೆಲ್ಲಾ ಹೇಳಿರುತ್ತೀರಿ. ಪಾಪ, ಈ ಕೆಲಸ ಮಾಡುವುದಕ್ಕೆ ಅವರಿಗೆ ಇಷ್ಟ ಇರುವುದಿಲ್ಲ. ಆದರೆ ಅವರು ಮಾಡಬೇಕಾಗುತ್ತದೆ. ನಾವು ಇದ್ದಾಗ ಹೇಗೆ ಮಾಡುತ್ತಿದ್ದರೋ, ಹಾಗೆ ನಿಮಗೆ ಮಾಡಿಕೊಟ್ಟಿದ್ದಾರೆ ಅಷ್ಟೇನೇ ದಯವಿಟ್ಟು ನಾನು ತಮಗೆ ಹೇಳುತ್ತಿದ್ದೇನೆ, withdraw this order and conduct the elections. ಅವರಿಗೆ ಸ್ವಲ್ಪ ತೃಪ್ತಿಯಾಗುತ್ತದೆ. ನಿಜವಾಗಿಯೂ ಉತ್ತರ ಕರ್ನಾಟಕದ ಜನ hats off to them. ನಾನು ಮೆಚ್ಚುತ್ತೇನೆ. ಈ ಶಿಕ್ಷಣ ಸಂಸ್ಥೆಗಳು, ಸಹಕಾರ ಸಂಸ್ಥೆಗಳನ್ನು ಅವರು ಮಾಡಿರತಕ್ಕದ್ದನ್ನು ಖಂಡಿತ ಮೆಚ್ಚಬೇಕು. ನಾವು ಅವರು ಸತ್ತಮೇಲೆ ನೀವು ಹಾಗೆ ಮಾಡಿದಿರಿ, ಹೀಗೆ ಮಾಡಿದಿರಿ ಎಂದು ಹಾರ ಹಾಕಿಬಿಟ್ಟು, ಊದಿನಕಡ್ಡಿ ಹಚ್ಚುವುದರ ಬದಲಾಗಿ ಅವರು ಇದ್ದಾಗ ಇಂತಿಂಥ ಸಂಸ್ಥೆಗಳನ್ನು ಮಾಡಿದಿರಿ ಎಂದು ಹೇಳಿ. ಪಕ್ಕದಲ್ಲೇ ಇನ್ನೊಂದು ಬ್ಯಾಂಕ್ ಇದೆ. ಅದಕ್ಕೆ ಏನಾದರೂ ನೀವು ಕೈಹಾಕುವುದಕ್ಕೆ ಹೋದಿರಾ? ಅದು ಸಿದ್ಧೇಶ್ವರ ಬ್ಯಾಂಕ್ ಅಂತ ಇದೆ. ಅಲ್ಲೂ ಆ ತರಹದವರು ಇರುತ್ತಾರೆ. ಏಕೆಂದರೆ ಅಲ್ಲೂ ಬಿ.ಜೆ.ಪಿ.ಯ ಬಸವನಗೌಡ ಅಂತ ಕಾಣುತ್ತದೆ, ಅವರು ಅಧ್ಯಕ್ಷರಾಗಿದ್ದರು. ಈಗ ಅವರು ತಮಗೆ ಬೇಕಾಗಿರುವವರನ್ನು ಅಧ್ಯಕ್ಷನ್ನಾಗಿ ಮಾಡಿದ್ದಾರೆ. ಈಗ ನಿಮ್ಮ ಹಣಕಾಸಿನ ಪರಿಸ್ಥಿತಿ ಕಷ್ಟ ಇದೆ. ಮತ್ತೆ ನೀವು ಡೆಲ್ಲಿಗೆ ಹೋಗುತ್ತಿದ್ದೀರಲ್ಲಾ, ಅಕ್ಕಿ, ದುಡ್ಡು ಕೊಡಿ ಎಂದು. ಈಗ ಅವನ್ನೆಲ್ಲಾ ನೀವು ಮುಟ್ಟುವುದಕ್ಕೆ ಹೋಗುವುದಿಲ್ಲ ಎಂದು ನಾನಂದುಕೊಂಡಿದ್ದೇನೆ. ಮಳೆ ಬಿದ್ದರೆ ಅವರನ್ನು ಮುಟ್ಟುವುದಕ್ಕೆ ಹೋದರೆ ಕೇಂದ್ರ ಸರ್ಕಾರದ್ದು ಹೊಡೆಯುತ್ತದೆ. ಮತ್ತೆ ಆ ಡಿ.ಸಿ.ಸಿ. ಬ್ಯಾಂಕ್‌ನವರೇನು ಸುಮ್ಮನೆ ಇರುತ್ತಾರಾ? ಯೂನಿಯನ್ ಹೋಮ್ ಮಿನಿಸ್ಟರ್‌ಗೆ ಹೋಗಿ ಹೇಳುತ್ತಾರೆ. ಸಂಬಂಧಪಟ್ಟ ಅಗ್ರಿಕಲ್ಚರ್ ಮಿನಿಸ್ಟರ್‌ಗೆ ಹೋಗಿ ಹೇಳುತ್ತಾರೆ. ಅವರು ಎಲ್ಲೋ ನಿಮಗೆ ಗ್ರಾಂಟ್ಸ್ ಕೊಡತಕ್ಕಂಥ ಸಂದರ್ಭದಲ್ಲಿ ಹೀಗೆಲ್ಲಾ ಮಾಡುತ್ತಿದ್ದೀರಿ ಎಂದು ಫೈಲ್‌ಗಳ ಮೇಲೆ ಬರೆಯುತ್ತಾರೆ. ಅನ್ಯೋನ್ಯ

ಸಂಬಂಧಗಳನ್ನು ಏಕೆ ಹಾಳುಮಾಡುವುದಕ್ಕೆ ಹೋಗುತ್ತೀರಿ? ದಯವಿಟ್ಟು ಎಲೆಕ್ಷನ್ ಮಾಡಿ ಎಂದು ನಿಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ನನಗೆ ಈ ಗಮನ ಸೆಳೆಯುವ ಸೂಚನೆಯಲ್ಲಿ ಮಾನ್ಯ ಉಪಾಧ್ಯಕ್ಷರು ಅಜೆಂಡಾದಲ್ಲಿ ಬರದೇ ಹೋದರೂ ನನಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನನಗೆ ಮತ್ತೊಂದು ಕಾರ್ಯಕ್ರಮ ಇರುವುದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಅವಕಾಶವನ್ನು ತೆಗೆದುಕೊಂಡು ನನಗೆ ಮಾತನಾಡಲು ನನಗೆ ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6.10 ಪಿಎಂ

+ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿಶ್ವನಾಥ್‌ರವರು, ಸಹಕಾರ ಮಂತ್ರಿಗಳಾದಂತಹ ಸಂದರ್ಭದಲ್ಲಿ ಈ ರೀತಿಯಾದ ಒಂದು ರಾಜಕೀಯ ಒತ್ತಡಕ್ಕೆ ಮಣಿಯುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಇವತ್ತು ಏನಾಗಿದೆ ಅಂದರೆ ಸಹಕಾರ ಚಳುವಳಿಯೇ ನಶಿಸಿ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮಹಾರಾಷ್ಟ್ರದಲ್ಲಿ ಮತ್ತು ಗುಜರಾತಿನಲ್ಲಿ ಸಹಕಾರ ಚಳುವಳಿಗೆ ಹೆಚ್ಚು ಒತ್ತು ಕೊಟ್ಟಂಥಾದ್ದು. ಅಲ್ಲಿಯು ಎಷ್ಟೋ ಅಧೋಗತಿಗೆ ಹೋಗುತ್ತಿದೆ. ಆದರಲ್ಲೂ ಕರ್ನಾಟಕದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಈ ಸಹಕಾರ ಚಳುವಳಿಗೆ ಹೆಚ್ಚು ಒತ್ತು ಕೊಟ್ಟಂತಹ ಸಂದರ್ಭದಲ್ಲಿ ಈ ರೀತಿಯಾದ ರಾಜಕೀಯ ಹಸ್ತಕ್ಷೇಪದಿಂದ ಕೇವಲ ಒಂದು ರಾಜಕೀಯ ಕಾರಣದ ಸಲುವಾಗಿ ಇನ್ನು ಯಾವುದೋ ಅವ್ಯವಹಾರಗಳು ನಡೆದಿವೆ, ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಅದರ ಬಗ್ಗೆ ವಿಚಾರಣೆ ಮಾಡಿ, ಆಡಳಿತ ಮಂಡಳಿ ಮಾಡಿ, ಏನು ಬೇಕಾದರೂ ಮಾಡಿ, ಕಾನೂನು ಕ್ರಮ ಕೈಗೊಳ್ಳಿ, ಆದರೆ ಇವತ್ತು ಸತತವಾಗಿ 7 ವರ್ಷಗಳಿಂದ ಆ ಬ್ಯಾಂಕು ಲಾಭದಲ್ಲಿ ಇದೆ. 600 ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿದೆ; ಮತ್ತು ನಮ್ಮ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳಿಂದ ಪ್ರಶಸ್ತಿಯನ್ನು ತೆಗೆದು ಕೊಂಡಿದೆ. ಅಂತಹ ಒಂದು ಆಡಳಿತ ಮಂಡಳಿಯನ್ನು ರದ್ದು ಮಾಡಿ, ಚುನಾವಣೆ ಘೋಷಣೆ ಮಾಡಿ ಕ್ಯಾಲೆಂಡರ್ ಆಫ್ ಇವೆಂಟ್ಸ್ ಆದಮೇಲೆ ಅದನ್ನು ಮುಂದಕ್ಕೆ ಹಾಕುತ್ತೀರಿ. ಇದರಿಂದ ಏನು ಅರ್ಥವಾಗುತ್ತದೆ ಅಂದರೆ, ತಾವು ರಾಜಕೀಯ ಒತ್ತಡಕ್ಕೆ ಮಣಿದಿದ್ದೀರಿ ಎನ್ನುವುದು ಅರ್ಥವಾಗುತ್ತದೆ. ಈಗಾಗಲೇ ನಮ್ಮ ಮುಂದೆ ಒಂದು ಉದಾಹರಣೆ ಇದೆ. ಧಾರವಾಡ ಜಿಲ್ಲಾ ಕೆ.ಸಿ.ಸಿ. ಬ್ಯಾಂಕ್ ಪರಿಸ್ಥಿತಿ ಏನಾಗಿದೆ? ಅದು ನಿಮಗೆಲ್ಲಾ ಗೊತ್ತಿದೆ. ಅವರು ಡೆಲಿಗೇಶನ್ ಬಂದರು, ಸಾಕಷ್ಟು ಸಭೆ ಮಾಡಿದಿರಿ, ಮೊನ್ನೆ ನಿಮ್ಮ ಇನೊಬ್ಬ ಪ್ರಮುಖ ಸಚಿವರಾದ ಮಾನ್ಯ ಹೆಚ್.ಕೆ.ಪಾಟೀಲರು ನಿಮ್ಮ ಬಗ್ಗೆಯೇ ಒಂದು ಅಪನಂಬಿಕೆಯನ್ನು ವ್ಯಕ್ತಪಡಿಸಿ ಪತ್ರಿಕಯಲ್ಲಿ ಒಂದು ಸ್ಟೇಟ್‌ಮೆಂಟ್ ಬಂತು; ಇಲ್ಲಾ ಮಾನ್ಯ ಸಚಿವರಾದ ವಿಶ್ವನಾಥ್‌ರವರು ಕೆಸಿಸಿ ಬ್ಯಾಂಕ್ ಸಲುವಾಗಿ ಒಂದು ಭರವಸೆಯನ್ನು ಕೊಟ್ಟಿದ್ದರು. ಅದನ್ನು ಪುರುದ್ಧಾರ ಮಾಡಲಿಕ್ಕೆ, ಧನದ ಸಹಾಯ ಮಾಡುತ್ತೇವೆಂದು ಹೇಳಿದ್ದರು. ಅದೂ ಆಗಲಿಲ್ಲ ಮತ್ತು ಅದರ ಪರಿಸ್ಥಿತಿ ಹದಗೆಟ್ಟು ಹೋಗಿದೆ ಎನ್ನುವಂತಹ ಮಾತನ್ನು ಹೇಳಿದ್ದರು. ಅಂದರೆ ಅಲ್ಲಿ ಏನಾಗಿದೆ? ಇದಕ್ಕೆ ಮುಖ್ಯ ಕಾರಣವೇನೆಂದರೆ, ಅಲ್ಲಿ ಹಣದ ಅವ್ಯವಹಾರ. ಇಲ್ಲಿ ನಾವೇ ಅದನ್ನು ಪ್ರೊಡ್ಯೂಸ್ ಮಾಡಿದ್ದೆವು. ಈ ಆಡಳಿತ ಮಂಡಲಿಯನ್ನು ರದ್ದು ಮಾಡಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಎಂದು ನಾವೇ ಒತ್ತಾಯ ಮಾಡಿದ್ದೆವು. ಎಷ್ಟೋ ದಿನಗಳ ಮೇಲೆ ಅಲ್ಲಿ ಆಡಳಿತಾಧಿಕಾರಿಗಳು ಬಂದರು. ಅಲ್ಲಿ ಆ ರೀತಿಯ ಪರಿಸ್ಥಿತಿ ಇದೆ. ಆದರೆ ಇಲ್ಲಿ ಯಾರೂ ದೂರು ಕೊಟ್ಟಿಲ್ಲ. ಯಾರದ್ದೂ

ತಕರಾರು ಇಲ್ಲ ಅದು ಸರಿಯಾಗಿ ನಡೆಯುತ್ತಿದ್ದು ರೈತರಿಗೆ ಅನುಕೂಲ ಮಾಡಿಕೊಡುತ್ತಿದೆ. ಅಂತಹ ಆಡಳಿತ ಮಂಡಲಿಯನ್ನು ರದ್ದು ಮಾಡಿ, ಚುನಾವಣೆ ಘೋಷಣೆ ಮಾಡಿದ್ದನ್ನು ಮುಂದಕ್ಕೆ ಹಾಕುತ್ತೀರಿ ಅಂದರೆ ಇದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಪೂರ್ತಿ ಅಪಚಾರ ಮಾಡುವಂತಹ ಕೆಲಸವನ್ನು ನೀವು ಮಾಡುತ್ತಿದ್ದೀರಿ. ನಿಮ್ಮ ಈ ಒಂದು ಕೃತ್ಯ ಅತ್ಯಂತ ಕಠೋರವಾಗಿ ಖಂಡಿಸುವಂತಾದ್ದು, ಅದಕ್ಕಾಗಿ ತಕ್ಷಣವೇ ಈ ಚುನಾವಣೆ ಮಾಡಬೇಕು. ಇವತ್ತು ಈಗಾಗಲೇ ಇದರ ಬಗ್ಗೆ ಬಗ್ಗೆ ಹೈಕೋರ್ಟ್‌ನಿಂದ ಆರ್ಡರ್ ಆಗಿದೆ. ನೀವು ಚುನಾವಣೆ ರದ್ದುಮಾಡಿದಂತಹ ಒಂದು ಆಜ್ಞೆ ಏನು ಇದೆ ಅದನ್ನು ಹೈಕೋರ್ಟಿನವರು ರದ್ದು ಮಾಡಿದ್ದಾರೆ. ಆ ಆರ್ಡರ್‌ನ್ನು ರದ್ದು ಮಾಡಿ ಡೈರೆಕ್ಷನ್ಸ್ ಕೊಟ್ಟಿದ್ದಾರೆ. ಎರಡು ವಾರಗಳಲ್ಲಿ ಇದರ ಬಗ್ಗೆ ನೀವು ನಿರ್ಣಯ ಕೈಗೊಂಡು ಚುನಾವಣೆ ಮಾಡಿ ಎಂದು ಹೇಳಿದ್ದಾರೆ. ಈ ರೀತಿಯಾದ ಪರಿಸ್ಥಿತಿ ಇದ್ದಂತಾದ್ದು, ಮಾನ್ಯ ಮುಖ್ಯಮಂತ್ರಿಗಳು ರಾಜಕೀಯ ಒತ್ತಡಕ್ಕೆ ಮಣಿಯುವುದಿಲ್ಲವೆಂದು ನಾವು ತಿಳಿದಿದ್ದೆವು. ಆದರೆ ಮಾನ್ಯ ಶಿವಾನಂದ ಪಾಟೀಲರು ಒಂದು ಮಾತು ಹೇಳಿದರು. ಅವರ ಕಡೆಯಿಂದ ಡಿಸ್‌ಮಿಸ್ ಎಂದು ಆರ್ಡರ್ ಬರೆಸಿಕೊಳ್ಳುತ್ತಾರೆ. ಅಂದರೆ ಯಾವ ರೀತಿಯ ಒಂದು ಒತ್ತಡಕ್ಕೆ ಅವರು ಒಳಗಾಗಿರಬಹುದು? ಅವರು ಹೇಳುವುದು ಒಂದು ಮಾಡುವುದು ಒಂದು ಆಗಿದೆ. ಮೇಲೆ ಮೌಲ್ಯಗಳ ಬಗ್ಗೆ ಮಾತಾಡುವಂತಾದ್ದು, ಆದರ್ಶಗಳ ಬಗ್ಗೆ ಮಾತನಾಡುವಂತಾದ್ದು, ಆದರೆ ಇಲ್ಲಿ ಕೃತ್ಯ ಮಾತ್ರ ವ್ಯತಿರಿಕ್ತವಾದಂತಾದ್ದು, ಅದಕ್ಕೆ ನಿಮ್ಮಂತಹವರು ಈಲ್ಡ್ ಆಗುತ್ತೀರಿ ಅಂದರೆ ಬಹುಶಃ ನನಗೆ ನಂಬಿಕೆ ಬರುತ್ತಿಲ್ಲ. ಮೌಲ್ಯದ ಬಗ್ಗೆ, ಆದರ್ಶದ ಬಗ್ಗೆ ನಂಬಿಕೆ ಇದ್ದಂತಹವರು ಸಹಕಾರ ಸಚಿವರಾಗಿದ್ದೀರಿ. ಆ ಸಹಕಾರ ಚಳುವಳಿಗೆ ನೀವು ಒತ್ತು ಕೊಡುವಂತಹ ಕೆಲಸ ನಿಮ್ಮಿಂದ ಆಗಬೇಕು. ಆದರೆ ಇದರಲ್ಲಿ, ರಾಜಕೀಯ ಒತ್ತಡ ಮಾಡಿ, ರಾಜಕೀಯ ಹಸ್ತಕ್ಷೇಪ ಮಾಡುವಂತಹ ವಾತಾವರಣ ನಿರ್ಮಾಣ ಮಾಡುವುದು ಬೇಡ. ಅದಕ್ಕಾಗಿ ಮಾನ್ಯ ವಿಶ್ವನಾಥ್‌ರವರು ಸಾಕಷ್ಟು ವಿವರಗಳನ್ನು ಹೇಳಿದ್ದಾರೆ, ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನೀವು ಹೇಳಿದಿರಿ, ಬರಗಾಲದ ಸಲುವಾಗಿ ಚುನಾವಣೆಯನ್ನು ಮುಂದಕ್ಕೆ ಹಾಕಿದೆವು ಎಂದು. ಈಗಾಗಲೇ 110 ಸಹಕಾರ ಸಂಘಗಳ ಚುನಾವಣೆಯನ್ನು ಮಾಡುತ್ತಿದ್ದೀರಿ. ಮೊನ್ನೆ ಎಪಿಎಂಸಿ ಚುನಾವಣೆಗಳನ್ನು ಬರಗಾಲ ಎಂದು ಮುಂದಕ್ಕೆ ಹಾಕುತ್ತೇವೆಂದು ಹೇಳಿದಿರಿ.

ಶ್ರೀ ಶಿವಾನಂದ ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಬೀದರ್ ಡಿಸಿಸಿ ಬ್ಯಾಂಕ್ ಚುನಾವಣೆ ಈ ತಿಂಗಳ 22ಕ್ಕೆ ಇದೆ. ಅದಕ್ಕೆ ಬರಗಾಲ ಇಲ್ಲವೇ?

ಶ್ರೀ ಜಗದೀಶ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಬೀದರ್ ಡಿಸಿಸಿ ಬ್ಯಾಂಕ್ ಚುನಾವಣೆ ಮಾಡುತ್ತಿದ್ದೀರಿ. ಹಾಗಾದರೆ ಅಲ್ಲಿ ಬರಗಾಲ ಇಲ್ಲವೇ? ಕೇವಲ ಬಿಜಾಪುರದಲ್ಲಿ ಮಾತ್ರ ಬರಗಾಲ ಇದೆಯೇ? ಅಂದರೆ ರಾಜಕೀಯ ದುರುದ್ದೇಶ ಮಾಡಲಿಕ್ಕೆ ಏನು ಬೇಕಾದರೂ ನೆವ ಹೇಳುವಂತಾದ್ದು, ಇವತ್ತು ಸೊಸೈಟಿ ಚುನಾವಣೆ ನಡೆಸಲಿಕ್ಕೆ ಬರುತ್ತದೆ. ಆಮೇಲೆ ಎಪಿಎಂಸಿ ಚುನಾವಣೆ ಮುಂದಕ್ಕೆ ಹಾಕಿದಿರಿ. ಆದರೆ ಆಡಳಿತ ಮಂಡಲಿ ಕಂಟಿನ್ಯೂ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಇಲ್ಲಿ ಸರ್ಕಾರಿ ಚಳುವಳಿಯಾಗಿದೆ! ಬೀದರ್‌ನಲ್ಲಿ ಸಹಕಾರಿ ಚಳುವಳಿಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿಶ್ವನಾಥ್‌ರವರು ಇದುವರೆಗೂ ಉತ್ತಮ ಆದರ್ಶ, ಮೌಲ್ಯಗಳನ್ನು ಇಟ್ಟುಕೊಂಡು ಬಂದಿದ್ದಾರೆ ಮತ್ತು ಆದರ್ಶದ

ಬಗ್ಗೆ ಬಹಳ ಮಾತನಾಡುತ್ತಾರೆ. ಅವರು ತಮ್ಮ ಆದರ್ಶವನ್ನು ನಿಜವಾಗಿ ಇಲ್ಲಿ ತೋರಿಸಬೇಕಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರೂ ಅದನ್ನು ನೀವು ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಯಾರೋ ಅಧಿಕಾರಿಗಳು ಹೇಳಿದರೂ ಅದನ್ನು ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಅದೂ ಅಲ್ಲಿ ಇದ್ದಂತಹ ಶಾಸಕರು, ಅಲ್ಲಿದ್ದಂತಹ ರಾಜಕೀಯ ವ್ಯಕ್ತಿಗಳು ಇಲ್ಲ, ಅದನ್ನು ರದ್ದು ಮಾಡಬೇಕೆಂದು ಹೇಳಿದರೆ ಆಗ ಈ ಒಂದು ಆದರ್ಶಕ್ಕೆ ಈ ಒಂದು ಮೌಲ್ಯಗಳಿಗೆ, ಕಾನೂನಿಗೆ ವ್ಯತಿರಿಕ್ತವಾಗಿದ್ದರೆ ಅದನ್ನು ಧಿಕ್ಕರಿಸುವಂತಹ ಕೆಲಸ ನೀವು ಮಾಡಬೇಕಾಗುತ್ತದೆ. ಅದನ್ನು ನೀವು ಮಾಡುತ್ತೀರಿ ಎನ್ನುವಂತಹ ನಂಬಿಕೆ, ವಿಶ್ವಾಸ ನನಗೆ ಇದೆ. ಅದಕ್ಕಾಗಿ ಆದಷ್ಟು ಬೇಗ ಇನ್ನು ಎರಡು ವಾರಗಳಲ್ಲಿ ಚುನಾವಣೆ ನಡೆಸಬೇಕೆಂದು ಹೈಕೋರ್ಟ್‌ನವರು ಏನು ಒಂದು ಡೈರೆಕ್ಷನ್ಸ್ ಕೊಟ್ಟಿದ್ದಾರೆ, ಅಷ್ಟರಲ್ಲಿ ನೀವು ಹೊಸದಾಗಿ ಚುನಾವಣೆಯನ್ನು ಮಾಡಲಿಕ್ಕೆ ವೇಳೆಯನ್ನು ನಿಗದಿ ಮಾಡುತೀರಿ ಎನ್ನುವ ವಿಶ್ವಾಸ ನನಗೆ ಇದೆ. ದಯವಿಟ್ಟು ತಾವು ಅದನ್ನು ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ):- ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಚುನಾವಣೆಯನ್ನು ಘೋಷಣೆ ಮಾಡಿದ್ದು; ಅದನ್ನು ಮಾಡದೇ ವಾಪಾಸ್ಸು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕಾರಣ, ನಮ್ಮ ಮಾನ್ಯ ಸಚಿವರು ಬಹಳ ಅತ್ಯುತ್ತಮವಾಗಿ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿ, ಹೆಸರು ಮಾಡಿದರು. ಮಾನ್ಯ ಶಾಸಕರಾದ ಶಿವಾನಂದ ಪಾಟೀಲರು ಒಂದು ಅತ್ಯುತ್ತಮವಾದ ಮನವಿಯನ್ನು ಗಮನ ಸೆಳೆಯುವ ರೂಪದಲ್ಲಿ ಇಟ್ಟು ಸದನದ ಮೂಲಕ ಸರ್ಕಾರವನ್ನು ಕೇಳಿದ್ದಾರೆ. ನಾನಾದರೂ ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಒಂದು ಮಾತನ್ನು ವಿನಂತಿ ಮಾಡುತ್ತೇನೆ, ಯಾವುದೇ ಒಂದು ಕಾಗದವನ್ನು ನ್ಯಾಯಯುತವಾಗಿ ಕೊಟ್ಟರೆ ಮಾನ್ಯ ಸಚಿವರು ಕೂಡಲೇ ಅದರ ಮೇಲೆ ಕೈಯಲ್ಲಿ ಬರೆಯುತ್ತಾರೆ. ನಾನಂತೂ ಬೇಕಾದಷ್ಟು ಸಲ ನೋಡಿದ್ದೇನೆ, ಅವರು ಯಾರೇ ಒಬ್ಬ ಶಾಸಕರು ಕೊಟ್ಟಂತಹ ಕಾಗದವನ್ನು ಪರೀಶೀಲನೆ ಮಾಡಿ ಕೂಡಲೇ ಬರೆಯುವಂತಹ ಒಂದು ಉತ್ತಮ ಸಂಪ್ರದಾಯವನ್ನು ಇಟ್ಟುಕೊಂಡಂತ ಸಚಿವರು. ಆದರೆ ಮಾನ್ಯ ಶಾಸಕರಾದ ಶ್ರೀ ಶಿವಾನಂದ ಪಾಟೀಲರು ಕೊಟ್ಟಂತಹ ಮನವಿಯನ್ನು ಅವರು ಪುರಸ್ಕಾರ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ದಯಮಾಡಿ ಮಾನ್ಯ ಸಚಿವರು ಸಹಕಾರ ರಂಗದಲ್ಲಿ ತನ್ನದೇ ಆದಂತಹ ಅನುಕೂಲವನ್ನು ನಾವು ಮುಂದುವರಿಸಬೇಕಾದರೆ, ಆ ಜನಗಳಿಗೆ ಅನುಕೂಲ ಮಾಡಬೇಕಾದರೆ ಈ ಸಹಕಾರ ಬ್ಯಾಂಕ್‌ನ ಚುನಾವಣೆಗಳು ಕಾಲಕ್ಕೆ ತಕ್ಕಂತೆ ನಡೆಯಬೇಕು. ಆಗ ಆ ಬ್ಯಾಂಕಿನ ವ್ಯವಹಾರಗಳು ಚಟುವಟಿಕೆಗಳು ಜಾಸ್ತಿಯಾಗಿ ರೈತರಿಗೆ ಅನುಕೂಲ ಜಾಸ್ತಿಯಾಗುತ್ತದೆ. ಆದ್ದರಿಂದ ಅವರು ಸಾರ್ವಜನಿಕರಿಗೆ ಅನುಕೂಲವಾಗತಕ್ಕ ಕೆಲಸವನ್ನು ಮಾಡದೆ ಯಾವುದೇ ಕಾಲಕ್ಕೂ ಅವರು ಮುಟ್ಟುಗೋಲು ಹಾಕುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ. ಮಾನ್ಯ ಅಧ್ಯಕ್ಷರೇ ನಾನು ತುಮಕೂರು ಸಿಟಿ ಬ್ಯಾಂಕ್ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ಒಂದು ಮನವಿಯನ್ನು ಕೊಟ್ಟಿದ್ದೆ ಅವರು ಕೂಡಲೇ ಅದರ ಮೇಲೆ ಆರ್ಡರ್ ಮಾಡಿದರು, ಈ ಬ್ಯಾಂಕ್‌ನ ಚುನಾವಣೆಯನ್ನು ಕೂಡಲೇ ಮಾಡಿ ಎನ್ನುವ ಒಂದು ಆರ್ಡರ್‌ನ್ನು ಕಳೆದ ತಿಂಗಳು ಮಾಡಿಕೊಟ್ಟಿದ್ದಾರೆ. ಆ ಪ್ರಕಾರ ದಯಮಾಡಿ ಅವರು ಬಿಜಾಪುರದ ಕೇಂದ್ರ ಡಿ.ಸಿ.ಸಿ. ಬ್ಯಾಂಕ್ ಚುನಾವಣೆಯನ್ನು ಕೂಡಲೇ ಮಾಡಬೇಕು. ಅವರು ಏನು ಇವತ್ತು ಸಹಕಾರ ರಂಗದಲ್ಲಿ ತಮ್ಮದೇ ಆದ ಒಂದು ನಿಜವಾದ ಸ್ವಯಿಚ್ಛೆಯನ್ನು ಇಟ್ಟುಕೊಂಡು ಈ ಸರ್ಕಾರದಲ್ಲಿ ಉತ್ತಮವಾದ

ಮಂತ್ರಿಯಾಗಿದ್ದಾರೆ ಅವರು ತಮ್ಮ ದಿಟ್ಟ ನಿಲುವನ್ನು ತೋರಿಸಿಕೊಡಬೇಕೆಂದು ಹೇಳಿ ಮತ್ತು ನಾವು ಈ ಒಂದು ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ಕೊಟ್ಟಂತಹ ಮನವಿ ಏನು ಇದೆ ಇದನ್ನು ಪುರಸ್ಕರಿಸಿ ಕೂಡಲೇ ಕೇಂದ್ರ ಸಹಕಾರ ಬ್ಯಾಂಕಿನ ಚುನಾವಣೆಗಳನ್ನು ಮಾಡಬೇಕು. ಈ ದಿಸೆಯಲ್ಲಿ ಆ ಒಂದು ಸಹಕಾರ ರಂಗಕ್ಕೆ ಅನುಕೂಲವನ್ನು ಮತ್ತು ಉತ್ತಮವಾದಂತಹ ಒತ್ತನ್ನು ನೀಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ):- ಮಾನ್ಯ ಉಪಾಧ್ಯಕ್ಷರೇ, ನಮ್ಮ ಬಿಜಾಪುರ ಡಿಸಿಸಿ ಬ್ಯಾಂಕ್ ಸೂಪರ್‌ಸೀಡ್ ಆಗಿ ಅಲ್ಲಿ ಚುನಾವಣೆ ನಡೆಸದೇ ಅದನ್ನು ಮುಂದು ಹಾಕುವಂತಹ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಶ್ರೀ ಶಿವಾನಂದ ಪಾಟೀಲರು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ, ಅವರು ಈ ಪ್ರಸ್ತಾವನೆಯನ್ನು ಸಲ್ಲಿಸಿದಾಗ ನಾನು ಬೆಂಬಲಿಸಿ ಅದಕ್ಕೆ ಸಹಿ ಹಾಕಿದೆ. ನನ್ನ ಪರಿಸ್ಥಿತಿ ಇವತ್ತು ಈ ರೀತಿ ಬರುತ್ತದೆಂದು ನನಗನ್ನಿಸಿರಲಿಲ್ಲ. ಈಗ ಅವರ ಡಿಸಿಸಿ ಬ್ಯಾಂಕ್‌ನ ಪರಿಸ್ಥಿತಿ ಹೇಗೆ ನಡೆದಿದೆಯೋ ಅದೇ ರೀತಿ ನನ್ನ ಸಿರಸಿ ತಾಲ್ಲೂಕಿನಲ್ಲಿ ಮೆಣಸಿ ಸೇವಾ ಸಹಕಾರ ಸಂಘ, ವಾನಳ್ಳಿ ಎಂದು; ಇದನ್ನು ನಾಲ್ಕು ದಿನದ ಹಿಂದೆ ಸೂಪರ್‌ಸೀಡ್ ಮಾಡಿದ್ದಾರೆ. ಅನೇಕರು ಹೇಳಿದಂತೆ ಉತ್ತರ ಕನ್ನಡ ಜಿಲ್ಲೆ ಸಹಕಾರಿ ಕ್ಷೇತ್ರದಲ್ಲಿ ಒಂದು ಆದರ್ಶವನ್ನು ಸ್ಥಾಪಿಸಿರುವಂತಹ ಜಿಲ್ಲೆ, ಬಿಜಾಪುರದ ಡಿ.ಸಿ.ಸಿ ಬ್ಯಾಂಕ್ ಅನೇಕ ಪ್ರಶಸ್ತಿಗಳನ್ನು ತೆಗೆದುಕೊಂಡು ಹೇಗೆ ಕೀರ್ತಿಗೆ ಪಾತ್ರವಾಗಿದೆಯೋ ಹಾಗೆಯೇ ಈ ಮೆಣಸಿ ಸಹಕಾರ ಸಂಘ ವಾನಳ್ಳಿ, ಸಿರಸಿ, ಇದು ಏನಿದೆ ಇದು ಸಹ ಪ್ರಶಸ್ತಿಗಳನ್ನು ತೆಗೆದುಕೊಂಡಿದೆ. ಅಖಿಲ ಭಾರತ ಮಟ್ಟದಲ್ಲಿ ಸುಭಾಷ್ ಯಾದವ್ ಪ್ರಶಸ್ತಿಯನ್ನು ತೆಗೆದುಕೊಂಡಿದೆ. ಇಲ್ಲಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಅತ್ಯುತ್ತಮವಾದ ಸಹಕಾರ ಸಂಘ ಎಂದು ಪ್ರಶಸ್ತಿಯನ್ನು ತೆಗೆದುಕೊಂಡಿದೆ. ಇದೇ ಪ್ರಕಾರ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಪ್ರಶಸ್ತಿಗಳನ್ನು ಸಹ ತೆಗೆದುಕೊಂಡಿದೆ. ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಂಡೆ, ದಯವಿಟ್ಟು ಸೆಕ್ಷನ್ 31ರ ಪ್ರಕಾರ ಅಲ್ಲಿ ವಿಚಾರಣೆ ನಡೆಯುತ್ತಿದೆ. ಅವರು ಸೂಪರ್‌ಸೀಡ್ ಮಾಡುವುದಕ್ಕೆ ತಮ್ಮ ಇಲಾಖೆಯ ಅಧಿಕಾರಿಗಳ ಮೂಲಕ, ತಮ್ಮ ಸರ್ಕಾರದ ಬೇರೆ ಬೇರೆ ಮಂತ್ರಿಗಳ ಕಛೇರಿಗಳ ಮೂಲಕ ಆದೇಶಗಳು ಹೋಗುತ್ತಿದೆ, ದಯವಿಟ್ಟು ಸೂಪರ್‌ಸೀಡ್ ಮಾಡಿಸಬೇಡಿ, ಸಹಕಾರಿ ಕ್ಷೇತ್ರಕ್ಕೆ ಇದೊಂದು ಕಳಂಕ, ಸಹಕಾರಿ ತತ್ವಕ್ಕೆ ಇದೊಂದು ಕಳಂಕ ತರುವಂತಾದ್ದು, ಇದನ್ನು ಮಾಡಿಸಬೇಡಿ ಎಂದು ವಿನಂತಿ ಮಾಡಿಕೊಂಡೆ. ನಾನು ವಿನಂತಿ ಮಾಡಿಕೊಂಡ ಎರಡೇ ದಿನಕ್ಕೆ ಸೂಪರ್‌ಸೀಡ್ ಆಯಿತು. ನನ್ನ ವಿಶ್ರಾಂತಿಯ ಪರಿಣಾಮ ಅಂದರೆ ಆದಷ್ಟು ಶೀಘ್ರದಲ್ಲಿ ಸೂಪರ್‌ಸೀಡ್ ಆದದ್ದು. ಈ ಸರ್ಕಾರದವರು ಡಿಸಿಸಿ ಬ್ಯಾಂಕ್‌ನಂಥ ದೊಡ್ಡ ದೊಡ್ಡದ್ದಕ್ಕೆ ಕೈ ಹಾಕುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಕೇವಲ 900 ಜನ ಸದಸ್ಯರು ಇರುವಂತಹ ಒಂದು ಚಿಕ್ಕ ಸೇವಾ ಸಹಕಾರ ಸಂಘ ಇದು. ಆಡಿಟ್ ವರ್ಷದಲ್ಲಿ (ಅ) ವರ್ಗದಲ್ಲಿರುವಂತಾದ್ದು. (ಅ) ವರ್ಗದಲ್ಲಿರುವಂತಾದ್ದಕ್ಕೆ ಆಡಿಟ್ ರಿಪೋರ್ಟ್ ಇದೆ. ಮಾನ್ಯ ಸಚಿವರಿಗೆ ಗೊತ್ತಿದೆ, ಸಹಕಾರಿ ಕ್ಷೇತ್ರ ಬಹಳ ಪ್ರಮುಖವಾಗಿರುವಂತಾದ್ದು. ಇವತ್ತು ಒಂದು ಪರ್ಯಾಯ ಸರ್ಕಾರವನ್ನೇ ಸಹಕಾರಿ ಕ್ಷೇತ್ರ ನಡೆಸುತ್ತಿದೆ. ನಮ್ಮ ರಾಜ್ಯ ಸರ್ಕಾರದ ಬಜೆಟ್ ಎಷ್ಟು ಅಂದರೆ 25 ಸಾವಿರ ಕೋಟಿ ರೂಪಾಯಿಗಳು. ಸಹಕಾರಿ ಕ್ಷೇತ್ರವೊಂದರೊಳಗೆ 30 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ತೊಡಗಿಸಿಕೊಂಡು, ರಾಜ್ಯದ ಜನತೆಗೆ ಅವರು ಸಹಾಯವನ್ನು ಮಾಡುತ್ತಿದ್ದಾರೆ. ಆ ಸಹಕಾರಿ

ಕ್ಷೇತ್ರದ ಘನತೆ, ಗೌರವ ಮತ್ತು ಪ್ರಾಮುಖ್ಯತೆ ಇದೆಲ್ಲದಕ್ಕೂ ತಿಲಾಂಜಲಿ ಕೊಟ್ಟು, ರಾಜಕಾರಣ ಮಾಡಿ, ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡುವಂಥ ಸ್ಥಿತಿ, ಇದು ಯಾವುದೇ ಸರ್ಕಾರಕ್ಕೆ ಶೋಭೆಯನ್ನು ತರುವಂಥಾದ್ದು ಅಲ್ಲ. ಇದು ಸಹಕಾರಿ ತತ್ವಕ್ಕೆ ಅಗೌರವ ಮಾಡುತ್ತಿರುವಂಥಾದ್ದು ಅಷ್ಟೇ ಅಲ್ಲ, ಆ ಕ್ಷೇತ್ರದ ಪ್ರಾಮಾಣಿಕ ಉನ್ನತಿಗೋಸ್ಕರ ದುಡಿದಂಥ ಯಾರು ನಮ್ಮ ಹಿರಿಯರು ಇದ್ದಾರೋ ಅವರಿಗೆ, ಸರ್ಕಾರದಿಂದ ಮಾಡುತ್ತಿರುವಂಥ ಅವಮಾನ ಇದು. ಹಾಗಾಗಿ, ಮಾನ್ಯ ಸಚಿವರು ಈ ರೀತಿ ಸೂಪರ್‌ಸೀಡ್ ಆಗುವಂಥ ರೋಗ ಹಬ್ಬದಂತೆ ನೋಡಿಕೊಳ್ಳಬೇಕು. ಇದೊಂದು ಸಾಂಕ್ರಾಮಿಕ ರೋಗ ಆಗಬಾರದು. ಈಗ ಆಗುತ್ತಾ ಇದೆ. ಏಕೆಂದರೆ, ವಿಜಾಪುರದಿಂದ ನಮ್ಮ ಜಿಲ್ಲೆಗೆ ಬಂದಿದೆ. ಈ ತತ್ವಕ್ಕೆ ತಿಲಾಂಜಲಿ ಕೊಡುವುದಕ್ಕೆ ನೀವು ಬಿಡಬಾರದು ಮತ್ತು ಇದು ಸಾಂಕ್ರಾಮಿಕ ರೋಗವಾಗುವುದಕ್ಕೆ ಬಿಡಬಾರದು.

ಶ್ರೀ **ಅರಗ ಜ್ಞಾನೇಂದ್ರ**:- ಅವರನ್ನು ಸಹಕಾರಿ ಸಚಿವರು ಎನ್ನುವುದಕ್ಕಿಂತ ಸೂಪರ್‌ಸೀಡ್ ಸಚಿವರು ಎಂದು ಕರೆಯುವುದು ಒಳ್ಳೆಯದೇನೋ? ಏಕೆಂದರೆ, ಅವರು ಬಹಳಷ್ಟು ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡಿಸಿದ್ದಾರೆ.

ಶ್ರೀ **ವಿಶ್ವೇಶ್ವರ ಹೆಗಡೆ ಕಾಗೇರಿ**:- ಒಂದೆರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಒಳ್ಳೆಯ ಡಿ.ಸಿ.ಸಿ. ಬ್ಯಾಂಕುಗಳು ಒಳ್ಳೆಯ ರೀತಿಯಲ್ಲಿ ಚಟುವಟಿಕೆಗಳನ್ನು ನಡೆಸುತ್ತಾ ಇರುವುದಕ್ಕೆ ಗತಿ ಹೀಗಾಗಿದೆ. ಇನ್ನು ಕೆಲವು ಕೆಟ್ಟದ್ದೂ ಇವೆಯೆಂದು ನಾವು ಹೇಳುತ್ತಿರುತ್ತೇವೆ. ಅದನ್ನು ಅಧಿವೇಶನದಲ್ಲೂ ಹೇಳಿದ್ದೇವೆ, ಅಲ್ಲಿಗೆ ಹೋಗಿಯೂ ಹೇಳಿದ್ದೇವೆ. ಮಾನ್ಯ ಅರಗ ಜ್ಞಾನೇಂದ್ರ ಅವರಿಗೆ ಗೊತ್ತಿದೆ, ಸದನದಲ್ಲೂ ಚರ್ಚೆಯಾಗಿದೆ; ಶಿವಮೊಗ್ಗ ಡಿ.ಸಿ.ಸಿ ಬ್ಯಾಂಕ್ ಅಲ್ಲಿ ಬೇಡದೇ ಹೋದರೂ ನೌಕರರನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಇವತ್ತೆಲ್ಲಾ ಕಂಪ್ಯೂಟರೈಸ್ಡ್ ಯುಗ. ಇವತ್ತು ನೌಕರರ ಸಂಖ್ಯೆ ಕಡಿಮೆಯಾಗುತ್ತಾ ಇದೆ. ಆದರೆ, ಮೇಲಿಂದ ಮಂತ್ರಿಗಳೋ, ಮುಖ್ಯಮಂತ್ರಿಗಳೋ ಇನ್ನು ಯಾವ ಯಾವ ಮಂತ್ರಿಗಳೋ ಎಲ್ಲರದ್ದು ಒತ್ತಡ. ಅಲ್ಲಿ ಹುದ್ದೆಗಳ ಮಾರಾಟ ನಡೆಯುತ್ತಾ ಇದೆ. ಅದೆಲ್ಲಾ ಗೊತ್ತಿರುವಂಥಾದ್ದು. ಅಂದರೆ, ಯಾವುದು ಕೆಟ್ಟದ್ದು ಇದೆಯೋ ಅದು ಇನ್ನಷ್ಟು ಕೆಟ್ಟದ್ದಾಗುವುದಕ್ಕೆ ಬೇಕಾಗಿರುವಂಥ ಎಲ್ಲಾ ಪ್ರೋತ್ಸಾಹ. ಒಳ್ಳೆಯದನ್ನು ಕೆಟ್ಟದ್ದು ಮಾಡುವುದಕ್ಕೆ ಪ್ರಯತ್ನ, ಕೆಟ್ಟದ್ದು ಇನ್ನಷ್ಟು ಕೆಟ್ಟದಾಗಿರುವುದಕ್ಕೆ ಬೇಕಾಗಿರುವಂಥ ಪ್ರಯತ್ನ. ಈ ರೀತಿಯಾಗುವುದು ಯಾವ ಸರ್ಕಾರಕ್ಕೂ ಶೋಭೆ ತರುವುದಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಬಹಳ ಪ್ರಮುಖವಾದಂಥಾದ್ದು. ಮಾನ್ಯ ಸಚಿವರಲ್ಲಿ ನನ್ನದೊಂದು ವಿನಂತಿ ಎಂದರೆ, ಇವತ್ತು ರೈತರೆಲ್ಲಾ ಕಂಗಾಲಾಗಿದ್ದಾರೆ. ಇವತ್ತು ಆತ್ಮಹತ್ಯೆ ಪ್ರಕರಣಗಳು, ಇತ್ಯಾದಿಗಳನ್ನು ನೋಡುತ್ತಾ ಇದ್ದೇವೆ. ನಾನು ವಿಶೇಷವಾಗಿ ಹೇಳುವುದಿದ್ದರೆ, ನಮ್ಮ ವಾನಳ್ಳಿ ಸೇವಾ ಸಹಕಾರ ಸಂಘ ಏನಿದೆ, ಇದು ಅಡಿಕೆ ಬೆಳೆಗಾರರಿಗೆ ಸಂಬಂಧಪಟ್ಟಿರುವಂಥಾದ್ದು. ನೂರಕ್ಕೆ ನೂರು ಅಡಿಕೆ ಬೆಳೆಗಾರರು ಇದನ್ನು ಅವಲಂಬಿಸಿಕೊಂಡಿರುವಂಥಾದ್ದು. ಇವತ್ತು ಅಡಿಕೆ ದರ ಕುಸಿದಿದೆ, ಬೆಲೆಗಳು ಕುಸಿದಿದೆ. ಇವತ್ತು ಆ ರೈತರು ಕಂಗಾಲಾಗಿದ್ದಾರೆ. ಈಗ ಮಾರ್ಚ್ ತಿಂಗಳು, ಈಗ ನೀವು ಇದನ್ನು ಸೂಪರ್‌ಸೀಡ್ ಮಾಡಿ, ಆಡಳಿತಾಧಿಕಾರಿ ಅಲ್ಲಿ ಬಂದರೆ ಏನಾಗುತ್ತದೆ ಎಂಬುದನ್ನು ಯೋಚಿಸಿ. ಆದರೆ, ಅವನು ಸದ್ಯ ಬರುವ ಸ್ಥಿತಿ ಅಲ್ಲಿ ಇಲ್ಲ. ಅಲ್ಲಿ ಬಹಳ ಟೆನ್ಷನ್ ಕ್ರಿಯೇಟ್ ಆಗಿದೆ. ಆಡಳಿತಾಧಿಕಾರಿ ಬಂದರೆ ಏನಾಗುತ್ತದೋ ಗೊತ್ತಿಲ್ಲ. ಅಲ್ಲಿ ಕಾನೂನಿನ ಪರಿಸ್ಥಿತಿ ಏನಾಗುತ್ತದೋ

ನನಗೆ ಗೊತ್ತಿರಲ್ಲ. ಅಲ್ಲಿ ಆ ಸ್ಥಿತಿ ನಿರ್ಮಾಣವಾಗಿದೆ. ಅಂತಹ ಒಂದು ಪ್ರಾಮಾಣಿಕ ಒಳ್ಳೆಯ ಸಂಸ್ಥೆಗೆ ಸೂಪರ್‌ಸೀಡ್ ಮಾಡಿದರೆ, ಅಲ್ಲಿ ಆಡಳಿತಾಧಿಕಾರಿ ಹೋಗುವುದು ಕಷ್ಟವಾಗುತ್ತದೆ. ಆ ರೀತಿ ಪರಿಸ್ಥಿತಿ ಇದೆ. ಆದರೆ, ಆಡಳಿತಾಧಿಕಾರಿ ಬಂದರೆ, ಅವನಿಗೆ ಏನು ಗೊತ್ತಿದೆ? ಯಾವ ಸದಸ್ಯನ ಸ್ಥಿತಿ ಏನೇನು, ಅವನು ಯಾವ ಹಿನ್ನೆಲೆಯಲ್ಲಿ ಬಂದು ನೋಡಿಕೊಳ್ಳುತ್ತಾನೆ. ನಾನು ಮೊನ್ನೆ ಆ ಪ್ರದೇಶಕ್ಕೆ ಹೋಗಿದ್ದೆ. ಆ ರೈತರು ಕಂಗಾಲಾಗಿದ್ದಾರೆ. ಅವರು, ಸೊಸೈಟಿಯಾದರೂ ನಮ್ಮನ್ನು ಉಳಿಸುತ್ತೆ ಎಂದುಕೊಂಡಿದ್ದೆವು, ಸರ್ಕಾರ ಉಳಿಸುವುದಿಲ್ಲವೆಂದು ಗೊತ್ತಾಗಿದೆ. ನಮ್ಮ ಸೊಸೈಟಿಯನ್ನೂ ಸೂಪರ್‌ಸೀಡ್ ಮಾಡಿದೆ ಈ ಸರ್ಕಾರ. ಇದಕ್ಕೆ ಕಣ್ಣು, ಹೃದಯ ಏನಾದರೂ ಇದೆಯೇ ಎಂದು ಕೇಳುತ್ತಿದ್ದಾರೆ. ಯಾವುದೇ ರೀತಿಯಲ್ಲಿ ನಮ್ಮ ರೈತರ, ಜನರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಇವರಿಗೆ ಯಾವ ದಿಕ್ಕಿನಿಂದ ಯೋಚನೆ ಮಾಡಿದರೂ ಪ್ರಮಾಣಿಕವಾದ ಕಳಕಳಿ ಇಲ್ಲವೆಂಬುದು ಸ್ಪಷ್ಟವಾಗುತ್ತಾ ಇದೆ. ಹಾಗಾಗಿ, ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡಲು ಬಯಸದೇ, ಬಿಜಾಪುರ ಡಿ.ಸಿ.ಸಿ ಬ್ಯಾಂಕಿಗೆ ತಕ್ಷಣದಲ್ಲಿಯೇ ಚುನಾವಣೆ ಆಗಬೇಕೆಂಬುದನ್ನು ಮತ್ತೊಮ್ಮೆ ಆಗ್ರಹಿಸುತ್ತಾ ನಮ್ಮ ಈ ವಾನಳ್ಳಿ ಸೊಸೈಟಿಯನ್ನು ಏನು ಮೊನ್ನೆ ಸೂಪರ್‌ಸೀಡ್ ಮಾಡಿದ್ದು ಇದೆ, ಇದಕ್ಕೆ ತಕ್ಷಣ ಸ್ಟೇ ಕೊಟ್ಟು ಅಲ್ಲಿ ಆಡಳಿತಾಧಿಕಾರಿ ಹೋಗಗದಿರುವಂತೆ ನಿರ್ದೇಶನ ಕೊಟ್ಟು, ಅಲ್ಲಿ ಜನರಿಂದ ಚುನಾಯಿತವಾದ ಆಡಳಿತ ಮಂಡಳಿ ಏನಿದೆ, ಅದು ಮುಂದುವರಿಯುವುದಕ್ಕೆ ಬೇಕಾಗಿರುವಂಥ ಸೂಕ್ತ ನಿರ್ದೇಶನವನ್ನು ಮಾನ್ಯ ಸಚಿವರು ಕೊಡಬೇಕೆಂಬ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ):- ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಜಿಲ್ಲಾ ಸಹಕಾರಿ ಬ್ಯಾಂಕಿನ ಆಡಳಿತಾಧಿಕಾರಿಗಳನ್ನು ನೇಮಿಸಿ, ಚುನಾವಣೆಯನ್ನು ತಾವು ಮುಂದೆ ಹಾಕಿದ್ದೀರಿ. ಈಗ ನಾನು ಮಾತನಾಡುವಾಗ ತಿತಳಿಯಿತು. ನಾನು ಮುಂದೆ ಹಾಕಿಲ್ಲ, ಮುಖ್ಯಮಂತ್ರಿಗಳು ಹಾಕಿದ್ದಾರೆ ಎಂದು ಅದು ಸರಿಯೇ? ಮುಖ್ಯಮಂತ್ರಿಗಳು ಮುಂದೆ ಹಾಕಿದರೂ ಕೂಡ, ಅದು ನಿಮ್ಮ ಆರ್ಡರ್ ಮೇಲೆಯೇ ಆಗಿದೆಯೇ ಹೇಗೆ ಎಂಬುದು ಬೇಕಾಗಿದೆ. ಮಾನ್ಯ ಶಿವಾನಂದ ಪಾಟೀಲರು ಹೇಳುತ್ತಾ, ಮುಖ್ಯಮಂತ್ರಿಗಳೇ ಮುಂದೆ ಹಾಕಿದ್ದಾರೆಂದು ಹೇಳಿದರು. ಆಗ ತಾವು ಸುಮ್ಮನೇ ಕುಳಿತಿದ್ದಿರಿ ಎಂದಾಗ, ಮಾನ್ಯ ಮುಖ್ಯಮಂತ್ರಿಗಳು ಹಾಕಿದ್ದಾರೆಂದು ನಾನು ತಿಳಿದುಕೊಳ್ಳುತ್ತೇನೆ. ಒಂದು ವೇಳೆ ಮುಖ್ಯಮಂತ್ರಿಗಳೇ ಮುಂದೆ ಹಾಕಿದ್ದರೆ, ಅವರಿಗೆ ಅಧಿಕಾರ ಇಲ್ಲ. ಅವರಿಗೆ ಒಂದು ಅಧಿಕಾರ ಇದೆ. ನಿಮಗೆ ಕೊಟ್ಟಿರುವ ಖಾತೆಯನ್ನು ಕಸಿದುಕೊಂಡು, ಅವರು ಸಹಕಾರಿ ಮಂತ್ರಿಯಾಗಿ ಚುನಾವಣೆ ಮುಂದೆ ಹಾಕಬಹುದು. ಇದನ್ನು ಸಹಕಾರಿ ಮಂತ್ರಿ ಮಾತ್ರ ಮುಂದೆ ಹಾಕಬೇಕು. ಮುಖ್ಯಮಂತ್ರಿಗಳೇನೋ ತಮ್ಮ ಅಧಿಕಾರ ಉಪಯೋಗಿಸಿಕೊಂಡು ಇದನ್ನು ಮುಂದೆ ಹಾಕಿರಬಹುದು. ಆದರೆ, ಒಬ್ಬ ಸಹಕಾರಿ ಮಂತ್ರಿಗೆ ಮಾತ್ರ ಈ ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಅಧಿಕಾರವಿದೆಯೇ ವಿನಹಃ ಮುಖ್ಯಮಂತ್ರಿಗಳಿಗೆ ಆ ಅಧಿಕಾರ ಇಲ್ಲ. ಅವರಿಗಿರುವ ಸರ್ವೋಚ್ಛ ಅಧಿಕಾರ ಏನೆಂದರೆ ನಿಮ್ಮ ಇಲಾಖೆಯ ಖಾತೆಯನ್ನು ಕಸಿದುಕೊಂಡು, ಅವರು ಸಹಕಾರಿ ಮಂತ್ರಿಯಾಗಿ ಮುಂದೆ ಹಾಕಬಹುದು. ಇದು ಇರತಕ್ಕಂಥ ಪರಿಸ್ಥಿತಿ. ಆದರೂ ಕೂಡ ಮುಖ್ಯಮಂತ್ರಿಗಳು ತಮ್ಮ ಅಧಿಕಾರ ಚಲಾಯಿಸಿ ಮಾಡಿದ್ದಾರೆಂಬ ಮಾತನ್ನು ಕೂಡ ಅವರು ಹೇಳಿದರು. ಬಹುಶಃ ಕಾಯಿದೆ ತಿದ್ದುಪಡಿ ಮಾಡುವ ಮುನ್ನ, ಹಿಂದಿನ ಸಹಕಾರಿ ಮಂತ್ರಿಗಳಾದ ಮಾನ್ಯ ಡಿ.ಕೆ.ಶಿವಕುಮಾರ್‌ರವರು, ನನ್ನನ್ನೂ ಸೇರಿಸಿಕೊಂಡು 3-4 ಮಂದಿಯ

ಕಮಿಟಿ ಮಾಡಿದ್ದರು. ನಾವು ಕರಾರುವಾಕ್ಕಾಗಿ ಮಾಡಿದ್ದೆವು. ಕೆಲವು ಸಲ ಲೋಕಸಭೆ, ರಾಜ್ಯಸಭೆ ಚುನಾವಣೆಗಳು ಬರುತ್ತವೆ ಆಗ ಮುಂದೆ ಹಾಕಬೇಕಾಗುತ್ತದೆ. ಬರ ಬಂದಾಗ ಚುನಾವಣೆಯನ್ನು ಮುಂದೆ ಹಾಕಬೇಕಾಗುತ್ತದೆ. ಅನಿವಾರ್ಯ ಪ್ರಸಂಗಗಳಲ್ಲಿ ಮುಂದೆ ಹಾಕುತ್ತಾರೆ. ಏಕೆಂದರೆ, ಚುನಾವಣೆ ಮುಂದೆ ಹಾಕುವುದಕ್ಕೆ ಅಧಿಕಾರ ಇಲ್ಲದ ಹಾಗೆ ಮಾಡಿ, ಕಾಯಿದೆಯೆಲ್ಲವನ್ನೂ ತೆಗೆದು ಹಾಕಿದ್ದೆವು. ಚುನಾವಣೆ ಮುಂದೆ ಹಾಕಲು ಅಧಿಕಾರ ಇರಲಿಲ್ಲ. ಪ್ರತಿ ವರ್ಷ ಕಡ್ಡಾಯವಾಗಿ ಚುನಾವಣೆ ಮಾಡಬೇಕು, ಚುನಾವಣೆ ಮಾಡದೇ ಹೋದರೆ ಆಡಳಿತ ಮಂಡಳಿಗೆ, ಆಡಳಿತಾಧಿಕಾರಿ ಬರಬೇಕು. ಅವರಿಗೆ ಶಿಕ್ಷೆ ದಂಡ ಹೀಗೆ ಏನೇನೋ ಆ ಕಾಯಿದೆಯಲ್ಲಿ ಇಟ್ಟಿದ್ದೆವು. ಅನಿವಾರ್ಯ ಪ್ರಸಂಗಗಳಲ್ಲಿ ಚುನಾವಣೆಯನ್ನು ಮುಂದೆ ಹಾಕತಕ್ಕ ಪ್ರಸಂಗ ಬಂದಾಗ ಅಧಿಕಾರ ಇರಬೇಕಾಗುತ್ತದೆಂದು ಬಡಿದಾಡಿದ್ದೆವು. ಆದರೂ ನಾವು ಒಪ್ಪುತಿರಲಿಲ್ಲ. ಈಗಲೂ ಕೂಡ ನಾವು ಏನು ಬಡಿದಾಡಿಕೊಂಡರೂ ಕೂಡ ನೀವೇನಾದರೊಂದು ಉತ್ತರ ಹೇಳುತ್ತೀರಿ, ನಾವು ಸುಮ್ಮನೆ ಹೊರಗೆ ಹೋಗಬೇಕು. ಏಕೆಂದರೆ, ಮೆಜಾರಿಟಿ ಇದೆ. ಈ ಕಾರಣದಿಂದ ನಾವು ಸುಮ್ಮನಾಗಿದ್ದೆವು. ಇನ್ನು ಕೆಲವು ಬಹಳ ಕೆಟ್ಟ ಕೆಟ್ಟ ಕಾಯಿದೆಗಳು ಇದ್ದವು. ಸಹಕಾರಿಗಳಾದರೆ ಮಾತ್ರ ಇಲ್ಲಿ ಬರುತ್ತಿದ್ದರು. ಬೇರೆ ಯಾರೂ ಬರುತ್ತಿರಲಿಲ್ಲ. ಈಗಾಗಲೇ ಒಳ್ಳೊಳ್ಳೆಯ ಸಹಕಾರಿಗಳು ಇದರಿಂದ ಹೊರಗೆ ಹೋಗುತ್ತಿದ್ದಾರೆ. ಪ್ರಾಮಾಣಿಕ ಸಹಕಾರಿಗಳು ಇಲ್ಲಿ ಉಳಿಯುವುದಿಲ್ಲ. ಅಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ, ಸಹಕಾರಿ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ. ಇದು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾಯಿತು. ಇನ್ನು ಬಹಳ ಚುನಾವಣೆಗಳನ್ನು ಮುಂದೆ ಹಾಕುತ್ತಿದ್ದಾರೆ. ರಾಜಕೀಯ ಬರುತ್ತದೆ, ಇಲ್ಲ ಎಂದಲ್ಲ. ನಾನು ಆ ಇಲಾಖೆಯ ನಿರ್ವಹಣೆ ಮಾಡಿದ್ದೇನೆ, ನನಗೆ ಅನುಭವ ಇಲ್ಲವೆಂದಲ್ಲ. ಅನುಭವವಾಗಿಯೇ ಆ 121ನ್ನು ತೆಗೆದುಹಾಕಿದ್ದೇವೆ. ಇದು ಇರಬಾರದು ಎಂದು ಆಡಳಿತ ಪಕ್ಷದ ಎಂ.ಎಲ್.ಎ.ಗಳ ಕೈಯಲ್ಲಿ ಈ ಸಹಕಾರಿ ರಂಗ ಸಿಕ್ಕಿಕೊಂಡು ಸಾಯುತ್ತಾ ಇದೆ; ಅದು ಮುಚ್ಚಿ ಹೋಗುತ್ತಾ ಇದೆ, ಇವತ್ತು ಹಾಳಾಗಿ ಹೋಗುತ್ತಾ ಇದೆ. ಈಗ ನೀವು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಮಾನ್ಯ ಸಿಂಧ್ಯರವರು ಹೇಳಿದಹಾಗೆ, ನಾವು ಆ ಕಡೆ ಬಂದು ಕುಳಿತರೆ, ನಾವು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹೀಗಾಗಿ ಅವು ಸಂಪೂರ್ಣವಾಗಿ ಮುಚ್ಚಿಹೋಗಿ, ಒಳ್ಳೆಯ ಜನರು ಆ ಕ್ಷೇತ್ರದಲ್ಲಿ ಬರುವುದಿಲ್ಲ. ನಮ್ಮದು ಇಡೀ ರಾಷ್ಟ್ರದಲ್ಲಿಯೇ ಮೂರನೇ ಸ್ಥಾನದಲ್ಲಿರತಕ್ಕ ಸಹಕಾರಿ ಕ್ಷೇತ್ರ. ನಾವು ದಾಪುಗಾಲು ಹಾಕುತ್ತಾ ಇದ್ದೇವೆ. ಸರ್ಕಾರದಿಂದ ಇಷ್ಟೊಂದು ಹಸ್ತಕ್ಷೇಪವಾದರೆ, ಖಂಡಿತವಾಗಿಯೂ ಆ ಸಹಕಾರಿ ಕ್ಷೇತ್ರ ಉಳಿಯುವುದಿಲ್ಲ. ಈ ಕಾರಣದಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದು. ನೀವು ಎಷ್ಟು ದಿವಸ ಇರುತ್ತೀರಿ, ಅದು ಮಹತ್ವವಲ್ಲ. ನಾನು ಐದು ವರ್ಷ ಇದ್ದೆ, ಮತ್ತೆ ಇಲ್ಲಿ ಬಂದೆ. ಶ್ರೀ ಡಿ.ಕೆ.ಶಿವಕುಮಾರ್ ಇದ್ದರು, ಮುಖ್ಯಮಂತ್ರಿಗಳು ಅವರನ್ನು ಬದಲು ಮಾಡಿದರು. ಅವರು ಬದಲಾದರು. ನಿಮಗೂ ಮನಸ್ಸಿಲ್ಲದೆ ಅಲ್ಲಿದ್ದೀರಿ. ಏಕೆಂದರೆ, ನಿಮಗೇನೋ ಒಂದು ಶಿಕ್ಷೆ ಮಾಡಿ ಕಳುಹಿಸಿದ ಹಾಗೆ ನಿಮಗನಿಸಿದೆ. ವಿದ್ಯಾಖಾತೆಯಲ್ಲಿ ಕ್ರಾಂತಿ ಮಾಡುವುದಕ್ಕೆ ಹೊರಟಿದ್ದಿರಿ, ಅಲ್ಲಿಂದ ನಿಮ್ಮನ್ನು ತೆಗೆದರು ಎಂದು ಈಗ ನೀವು ಡಿಸಿಡೆಂಟ್ ಆಗಿದ್ದೀರಿ ಎಂದು ಕಾಣುತ್ತದೆ. ಅವರಿಗೆ ಸಹಕಾರಿ ಇಲಾಖೆಯಲ್ಲಿ ಮನಸ್ಸು ಇಲ್ಲ, ಪರಿಸ್ಥಿತಿ ಹಾಗೆ ಇದೆ. ದಯವಿಟ್ಟು ನಿಮಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಇರುವುದು ಮಹತ್ವ ಅಲ್ಲ, ಸರ್ಕಾರ ಇರುವುದು ಬಹಳ ಮಹತ್ವ ಅಲ್ಲ. ಸಹಕಾರಿ ಆಂದೋಳನವನ್ನು ಹುಟ್ಟಿಹಾಕಿದಂಥ ರಾಜ್ಯ ಇದು. ಇಡೀ

ದೇಶದಲ್ಲಿಯೇ ಸಹಕಾರಿ ಚಳುವಳಿಯನ್ನು ಪ್ರಾರಂಭ ಮಾಡಿದಂಥ ಒಂದು ರಾಜ್ಯ. ಅದೂ ಉತ್ತರ ಕರ್ನಾಟಕದ ಭಾಗದಲ್ಲಿ ಗದಗ್ ಎಂಬ ಜಿಲ್ಲೆಯಲ್ಲಿ, ಗದಗ್ ತಾಲ್ಲೂಕಿನ ಕಣಜನಾಳ್ ಗ್ರಾಮದಲ್ಲಿ ಸಹಕಾರಿ ಕ್ಷೇತ್ರವನ್ನು ಹುಟ್ಟುಹಾಕುವ ಮೂಲಕ ಈ ರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರಕ್ಕೆ ನಾಂದಿ ಹಾಡಿದ್ದು. ಒಬ್ಬ ಕುರುಬಗೌಡರು ಸಹಕಾರಿ ಕ್ಷೇತ್ರವನ್ನು ಹುಟ್ಟು ಹಾಕಿದ್ದಾರೆ, ತಮಗೆಲ್ಲಾ ಗೊತ್ತಿರುವ ಹಾಗೆ, ಅವರು ಬಹಳ ಹಿಂದುಳಿದಂಥವರು. ಅಂತಹ ಗೌಡರು ಈ ಸಹಕಾರಿ ಕ್ಷೇತ್ರವನ್ನು ಹುಟ್ಟುಹಾಕಿದವರು. ನಿಮ್ಮ ಆಫೀಸಿನಲ್ಲಿ ಅವರ ಫೋಟೋ ಇಟ್ಟುಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ತಂದು ಹಾಕಿಸಿ. ನಾನು ಮಾತ್ರ ಎಲ್ಲಾ ಕಡೆ ಹಾಕಿಸಿದ್ದೆ. ಇವತ್ತು ನಿಜವಾಗಿಯೂ ಅವರ ಹೆಸರನ್ನು ಹೇಳಬೇಕು. ಇಡೀ ರಾಷ್ಟ್ರದಲ್ಲಿಯೇ ಸಹಕಾರಿಗಳು ಯಾರಾದರೂ ಇದ್ದರೆ, ನಮ್ಮ ಸಿದ್ದನಗೌಡರ ಹೆಸರು ಹೇಳಬೇಕಾಗುತ್ತದೆ. ಅಂತಹ ಕ್ಷೇತ್ರ ಹುಟ್ಟಿದಂಥ ಈ ರಾಜ್ಯದಲ್ಲಿ ಈ ಸಹಕಾರಿ ಕ್ಷೇತ್ರಕ್ಕೆ ಪೂರಕವಾದ ವ್ಯವಸ್ಥೆಯನ್ನು ಮಾಡಬೇಕೇ ವಿನಹ ಇದರಲ್ಲಿ ನಾವು ರಾಜಕೀಯವನ್ನು ತಂದುಕೊಳ್ಳುತ್ತಾ ಹೋದರೆ ಖಂಡಿತವಾಗಿಯೂ ಸಂಪೂರ್ಣವಾಗಿ ಮುಚ್ಚಿ ಹೋಗುತ್ತದೆ. ಈ ಕಾರಣದಿಂದ, ನಾನು ದಯವಿಟ್ಟು ಹೇಳುತ್ತೇನೆ. ಕೆಲವು ಚುನಾವಣೆಗಳನ್ನು ಮುಂದೆ ಹಾಕಿದ್ದೀರಿ, ಕೆಲವರು ಕೋರ್ಟ್‌ಗೆ ಹೋಗಿ ಸ್ಟೇ ತರುವ ಪ್ರಯತ್ನ ಮಾಡುತ್ತಿದ್ದಾರೆ. ಆಮೇಲೆ, ಇದನ್ನು ನಾವು ಯಾವ ಉದ್ದೇಶಕ್ಕೆ ಮಾಡಿದೆವು ಎಂದರೆ, ಅವತ್ತು ನಾವು ಒಪ್ಪಿಕೊಂಡಿದ್ದೆವು. ಅವತ್ತು ನಮ್ಮಗೌಡರು, ಎಲ್ಲರೂ ಇದ್ದೆವು. ಹಿರಿಯ ಸಹಕಾರಿಗಳು ಇದ್ದೆವು. ಹಿಂದಿನ ಮಂತ್ರಿಗಳಾದಂಥ ಶ್ರೀ ರಂಗನಾಥ್‌ರವರು ಅಧ್ಯಕ್ಷರಾಗಿದ್ದರು. ಮಾನ್ಯ ನಾಣಯ್ಯನವರು ಇದ್ದರು. ಎಲ್ಲರೂ ಕೂಡಿಕೊಂಡು ಒಂದು ತೀರ್ಮಾನ ಮಾಡಿ, ಕೆಲವು ಸಲ ಅನಿವಾರ್ಯವಾಗಿ ಸರ್ಕಾರಕ್ಕೆ ಚುನಾವಣೆಗಳನ್ನು ಮುಂದೆ ಹಾಕುವ ಅಧಿಕಾರ ಇರಬೇಕೆಂಬ ದೃಷ್ಟಿಯಿಂದ ಮಾಡಿದೆವು. ಏಕೆಂದರೆ, ಕೆಲವು ಸಲ ಬರ ಬರುತ್ತದೆ. ಆಗ ಚುನಾವಣೆಗಳನ್ನು ಮಾಡುವುದಕ್ಕಾಗುವುದಿಲ್ಲ, ಮುಂದೆ ಹಾಕಬೇಕಾಗುತ್ತದೆ ನಿಜ. ಹಾಗಿದ್ದಲ್ಲಿ, ನೀವು ಎಲ್ಲಾ ಚುನಾವಣೆಗಳನ್ನು ಮುಂದೆ ಹಾಕಬೇಕು. ಇಡೀ ರಾಜ್ಯದಲ್ಲಿಯೇ ಬರ ಇದೆ. ಅದೇ ಜಿಲ್ಲೆಯಲ್ಲಿ ಕೆಲವು ಚುನಾವಣೆಗಳು ನಡೆಯುತ್ತವೆ, ಆದರೆ ಇದೊಂದು ಮಾತ್ರ ಮುಂದೆ ಹಾಕುತ್ತೀರಿ. ಅದರಲ್ಲಿಯೂ ಈ ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನ ಚುನಾವಣೆ ಮುಂದೆ ಹಾಕಿರುವುದು ಬಹಳ ತಪ್ಪು. ತಾವೇನೋ ಅದರಲ್ಲಿ ಹೇಳಿದ್ದೀರಿ. ಅಂದರೆ, ಅವರು ಕೋರ್ಟಿನ ಆದೇಶ ಪಾಲನೆ ಮಾಡಲಿಲ್ಲ, ಅದರ ಬಗ್ಗೆ ಚುನಾವಣೆ ನಡೆಸಲಿಲ್ಲ ಎಂಬ ಮಾತನ್ನು ಇದರಲ್ಲಿ ನಿಮ್ಮ ಅಧಿಕಾರಿಗಳು ಹೇಳಿದ್ದಾರೆ. ಅವರು ನಿಜವಾದ, ಪೂರ್ಣವಾದ ವಿವರಣೆ ಕೊಡಲಿಲ್ಲ. ಯಾರೇ ಆಗಲಿ ದಿಟ್ಟವಾಗಿ ಹೇಳುವುದನ್ನು ಕಲಿಯಬೇಕು. ಅಧಿಕಾರವೇನೂ ಬಹಳ ದಿವಸಗಳ ಕಾಲ ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ, ಇವೊತ್ತು ವೀರಶೈವ ಬ್ಯಾಂಕ್ ಏನಿದೆ, ಅದನ್ನು ನಿಮ್ಮ ಪಕ್ಷದವರ ಕೈಯಲ್ಲಿಯೇ ಸೂಪರ್‌ಸೀಡ್ ಮಾಡಿಸಿದ್ದೀರಿ. ಅದು ಇದ್ದುದ್ದರಲ್ಲಿಯೇ ಒಳ್ಳೆಯ ಬ್ಯಾಂಕ್ ಆಗಿತ್ತು. ಹೀಗೆ ನೀವು ಮಾಡುತ್ತಾ ಹೋದರೆ ಇಡೀ ಕೋ-ಆಪರೇಟಿವ್ ಮೂವ್‌ಮೆಂಟ್ ಹಾಳಾಗಿ ಹೋಗುತ್ತದೆ, ಇಡೀ ರಾಜ್ಯದಲ್ಲಿ ಒಂದು ಸೊಸೈಟಿಯೂ ಉಳಿಯದ ಹಾಗೆ ಸೂಪರ್‌ಸೀಡ್ ಮಾಡಬೇಕಾಗುತ್ತದೆ.ಅವರುಗಳು ಕಳುಹಿಸಿದ ವಿವರಗಳನ್ನು ನಾನು ಓದಿದ್ದೇನೆ, ತಾವು ಅದನ್ನು ಓದಿರಿ,ಒಂದು ವಿಷಯವನ್ನು ತಾವು ಗಮನದಲ್ಲಿಡಬೇಕು. ಸಹಕಾರ ತತ್ವದ ಚಳುವಳಿ ಏನಾದರೂ ಚೆನ್ನಾಗಿದ್ದರೆ, ಅದು ಉತ್ತರ ಕರ್ನಾಟಕದಲ್ಲಿ ಇದೆ ಎಂಬುದನ್ನು ತಾವು ಮರೆಯಬಾರದು. ಅದರ ಮಾದರಿಯಲ್ಲಿಯೇ ನಾವು ಇಡೀ ರಾಜ್ಯದಲ್ಲಿ ವ್ಯಾಪಾರ

ಅಭಿವೃದ್ಧಿಯನ್ನು ಮಾಡಿದ್ದೇವೆ. ಮೊದಲು ಬಿಜಾಪುರದ್ದು ಬಹಳ ಹಿಂದೆ ಬಿದ್ದಿತ್ತು. ಈಗ ತಾವುಗಳು ವರ್ಣನೆ ಮಾಡಿದ ಹಾಗೆ, ಮಾನ್ಯ ಶಿವಾನಂದ ಪಾಟೀಲ್‌ರವರು ಅಧ್ಯಕ್ಷರಾಗಿ ಬಂದ ಮೇಲೆ ಮತ್ತು ಅವರ ಜೊತೆಗೆ ಜಾಯಿಂಟ್ ರಿಜಿಸ್ಟ್ರಾರ್ ಆಗಿದ್ದು ಶ್ರೀ ಪಾಟೀಲ್ ಎನ್ನುವವರನ್ನು ಎಂ.ಡಿ. ಆಗಿ ಹಾಕಿದ ಮೇಲೆ ಅದು ಬಹಳ ಚೆನ್ನಾಗಿ ಬೆಳೆಯಿತು. ಈಗ ಅದು ರಾಷ್ಟ್ರದಲ್ಲಿಯೇ ಒಂದು ಮಾದರಿ ಬ್ಯಾಂಕ್ ಆಗಿ ಬಿಟ್ಟಿದೆ. ಧಾರವಾಡದ ಕೆಸಿಸಿ ಬ್ಯಾಂಕ್ ಕೆಟ್ಟಿದೆ. ಅದು ಕೇವಲ ನಾಲ್ಕಾರು ವರ್ಷಗಳಿಂದ ಕೆಟ್ಟದ್ದಲ್ಲ. ಅದರಲ್ಲಿ ಸುಮಾರು 30 ವರ್ಷಗಳಿಂದ ರಾಜಕೀಯವು ಹೊಕ್ಕಿದೆ. ಅದು ಯಾವ ಪಕ್ಷ ಬಂದರೂ ಸೂಪರ್‌ಸೀಡ್ ಆಗುತ್ತಾ ಹೋಯಿತು. ಅದು ಆಡಳಿತ ದೊಷದಿಂದಾಗಿ ಕೆಟ್ಟುಕೊಂಡು ಬಂದು ಮುಂದೆ ಸುಧಾರಿಸದಂಥ ಸ್ಥಿತಿಗೆ ತಲುಪಿದೆ. ಅದು ಯಾರ ತಪ್ಪಿನಿಂದ ಎಂಬುದನ್ನು ನೋಡೋಣ. ನಾವು ಎಲ್ಲೆಲ್ಲಿ ಆಡಳಿತ ಮಂಡಳಿಗಳನ್ನು ಸೂಪರ್‌ಸೀಡ್ ಮಾಡಿ ಆಡಳಿತಾಧಿಕಾರಿಗಳನ್ನು ನೇಮಿಸುತ್ತೇವೋ, ಅಲ್ಲಿ ಯಾವ ಸಂಘಗಳೂ ಚೆನ್ನಾಗಿ ನಡೆಯಲು ಸಾಧ್ಯವಿಲ್ಲ. ಆ ಕಾರಣದಿಂದಾಗಿ ನಾನು ಹೇಳುತ್ತೇನೆ, ಅಲ್ಲಿ ದಯವಿಟ್ಟು ಚುನಾವಣೆಯನ್ನು ಮಾಡಿ, ಯಾರು ಆರಿಸಿ ಬರುತ್ತಾರೋ, ಅವರು ಬರಲಿ, ಇವತ್ತಿನ ದಿವಸ ಚುನಾವಣೆಗಳನ್ನು ಏನು ಮುಂದೆ ಹಾಕುತ್ತಾ ಇದ್ದೀರಲ್ಲ. ಅದನ್ನು ದಯವಿಟ್ಟು ನಿಲ್ಲಿಸಿ, ಯಾವುದೇ ಕಾರಣಕ್ಕೂ ಹಾಗೆ ಮಾಡದೆ ಚುನಾವಣೆಗಳನ್ನು ಜೂನ್ ತಿಂಗಳಲ್ಲಾದರೂ ಮಾಡಿರಿ. ಒಂದು ವೇಳೆ ಚುನಾವಣೆಗಳನ್ನು ಮುಂದಕ್ಕೆ ಹಾಕುವುದಾದರೆ ಎಲ್ಲಾ ಚುನಾವಣೆಗಳನ್ನು ಒಂದೇ ಸಲಕ್ಕೆ ಮುಂದಕ್ಕೆ ಹಾಕಿಬಿಡಿ. ಚುನಾವಣೆಗಳನ್ನು ಮಾಡುವುದರಿಂದ ಮತ್ತೆ ಖರ್ಚಾಗುತ್ತದೆ, ಮತ್ತೆ ಅದಕ್ಕೆ ಬರ ಬರುತ್ತದೆ. ಈಗ ಅವರು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿಬಿಟ್ಟಿದ್ದಾರೆ. ಇಂಥ ಹೊತ್ತಿನಲ್ಲಿ ನೀವು ಓಟಿಂಗ್ ಟೈಮ್‌ನಲ್ಲಿ ರಾಜಕೀಯ ದೃಷ್ಟಿಯಿಂದ ಅಥವಾ ಇನ್ನಾವುದೇ ಕಾರಣಕ್ಕೆ ಮುಂದೆ ಹಾಕಿದರೆ, ಮತ್ತಷ್ಟು ಅಸಮಾಧಾನಗಳು ಬರುತ್ತವೆ. ಈಗ ಇದನ್ನು ಮುಂದೆ ಹಾಕಬೇಕೆನ್ನುವ ಇಚ್ಛೆ ಇದೆಯೇ? ಹೇಗೂ ಬರ ಇದೆ. ಒಂದು ನೋಟೀಸ್‌ನ್ನು ಕಳುಹಿಸಿಬಿಡಿ. ಎಲ್ಲಾ ಚುನಾವಣೆಗಳನ್ನು ಒಂದೇ ಸಾರಿ ಮುಂದಕ್ಕೆ ಹಾಕಿದ್ದೇವೆಂದು ಹೇಳಿಬಿಡಿ. ಆಮೇಲೆ ನಿಮಗೆ ಯಾವ ಯಾವ ಪಕ್ಷದವರು ಎಲ್ಲೆಲ್ಲಿದ್ದಾರೆ ಎಂಬುದನ್ನು ನೋಡಲು ಸಮಯ ಬೇಕಾಗುತ್ತದೆ, ಅಂದರೆ ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿಬಿಡಿ. ಹೀಗೆ ಒಮ್ಮೆ ಎಣಿಸಿಕೊಂಡು ಬಿಡಿ. ಹೀಗೆ ಮಾಡುವುದರಿಂದ ನಿಶ್ಚಿಂತರಾಗುತ್ತೀರಿ. ದಯವಿಟ್ಟು ಚುನಾವಣೆಗಳನ್ನು ಮುಂದಕ್ಕೆ ಹಾಕಿ, ಇದ್ದ ಆಡಳಿತಾಧಿಕಾರಿಗಳನ್ನು ಮುಂದಿನ ಚುನಾವಣೆ ಬರುವವರೆಗೆ ಮುಂದುವರಿಸಿ. ಹಾಗೆ ಮಾಡಿದರೆ ಆಗುತ್ತದೆ, ನೀವು ನಿಮಗೆ ರಾಜಕೀಯ ಬರುತ್ತದೆ ಎಂಬುದು ನನಗೂ ಗೊತ್ತಿದೆ. ಮನಸ್ಸಿಲ್ಲದಿದ್ದರೂ ಮಾಡುತ್ತೀರಿ. ಅದನ್ನು ಮಾಡುವುದರಿಂದ ಈ ಒಂದು ವ್ಯವಸ್ಥೆಯ ಮೇಲೆ ಸಂಪೂರ್ಣವಾಗಿ ಅನ್ಯಾಯವಾಗುತ್ತದೆ. ನಾನು ಅವರು ಕೊಟ್ಟ ವಿವರಗಳನ್ನು ನೋಡಿದ್ದೇನೆ. ಅದನ್ನು ತಾವು ದಯವಿಟ್ಟು ತರಿಸಿಕೊಳ್ಳಬೇಕು. ಅವರ ಮುಂದೆ ಅಪೀಲ್ ಹಾಕಿ ಎಂದು ಹೇಳಿದ್ದೆ. ಮಿನಿಸ್ಟರ್ ಮುಂದೆ ಅಪೀಲ್ ಬರುತ್ತದೆ, ಹಾಕು ಎಂದು ಹೇಳಿದ್ದೆ. ಯಾಕೆಂದರೆ ನನಗೂ ಅಪೀಲ್ ಬಂದಿತ್ತು. ನಮ್ಮ ಭಾಗದಲ್ಲಿನ ಒಂದು ಸೊಸೈಟಿಯನ್ನು ಡೆಪ್ಯೂಟಿ ರಿಜಿಸ್ಟ್ರಾರ್ ಸೂಪರ್‌ಸೀಡ್ ಮಾಡಿಬಿಟ್ಟಿದ್ದ. ಆತನು ಏನೋ ಒಂದು ರಾಜಕೀಯ ಮಾಡಿ, ಅಂದರೆ ಆತ ಸ್ವಂತ ರಾಜಕೀಯವನ್ನು ಮಾಡಿಬಿಟ್ಟಿದ್ದ, ಆತನನ್ನು ಕರೆಸಿ ಅವನ ಮೇಲೆ ಕೇಸ್ ಹಾಕಲು ಹೇಳಿದೆ. ಕೇಸ್ ಹಾಕಿದಾಗ ವಿಚಾರಣೆಯಲ್ಲಿ ನಾನೇ ಆರ್ಗ್ಯುಮೆಂಟ್ ಮಾಡಿದೆ. ಅದಕ್ಕೆ ಉತ್ತರ

ಬರಲಿಲ್ಲ. ಸುಮ್ಮನೆ ಸೂಪರ್‌ಸೀಡ್ ಮಾಡುವುದು, ಕೋರ್ಟ್‌ಗೆ ಹೋಗಿ ಎನ್ನುವುದು. ಹೀಗೆ ಕೋರ್ಟ್‌ಗೆ ಅಡ್ಡಾಡಿಸುವುದರಿಂದ ಸಂಸ್ಥೆಗಳು ಹಾಳಾಗುತ್ತವೆ. ನನಗನ್ನಿಸಿದ ಮಟ್ಟಿಗೆ ಆ ಸಂಘದಲ್ಲಿ ಯಾವ ದೋಷವೂ ಆಗಿಲ್ಲ. ಆ ಸಂಘವನ್ನು ಸೂಪರ್ ಸೀಡ್ ಮಾಡುವಂಥ ದೊಡ್ಡ ತಪ್ಪು ಏನೂ ಆಗಿಲ್ಲ. ಆದರೆ ವೀರಶೈವ ಬ್ಯಾಂಕ್‌ನಲ್ಲಿ ಏನಾಗಿತ್ತೋ ನಾನು ನೋಡಿಲ್ಲ. ಅದು ನಿಮ್ಮ ಪಾರ್ಟಿಯದು, ಅದು ಸ್ಟೇ ಆಗುತ್ತದೆ. ಅನಿವಾರ್ಯವಾಗಿ ನೀವು ಸ್ಟೇ ಮಾಡದಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಸ್ಟೇ ಮಾಡುತ್ತಾರೆ.

ಒಂದು ಮಾತನ್ನು ಮಾನ್ಯ ಸಿಂಧ್ಯಾರವರು ನೇರವಾಗಿ ಹೇಳಿದರು. ಇವೊತ್ತು ನಮ್ಮ ಕೋ-ಆಪರೇಟಿವ್ ಮೂವ್‌ಮೆಂಟ್ ಉಳಿಯಬೇಕಾದರೆ, ಸಹಕಾರ ಚಳುವಳಿಗಳು ಉಳಿಯಬೇಕಾದರೆ, ಅಪೆಕ್ಸ್ ಬ್ಯಾಂಕ್ ಉಳಿಯಬೇಕಾದರೆ, ನಮ್ಮ ಲ್ಯಾಂಡ್ ಬ್ಯಾಂಕ್ ಉಳಿಯಬೇಕಾದರೆ, ಎಲ್ಲಾ ಡಿಸಿಸಿ ಬ್ಯಾಂಕ್‌ಗಳು ಉಳಿಯಬೇಕಾದರೆ, ಕೇಂದ್ರ ಸರಕಾರದ ಸಹಾಯ ಬೇಕೇ ಬೇಕು. ಈಗಾಗಲೇ ಲ್ಯಾಂಡ್ ಬ್ಯಾಂಕ್‌ಗಳು 200 ರಿಂದ 300 ಕೋಟಿ ರೂ.ಗಳವರೆಗೆ ಹಾನಿಯಲ್ಲಿವೆ. ನೋಡುವುದಕ್ಕೆ 90 ಕೋಟಿ ರೂ. ಅಂದರೂ ಕೂಡ ಅದು 200 ರಿಂದ 300 ಕೋಟಿ ರೂ.ಗಳವರೆಗೆ ಹಾನಿ ಆಗಿದೆ. ಅಪೆಕ್ಸ್ ಬ್ಯಾಂಕ್ ಕೂಡ ಇವರ ಹಾಗೆಯೇ ಇದೆ. ಮೇಲ್ನೋಟಕ್ಕೆ ಚೆಂದ ಕಾಣುತ್ತ ಇದೆ. ಈ ಎಲ್ಲಾ ಕಾರಣಗಳಿಂದ ಒನ್ ಟೈಂ ಸೆಟಲ್‌ಮೆಂಟ್ ಮಾಡಬೇಕು. ಅದಕ್ಕೆ ದಯವಿಟ್ಟು ಹತ್ತು ಕೋಟಿ ರೂ.ಗಳನ್ನು ಕೊಡಿ. ಹೀಗೆ ನೀವು ಬಡ್ಜೆಟ್ ನಲ್ಲಿ ಪ್ರಾವಿಜನ್ ಮಾಡಿ ಒನ್ ಸೆಟಲ್‌ಮೆಂಟ್ ಮಾಡಿದರೆ ಆ ಎರಡೂ ಸಂಸ್ಥೆಗಳು ಉಳಿಯುತ್ತವೆ. ಅವೆರಡೂ ಸಂಸ್ಥೆಗಳು ಉಳಿದರೆ ಇಡೀ ರಾಜ್ಯದ ರೈತರಿಗೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಇದನ್ನೆಲ್ಲಾ ಇಟ್ಟುಕೊಂಡು ಅಲ್ಲಿಂದ ಶಾಸಕರು ಚುನಾಯಿತರಾಗಿ ಬಂದಿರುತ್ತಾರೆ. ಶ್ರೀ ಶಿವಾನಂದ ಪಾಟೀಲ್‌ರು ಅಲ್ಲಿ ಸೋಲುವುದಿಲ್ಲವೆಂದು ಅವರನ್ನು ಹೀಗೆ ಹೊರಹಾಕಲು ನೋಡುತ್ತಿದ್ದಾರೆ. ಒಂದು ವೇಳೆ ಅವರನ್ನು ಹೊರಹಾಕಲು ಹೋಗಿ ಬಿಜಾಪುರ ಡಿಸಿಸಿ ಬ್ಯಾಂಕ್‌ನ್ನು ಹಾಳು ಮಾಡಬೇಡಿ. ಆ ಕಾರಣದಿಂದ ಚುನಾವಣೆ ಮಾಡಿ. ಇನ್ನು ನೀವು ಅಲ್ಲಿ ಎಂಥ ತಪ್ಪು ಹಿಡಿಯಬೇಕೆಂದರೆ, ಅಲ್ಲಿ ಅಪೆಕ್ಸ್ ಬ್ಯಾಂಕಿನಲ್ಲಿ ಅವರು ನೇಮಕಾತಿ ಮಾಡಿಕೊಂಡಿದ್ದಾರೆ. ಇಲ್ಲಿ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರು ಕುಳಿತಿದ್ದಾರೆ. ನಾನು ಲೆಟರ್ ಬರೆದೆ. ಯಾರ್‍ಯಾರನ್ನು ತುಂಬಿಕೊಂಡಿರಿ, ಹೇಗೆ ತುಂಬಿಕೊಂಡಿರಿ, ಕಾನೂನು ಪ್ರಕಾರ ಮಾಡಿದ್ದೀರೋ? ಇವುಗಳನ್ನು ಕೇಳಿ ಬರೆದರೆ, ಮೂರು ತಿಂಗಳಾದರೂ ನನಗೆ ಉತ್ತರ ಕೊಡಲಿಲ್ಲ. ಕೊನೆಗೆ ನಾನು ಚೀಫ್ ಸೆಕ್ರೆಟರಿಯವರಿಗೆ ಬರೆದು, ಒಬ್ಬ ಶಾಸಕನಿಗೆ ಇಷ್ಟು ದಿನಗಳಲ್ಲಿ ಉತ್ತರ ಕೊಡಬೇಕೆಂದು ಇದೆ, ನಿಮ್ಮ ಎಂ.ಡಿ. ಏಕೆ ಕೊಡಲಿಲ್ಲ ಅಂದರೆ, ನಿಮ್ಮ ಅಧ್ಯಕ್ಷರು ನನಗೆ ಒಂದು ಲೆಟರ್ ಬರೆದು, ನೀವು ಹಿಂದಿನ ಮಂತ್ರಿಗಳು ನಾನೇ ಬರೆಯಬೇಕೆಂದು ಬರೆದಿದ್ದೇನೆ ಎಂದು ಹೇಳಿದ್ದರು. ಇವರು ನೇಮಕಾತಿಯನ್ನು ಕಾನೂನುಪ್ರಕಾರ ಮಾಡಬೇಕಲ್ಲವೇ? ಅದೆಲ್ಲವನ್ನೂ ಬಿಟ್ಟು ತಾವೇ ತಿಳಿದ ಹಾಗೆ ಬೈಲಾಗಳಂತೆ ಮಾಡಿದ್ದಾರೆ. ಯಾವ ನಿಯಮಗಳನ್ನೂ ಅನುಸರಿಸದೆ ತಮಗೆ ತಿಳಿದ ಹಾಗೆ ಮಾಡಿದ್ದಾರೆ. ಇಂಥವರ ಮೇಲೆ ಕ್ರಮ ತೆಗೆದುಕೊಳ್ಳಿ. ಇಂತವರನ್ನು ಸೂಪರ್‌ಸೀಡ್ ಮಾಡಿ, ಅದನ್ನು ಬಿಟ್ಟು ಕಾನೂನು ಪ್ರಕಾರ ನಡೆಯುವವರನ್ನು ಸೂಪರ್‌ಸೀಡ್ ಮಾಡಬೇಡಿ. ನಿಮ್ಮ ಪಾರ್ಟಿಯವರು ಎಂದುಬಿಡುತ್ತೀರಾ? ಇಲ್ಲಿ ಅವರು ತಪ್ಪು ಮಾಡಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆಯನ್ನು ಹಾಕಿದ್ದೇವೆ,ನಿಮ್ಮಿಂದ ಉತ್ತರ ಬಂದಿಲ್ಲ. ಹೋದ ಅಸೆಂಬ್ಲಿಯಲ್ಲಿ ಹಾಕಿದ

ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ.ಈ ಅಸೆಂಬ್ಲಿಯಲ್ಲಿ ಪ್ರಶ್ನೆ ಹಾಕಿದ್ದರೂ ಇನ್ನು ಉತ್ತರ ಬಂದಿಲ್ಲ. ತಪ್ಪಿತಸ್ಥರು ಯಾರೇ ಆಗಲಿ ಅವರು, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ದಿಟ್ಟತನವನ್ನು ನೀವು ತೋರಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್:- ತಾವು ಯಾವ ನೇಮಕಾತಿಯ ಕುರಿತು ಹೇಳುತ್ತಾ ಇದ್ದೀರಿ? ಮಾಜಿ ಸಚಿವರಾದ ತಾವು, ನನ್ನ ಹೆಸರನ್ನು ಹೇಳಿ, ಬ್ಯಾಂಕ್‌ನ ಹೆಸರನ್ನು ಹೇಳಿದ್ದೀರಿ. ಆ ಸಂಸ್ಥೆಯ ಉಪಾಧ್ಯಕ್ಷನಾಗಿ ನಾನು ಕೇಳುತ್ತಾ ಇದ್ದೇನೆ. ವಿವರಗಳನ್ನು ತಾವು ಹೇಳಬೇಕು.ನಾನು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ದಯಮಾಡಿ ತಾವು ನನಗೆ ಆ ವಿವರಗಳನ್ನು ಕೊಡಿ.

ಶ್ರೀ ಎಸ್.ಎಸ್. ಪಾಟೀಲ್:- ನೀವಲ್ಲ ಉತ್ತರ ಕೊಡುವುದು, ಮಂತ್ರಿಗಳು ಉತ್ತರ ಕೊಡಬೇಕು. ಅಲ್ಲಿ ಸಾಕಷ್ಟು ನೇಮಕಾತಿಗಳನ್ನು ಮಾಡಿದ್ದಾರೆ, ಆ ಬಗ್ಗೆ ನನ್ನ ಹತ್ತಿರ ವಿವರಗಳು ಇವೆ, ನನಗೆ ಉತ್ತರ ಬಂದಮೇಲೆ ಕೊಡುತ್ತೇನೆ. ಈಗ ಗಮನ ಸೆಳೆಯುವ ಯೂಚನೆಯ ಮೇಲೆ ಚರ್ಚೆ ಆಗುತ್ತದೆ, ಮಂತ್ರಿಗಳು ಉತ್ತರ ಕೊಡುತ್ತಾರೆ. ಚರ್ಚೆಯಾದ ಬಳಿಕ ಸದನಕ್ಕೆ ಉತ್ತರ ಬರುತ್ತದೆ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರು ನನ್ನ ಹೆಸರನ್ನು ಹೇಳಿದ್ದಾರೆ, ನಾನು ಉಪಾಧ್ಯಕ್ಷ ಎಂದೂ ಹೇಳಿದ್ದಾರೆ. ನಾನು ಉಪಾಧ್ಯಕ್ಷನಾಗಿರತಕ್ಕಂಥ ಸಂಸ್ಥೆಯ ಮೇಲೆ ಅವರು ಆಪಾದನೆ ಮಾಡಿದ್ದಾರೆ. ಅವರು ಸಚಿವರಾಗಿದ್ದಾಗ ಇಂಥವನ್ನು ಹುಡುಕಿ ಅವರು ಏನು ಮಾಡಿದ್ದಾರೋ, ಅದನ್ನೇ ಈಗ ಮಾಡಿದ್ದಾರೆ. ಅದೇ ನಿಯಮಗಳನ್ನು ಅನುಸರಿಸಿ ಈಗಲೂ ಮಾಡಿರುವುದು. ಅದರಲ್ಲಿ ಹೊಸತೇನೂ ಇಲ್ಲ. ಅವೊತ್ತು ಇದ್ದ ಕಾನೂನಿನ ಪ್ರಕಾರವೇ ಈಗಲೂ ಮಾಡಿದ್ದಾರೆ. ಅದೇ ಬೈಲಾಗಳು ಈಗಲೂ ಇವೆ.

ಉಪಾಧ್ಯಕ್ಷರು:- ಪಾಟೀಲ್‌ರವರೆ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ. ವಿಷಯಾಂತರ ಮಾಡಬೇಡಿ.

ಶ್ರೀ ಎಸ್.ಎಸ್.ಪಾಟೀಲ್:- ನಾವು ಇರುವುದನ್ನು ಹೇಳಬೇಕಾಗುತ್ತದೆ. ಇದರ ಮೇಲೆ ಕ್ರಮ ತೆಗೆದುಕೊಳ್ಳಿ. ನಾನು ಪತ್ರ ಬರೆದರೂ ನನಗೆ ಸೆಕ್ರೆಟರಿಯಿಂದ ಉತ್ತರ ಬಂದಿಲ್ಲ. ಅಸೆಂಬ್ಲಿಯಲ್ಲಿ ಪ್ರಶ್ನೆ ಹಾಕಿದರೂ ಉತ್ತರ ಬಂದಿಲ್ಲ. ಒಂದು ವೇಳೆ ಅವರು ಹೇಳಿದ ಹಾಗೆ ನನ್ನ ಕಾಲದಲ್ಲಿ ಎಲ್ಲಾದರೂ ಅಕ್ರಮಗಳು ಆಗಿದ್ದಲ್ಲಿ ಅದರ ಮೇಲೂ ಕ್ರಮ ತೆಗೆದುಕೊಳ್ಳಿ. ಅದರಲ್ಲಿ ತಪ್ಪು ಏನಿಲ್ಲ. ನಾನು ಒಬ್ಬ ಹಿತೈಷಿಯಾಗಿ, ಸಹಕಾರಿಯಾಗಿ ಹೇಳುತ್ತಾ ಇದ್ದೇನೆ. ದಯವಿಟ್ಟು ಈ ರೀತಿಯಾಗಿ, ಮಾಡಬೇಡಿ. ಪ್ರೆಶರ್ ಎಲ್ಲರ ಮೇಲೂ ಬರುತ್ತದೆ, ನನಗೂ ಬಂದಿತ್ತು. ನಿಮಗೂ ಬರುತ್ತದೆ. ಆದರೆ ಯಾರೇ ಆಗಲಿ ಒಳ್ಳೆಯ ಕೆಲಸವನ್ನು ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಹೀಗಾಗಿ ಇವತ್ತಿನ ದಿವಸ ಧಾರವಾಡ ಡಿಸಿಸಿ ಬ್ಯಾಂಕ್ ಸುಧಾರಣೆಯಾಗದ ಸ್ಥಿತಿಯನ್ನು ತಲುಪಿದೆ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಅದಕ್ಕೆ 1971ರಿಂದ ಈ ಒಂದು ತೊಂದರೆ ಶುರುವಾಗಿದೆ. ಯಾವಾಗ ಸೂಪರ್‌ಸೀಡ್ ಆಗಲು ಶುರುವಾಯಿತು. ಅಲ್ಲಿಂದ ಅದಕ್ಕೆ ಕೆಟ್ಟ ದಿನಗಳು ಶುರುವಾಗಿವೆ. ಆಡಳಿತಾಧಿಕಾರಿಗಳನ್ನು ಹಾಕುವುದು, ಮತ್ತೆ ಚುನಾವಣೆಯನ್ನು ಮಾಡುವುದು, ಮತ್ತೆ ಒಂದು ಪಕ್ಷ ಬರುವುದು, ದಳ ಬಂದರೂ ಸೂಪರ್‌ಸೀಡ್ ಮಾಡುವುದು, ಕಾಂಗ್ರೆಸ್ ಬಂದರೂ ಅದನ್ನೇ ಮಾಡುವುದು. ಹೀಗೆ ಆಗುತ್ತಾ ಬಂದು ಬೇರೆ ಬೇರೆ ಕಾರಣಗಳಿಗಾಗಿ ಅದು ಹಾಳಾಗುತ್ತಾ ಬಂದಿದೆ. ಅದು ನಿಮಗೂ ಗೊತ್ತಿದೆ, ಒಟ್ಟಿನಲ್ಲಿ ಸಂಪೂರ್ಣವಾಗಿ ಇವೊತ್ತು

ಒಳ್ಳೆಯ ರೀತಿಯಲ್ಲಿ ಇರುವಾಗ ತಾವು ಏಕೆ ಹೆಸರು ಕೆಡಿಸಿಕೊಳ್ಳುತ್ತೀರಿ? ಇಂಥವರು ಹಾಳು ಮಾಡಿ ಹೋದರು ಎಂಬ ಹೆಸರು ತಮ್ಮ ಮೇಲೆ ಬರಬಾರದು. ಆ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಅವರಿಗೂ ಇದನ್ನೇ ಹೇಳುತ್ತಿದ್ದೆ. ಅವರಿಗೂ ಶಾಸಕರು ಪ್ರೆಶರ್ ತರುತ್ತಾರೆ. ಅವರು ಸಹಿ ಹಾಕುತ್ತಾರೆ. ಅವರೇನೋ ಡಿಸ್‌ಮಿಸ್ ಎಂದು ಬರೆದಿದ್ದಾರಂತೆ, ಯಾರಾದರೂ ಡಿಸ್‌ಮಿಸ್ ಎಂದು ಬರೆಯುತ್ತಾರೆಯೇ ಅವರಲ್ಲಿಗೆ ಒಮ್ಮೊಮ್ಮೆ ಎಲ್ಲರೂ ಕೂಡಿ ಸಹಿ ಆಗುತ್ತದೆ. ಆದ್ದರಿಂದ ದಯವಿಟ್ಟು ಚುನಾವಣೆ ಮಾಡಿ. ಇಲ್ಲವಾದರೆ ಇಡೀ ರಾಜ್ಯದ ಎಲ್ಲಾ ಸಹಕಾರಿ ಸಂಘ-ಸಂಸ್ಥೆಗಳ ಚುನಾವಣೆಗಳನ್ನು ಮುಂದಕ್ಕೆ ಹಾಕಿ. ಈಗ ಬರ ಇದೆ. ಆ ಕಾರಣಕ್ಕಾಗಿ ಆಡಳಿತಾಧಿಕಾರಿಗಳನ್ನು ಹಾಕಬೇಕೆಂದರೆ ಎಲ್ಲವನ್ನೂ ಒಮ್ಮೆಯೇ ಮಾಡಿಬಿಡಿ. ಮುಂದೆ ಚುನಾವಣೆಯಾಗುವವರೆಗೆ ಅವರನ್ನು ಮುಂದುವರೆಸುವಂಥ ಅಧಿಕಾರವು ತಮಗೆ ಇದೆ, ಹಾಗೆ ಮಾಡಿ ಈ ಚಳುವಳಿಗೆ ಒಳ್ಳೆಯ ರೂಪ ಕೊಡಿ. ನಾಳೆ ದಿವಸ ಎಲ್ಲರೂ ನಿಮ್ಮ ಅಧಿಕಾರಾವಧಿಯು ಚೆನ್ನಾಗಿತ್ತು ಎಂದು ಹೇಳಬೇಕು. ವಿಧ್ಯಾ ಖಾತೆಯಲ್ಲಿ ನೀವು ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ. ಅಂಥ ಒಳ್ಳೆಯ ಕೆಲಸಗಳನ್ನು ಇಲ್ಲಿಯೂ ಮಾಡಿ. ಕೆಲವು ಬೈಯ್ಯಿಸಿಕೊಳ್ಳುವಂಥ ಕಾರ್ಯಕ್ರಮಗಳನ್ನು ತಂದಿದ್ದೀರಿ. ಅಂಥದ್ದು ಬೇಡ. ಇವತ್ತು ಈ ವಿಚಾರದ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕು; ಇದು ಬಹಳ ಮಹತ್ವದ್ದು ಇದೆ. ಇಲ್ಲದೇ ಇದ್ದರೆ ಸಹಕಾರಿ ಚಳುವಳಿ ಹೋಗುತ್ತದೆ.

6.40 ಪಿಎಂ

ಉಪಾಧ್ಯಕ್ಷರು:- ಪಾಟೀಲರೆ, ನಿಜವಾಗಿ ಹೇಳಬೇಕೆಂದರೆ ಸೈನ್ ಮಾಡಿದವರಿಗೆ ಮೊದಲು ಅವಕಾಶ ಕೊಡಬೇಕು. ಸೈನ್ ಮಾಡದೇ ಇದ್ದವರು ತಾವು ಬಹಳ ಮಾತನಾಡುತ್ತಿದ್ದೀರಲ್ಲಾ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಅವಕಾಶ ಇಲ್ಲದೆ ಎದ್ದುನಿಂತಿಲ್ಲ. ನಾನು ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆ ತೆಗೆದಿದ್ದೆ.

ಉಪಾಧ್ಯಕ್ಷರು:- ಈ ಗಮನ ಸೆಳೆಯುವ ಸೂಚನೆಯಲ್ಲಿ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರು, ನಾಳೆ ಚೇಂಬರ್‌ಗೆ ಬನ್ನಿ ಮಾತನಾಡೋಣ ಎಂದು ಅದನ್ನು ಮುಂದಕ್ಕೆ ಹಾಕಿಬಿಟ್ಟರು. ನಮ್ಮ ಮೂವರನ್ನೂ ಚೇಂಬರಿಗೆ ಕರೆದರು. ಸೋಮವಾರ ಮಾತನಾಡಿ ಅಂದರು. ಇಲ್ಲದಿದ್ದರೆ ನಾನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಆದ್ದರಿಂದ ತಾವು ದಯವಿಟ್ಟು ಅದನ್ನು ಪರಿಶೀಲನೆ ಮಾಡಬೇಕು. ಆ ಚುನಾವಣೆಯನ್ನು ತೀವ್ರದಲ್ಲೇ ಮಾಡಬೇಕು ಎಂದು ಹೇಳಿ ಈ ಅಪೆಕ್ಸ್ ಬ್ಯಾಂಕ್ ಮೇಲೆ ಏನು ಕ್ರಮ ತೆಗೆದುಕೊಂಡಿರಿ ಎಂಬ ಬಗ್ಗೆ ನನಗೆ ಉತ್ತರ ಹೇಳಬೇಕಾಗುತ್ತದೆ. ನನ್ನ ಅವಧಿಯಲ್ಲಾದರೂ ಅವರು ಹೇಳಿದಂತೆ ಆಗಿದ್ದರೆ ಕ್ರಮ ತೆಗೆದುಕೊಳ್ಳಿ, ಬೇಡ ಎನ್ನುವುದಿಲ್ಲ. ಇದುವರೆಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ವಿಶ್ವನಾಥ್(ಸಹಕಾರ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲರು ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಚುನಾವಣೆಯನ್ನು ಮುಂದೂಡಿದ ಬಗ್ಗೆ, ಆಡಳಿತಾಧಿಕಾರಿಯನ್ನು ನೇಮಕ ಮಾಡಿದ ಬಗ್ಗೆ ಗಮನ ಸೆಳೆದಂತಹ ಸಮಯದಲ್ಲಿ ಬಹಳ ಗಂಭೀರವಾದ ಪ್ರಮುಖ ಚರ್ಚೆ ಇಲ್ಲಿ ಆಗಿದೆ. ಬಹಳಷ್ಟು

ಜನ ಹಿರಿಯರು ಬೈರೈಗೌಡರು, ಸಿಂಧ್ಯಾ ಅವರು ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಮತ್ತು ಶ್ರೀ ಕಾಗೇರಿಯವರು ಸ್ವತಃ ಹಿಂದೆ ಸಹಕಾರ ಇಲಾಖೆಯನ್ನು ನಡೆಸಿ ಅನುಭವ ಪಡೆದಿರುವ ಶ್ರೀ ಎಸ್.ಎಸ್. ಪಾಟೀಲರು ಎಲ್ಲರೂ ಕೂಡ ಹಲವಾರು ಸಲಹೆಗಳನ್ನು ನೀಡಿ, ಮಂತ್ರಿಗಳಿಗೂ ಕೂಡ ಮಾರ್ಗದರ್ಶನವಾಗುವ ರೀತಿಯಲ್ಲಿ ತಿಳಿಸಿಕೊಟ್ಟಿದ್ದಾರೆ. ಅವರಿಗೆ ನಾನು ಅಭಾರಿಯಾಗಿದ್ದೇನೆ. ಬಿಜಾಪುರ ಸಹಕಾರಿ ಕೇಂದ್ರ ಬ್ಯಾಂಕ್ ಸಹಕಾರಿ ಕಾಯಿದೆಯ 11ನೇ ವಿಧಿಯಲ್ಲಿ ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದಂತಹ ಬ್ಯಾಂಕ್. ಆ ಬ್ಯಾಂಕ್‌ನ್ನು ದೇಶದಲ್ಲೇ ಅತ್ಯುತ್ತಮ ಬ್ಯಾಂಕ್‌ಗಳಲ್ಲಿ ಒಂದಾಗಿ ಪರಿವರ್ತನೆ ಮಾಡಿದಂತಹ ಒಂದು ಕ್ರಿಯಾಶೀಲ ಕೆಲಸವನ್ನು ಮಾನ್ಯ ಶಿವಾನಂದ ಪಾಟೀಲರು ಮತ್ತು ಅದರ ಹಿಂದಿನ ಆಡಳಿತಾಧಿಕಾರಿ ಹಾಗೂ ಎಂ.ಡಿ. ಆಗಿದ್ದ ಶ್ರೀ ಎಂ.ಜಿ. ಪಾಟೀಲರು- ಇವರುಗಳ ಪರಿಶ್ರಮದಿಂದ ಒಳ್ಳೆಯ ಕೆಲಸ ಆಗಿದೆ. ಅದಕ್ಕೆ ಸರ್ಕಾರದ ಅಭಿಮಾನ ಕೂಡ ಇತ್ತು. ಆದರೆ ಇನ್ನೂ ಹಲವು ರೀತಿಯಲ್ಲಿ ನಮ್ಮ ಹಿರಿಯರು ಹೇಳಿದರು, ಸಹಕಾರ ಇಲಾಖೆಯಲ್ಲಿ ಹೇಗೆ ಕೆಲಸ ಮಾಡುತ್ತಾ ಅದು ವೃದ್ಧಿಯಾಯಿತು ಮತ್ತು ಅದರ ಆಂದೋಲನ, ಸಹಕಾರಿ ಹರಿಕಾರರು ಮತ್ತು ಅದನ್ನು ಹುಟ್ಟಿಹಾಕಿದಂತಹ ಸಿದ್ದನಗೌಡ ರಾಮನಗೌಡ ಪಾಟೀಲರ ಸ್ಮರಣೆ ಇದೆಲ್ಲವನ್ನೂ ಕೂಡ ಈ ಸದನದಲ್ಲಿ ಚರ್ಚೆ ಮಾಡಿದ್ದಾರೆ. ಇಲ್ಲಿ ಶ್ರೀ ಶಿವಾನಂದ ಪಾಟೀಲರು ಬಹಳ ನೋವಿನಿಂದ ಕೆಲವು ಮಾತುಗಳನ್ನು ಹೇಳಿದ್ದಾರೆ. ನಾನು ಎರಡೂ ಸದನಗಳಲ್ಲೂ ಕೂಡ ಮಂತ್ರಿಯಾಗಿ ನನ್ನದೇ ಆದ ರೀತಿಯಲ್ಲಿ ಸದನದ ಕಾರ್ಯಕಲಾಪಗಳನ್ನು ವಿವೇಚನೆ ಮಾಡುತ್ತಾ ಇರುತ್ತೇನೆ. ಒಂದೊಂದು ಸಾರಿ ಆ ಕಡೆ ಕೆಲವರದ್ದು ಮೂಕರೋಧನವಾದರೆ ಈ ಕಡೆಯಲ್ಲಿ ನಮಗೆ ಕೆಲವರಿಗೆ ಮೂಕವೇದನೆ ಕೂಡ ಆಗುತ್ತಿದೆ. ಆದರೆ ವ್ಯವಸ್ಥೆ ಎಲ್ಲರಿಗೂ ಗೊತ್ತಿರುವಂತಹುದೇ. ಯಾರಿಗೇನೂ ಗೊತ್ತಿಲ್ಲದ ವಿಚಾರವಲ್ಲ. ಸರ್ಕಾರ ನಡೆಸಿರುವಂತಹ ಭೈರೇಗೌಡರಿಗೆ ಗೊತ್ತಿದೆ ಇಲಾಖೆ ನಡೆಸಿರುವಂತಹ ಎಸ್‌ಎಸ್ ಪಾಟೀಲರಿಗೆ ಗೊತ್ತಿದೆ ಏನೆಲ್ಲಾ ಆಗಿದೆ ಎಂದು, ಆದರೂ ಕೂಡ ಏನೇ ಆದರೂ ಈ ಸಹಕಾರಿ ಆಂಧೋಲನ ಇದು ಜನರ ಆಂಧೋಲನ ಆಗಬೇಕು ಎಂಬುದು ಲಾಗಾಯ್ತಿನಿಂದಲೂ ನಡೆದಿದೆ. ಹಲವು ಏರುಪೇರುಗಳು ಇರಬಹುದು, ಒಪ್ಪಿಕೊಳ್ಳೋಣ. ಇಲ್ಲ ಏನೂ ಆಗೇ ಇಲ್ಲ ಅಂತ ಯಾರೂ ಹೇಳಲು ಬರುವುದಿಲ್ಲ. ಆದರೆ ಈ ಏರುಪೇರು ವ್ಯತ್ಯಾಸಗಳ ನಡುವೆಯೂ ಕೂಡ ಈ ರಾಜಕಾರಣದ ದ್ವಂದ್ವಗಳ ನಡುವೆಯೂ ಕೂಡ ಯಾವ ಸಹಕಾರಿ ಆಂಧೋಲನ ಈ ನಾಡಿನ ಗ್ರಾಮೀಣ ಪ್ರದೇಶದ ಜನರ ಬದುಕಿನ ಆರ್ಥಿಕ ಮಟ್ಟವನ್ನು ಎತ್ತರಕ್ಕೇರಿಸುವಂತಹ ನಮ್ಮೆಲ್ಲರ ತಾಯಿಯಾದ ಈ ಸಹಕಾರ ಇಲಾಖೆ ಬಹುಶಃ ಇವತ್ತು ಇಡೀ ದೇಶದಲ್ಲೇ ಮೂರನೇ ರಾಜ್ಯವಾಗಿದೆ ನಮ್ಮದು. ಅದಕ್ಕೆ ನಾವೆಲ್ಲಾ ಸಂತೋಷಪಡಬೇಕು. ಒಂದೊಂದು ಸಾರಿ ಆಗುತ್ತದೆ, ಇವತ್ತು ಕೆಸಿಸಿ ಬ್ಯಾಂಕ್, ಬಹುಶಃ ಅತ್ಯಂತ ಚರಿತ್ರಾರ್ಹವಾದಂಥ ಬ್ಯಾಂಕ್, ಯಾವ ನಾಡಿನಲ್ಲಿ ಸಹಕಾರಿ ಆಂಧೋಲನ ಪ್ರಾರಂಭವಾಯಿತೋ, ಗದುಗಿನ ಕಣಿಜಹಾಲ್, ಆ ನೆಲದಲ್ಲೇ ಜಿಲ್ಲೆಯ ತಾಯಿಬೇರು ಡಿಸಿಸಿ ಬ್ಯಾಂಕ್ ಕೆಸಿಸಿ ಬ್ಯಾಂಕ್ ಮುಳುಗಿಹೋಗುವಂತಹ ಸ್ಥಿತಿ ಬಂದುಹೋಗಿದೆ. ಆದರೆ ಅದು ಮುಳುಗುತ್ತಿದೆ ಅಂತ ನಾವೆಲ್ಲರೂ ಸೇರಿ ಮುಳುಗಿಸಲು ಆಗುವುದಿಲ್ಲ. ಏನಾದರೂ ಮಾಡಿ ಅದನ್ನು ಪುನರುಜ್ಜೀವನ ಮಾಡಬೇಕು ಎಂಬ ದೃಷ್ಟಿಯಲ್ಲಿ ಇವತ್ತು ಅಲ್ಲಿ ಯಾರ‍್ಯಾರು ಸಾಲ ಪಡೆದಿದ್ದಾರೆ ಅವರನ್ನೆಲ್ಲಾ ಮನವೊಲಿಸುತ್ತಿದ್ದೇವೆ. ಬಹಳ stringent action ಮಾಡುತ್ತಿದ್ದೇವೆ. ಕೆಸಿಸಿ ಬ್ಯಾಂಕಿನ ಆಗುಹೋಗುಗಳನ್ನು ನಾವು ಪರಿಶೀಲನೆ ಮಾಡುತ್ತಾ ಹೋದರೆ ಕೆಸಿಸಿ ಬ್ಯಾಂಕ್

ಇವತ್ತು ದೊಡ್ಡ ಹಡಗು, ಆ ಸಹಕಾರಿ ಆಂಧೋಲನದ ಮೇರು ಏನು ಈವತ್ತು ಮುಳುಗುತ್ತಾ ಇದೆಯೆಂದು ಮರುಗುತ್ತಿದ್ದೇವಲ್ಲಾ ಅದು ಮುಳುಗಲಿಕ್ಕೆ ದೊಡ್ಡದೊಡ್ಡ ಬಂಡೆಯನ್ನಿಟ್ಟವರು ಯಾರು? ನಾವೇ? ನಾವೇ? ಸಾಮಾನ್ಯ ರೈತ ಅಲ್ಲ. ವಿಧಾನಸೌಧದಲ್ಲಿ ಕುಳಿತು ಮೌಲ್ಯಗಳ ಬಗ್ಗೆ ಮಾತನಾಡುವವರು ನಾವೇ ನಾವೇ, ದೊಡ್ಡ ಭಾಷಣ ಮಾಡುವವರು. ಆದರೂ ಕೂಡ ಇದೆಲ್ಲವನ್ನೂ ಮೀರಿ ನಿಂತು ಅದನ್ನು ಉಳಿಸುವ ಕೆಲಸ ಮಾಡುತ್ತಾ ಇದ್ದೇವೆ. ಯಾವುದೇ ಬ್ಯಾಂಕ್ ರಿಕವರಿ ಇಲ್ಲದಿದ್ದರೆ ಏನಾಗುತ್ತದೆ? 290 ಕೋಟಿ ರೂ. ರಿಕವರಿಗೆ ಎಲ್ಲಿ ಹೋಗುವುದು? ಬಹಳ stringent action ಮಾಡುತ್ತಿದ್ದೇವೆ. ಹೌದು, ನಾನು ಮಂತ್ರಿ, ನಾನೇನಾದರೂ ಸಾಲ ಪಡೆದು ಸಾಲಗಾರನಾಗಿದ್ದರೆ ನಾನು ಹೇಳಿದ್ದೇನೆ, 470 ಜನ ಕೆಸಿಸಿ ಬ್ಯಾಂಕ್ ನೌಕರರು, ಅಧಿಕಾರಿಗಳು ಹೋಗಿ ಅವರ ಮನೆ ಬಾಗಿಲಿನಲ್ಲಿ ಝುಂಡಾ ಹೂಡಿ ಎಂದು ಹೇಳಿದ್ದೇನೆ. ಅಕ್ರಮ ನಡೆಯುತ್ತಾ ಇದೆ, ಇವತ್ತು ರಿಕವರಿ ಆಗುತ್ತಾ ಇದೆ. ಅವರದು ಆಶಾಭಾವನೆ ಇದೆ. ಕೆಸಿಸಿ ಬ್ಯಾಂಕ್ ಇವತ್ತು ಸರ್ಕಾರ ಸಮುದಾಯದ ಸಹಭಾಗಿತ್ವದಲ್ಲಿ ಅದರ ಪುನರುಜ್ಜೀವನ ಮಾಡಬೇಕು ಎಂಬ ಒಂದು ದೃಢಸಂಕಲ್ಪವನ್ನು ಸರ್ಕಾರ ಮಾಡಿದೆ. ಸೋ, ಅದನ್ನು ಒಂದು ಆಶಾಭಾವನೆ ಇಟ್ಟುಕೊಂಡು ನಡೆಸುತ್ತಿದ್ದೇವೆ. ಸೂಪರ್‌ಸೀಡ್ ಮಂತ್ರಿ ಅಂತ ನಮ್ಮ ಅರಗ ಅವರು ಹೇಳಿದರು. ನಮ್ಮ ಕಾಗೇರಿಯವರು ಅವರ ಊರಿನದನ್ನು ಹೇಳಿದರು. ನನ್ನ ಜೊತೆಯಲ್ಲಿ ಕೂಡ ಚರ್ಚೆ ಮಾಡಿದ್ದಾರೆ. ವಾನಳ್ಳಿ ಮೆಣಸಗಿ ಕಾರವಾರ ಸಹಕಾರ ಸಂಘದ ಬಗ್ಗೆ ಹೇಳಿದ್ದಾರೆ. ನಾನೂ ಕೂಡ ಆ ಫೈಲನ್ನು ಕಾಲ್ ಮಾಡಿದ್ದೆ. ಒಂದು ವೇಳೆ ಏನಾದರೂ ಕೂಡ ಅನಾವಶ್ಯಕವಾಗಿ ಅಧಿಕಾರದ ಎಲ್ಲೆಯನ್ನು ಧಾಟಿ ನಾವೇನಾದರೂ ಅದನ್ನು ಮಾಡಿದ್ದೇ ಆಗಿದ್ದರೆ ಅದನ್ನು ಮತ್ತೆ ಯಥಾಸ್ಥಿತಿಗೊಯ್ಯುವ ಕೆಲಸ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಭೈರೇಗೌಡರು ಕೂಡ ಸರ್ಕಾರ ಸಣ್ಣತನ ದೊಡ್ಡತನ ಅಂತೆಲ್ಲಾ ಹೇಳಿದರು. ಎಲ್ಲಾ ಇದೆ, ವಸ್ತುಸ್ಥಿತಿಯನ್ನು ನಾವೆಲ್ಲರೂ ಕೂಡ ಗಮನಿಸುತ್ತಾ ಹೋದಾಗ ಆ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮ ವಾದವನ್ನು ಮುಂದಿಟ್ಟಾಗ ಅದು ಬೇರೆ ವಿಚಾರ. ಆದರೆ ರಾಜಕಾರಣವನ್ನೇ ನಾವಿಬ್ಬರೂ ಕೂಡ ಆ ಕಡೆ ಈ ಕಡೆಯವರು ಎದುರಿಗಿಟ್ಟುಕೊಂಡು ಹೋದಾಗ ಪರಿಸ್ಥಿತಿ ಬೇರೆ ಆಗುತ್ತದೆ. ಈಗ ಅಪೆಕ್ಸ್ ಬ್ಯಾಂಕ್ ಬಗ್ಗೆ ಹೇಳಿದಿರಿ. Recruitment ಮತ್ತೊಂದು ಮಗದೊಂದು; ಹೌದು, ನಾನೂ ಕೂಡ ಮೊನ್ನೆ ರಿವ್ಯೂ ಮಾಡಿದಾಗ ನೋಡಿದ್ದೇನೆ. ಅಧ್ಯಕ್ಷರೇ, ಈತನಕವೂ ಕೂಡ Subsidiary rules ಅನ್ನು ನಾವು amendment ಮಾಡಿಲ್ಲ. ಯಾವುದೋ ಓಬೀರಾಯನ ಕಾಲದ್ದು ಇಟ್ಟುಕೊಂಡು ಮಾಡುತ್ತಾ ಇದ್ದೇವೆ. ಯಾರಿಗೋ ಅಧಿಕಾರ ಕೊಟ್ಟು ಸುಮ್ಮನೆ ಕುಳಿತು ಮಾತನಾಡುತ್ತಿದ್ದೇವೆ. ಅದೆಲ್ಲಾ ಬದಲಾವಣೆ ಮಾಡುತ್ತಾ ಇದ್ದೇವೆ. ಇವತ್ತು ಸಹಕಾರ ಇಲಾಖೆಯಲ್ಲಿ ಕೆಲವು ರೀತಿಯ ಕಾನೂನುಗಳಿವೆ. ಅದು ಅಧಿಕಾರಿಗೆ ಉಪಯೋಗ, ಜನಕ್ಕೆ ಸಂಕಷ್ಟಕರ, ಅಂತಹ ಕಾನೂನುಗಳನ್ನು ಇವತ್ತು ಮಾರ್ಪಾಡು ಮಾಡುತ್ತಿದ್ದೇವೆ. ಕೆಲವು proceedural delays change ಮಾಡುತ್ತಿದ್ದೇವೆ. ಈಗ ಹಿಂದೆ ಸೆಕ್ಷನ್ 17ಸಿ, ಯಾವುದೋ ನಮ್ಮೂರಿನ ಸೊಸೈಟಿಗೆ ಅಲ್ಲಿ ಯಾರೋ ಸೆಕ್ರೆಟರಿಗೆ 20 ರೂ. ಭತ್ಯೆ ಜಾಸ್ತಿ ಮಾಡಬೇಕಾದರೆ that has to come before the Government. ನಾನು ಈಗ ಅದನ್ನು ವಾಪಸ್ ಕೊಡುತ್ತೇನೆ. ನನಗೆ ಅದು ಬೇಡ. ಏಕೆ ನಾವು ಸೆಂಟ್ರಲೈಜ್ ಮಾಡಿಕೊಂಡು ಹೋಗಬೇಕು? When we have wedded this decentralization Policy, there is no meaning in centralizing

the programmes or the Laws. ಆದ್ದರಿಂದ ಆ ಕೆಲಸವನ್ನು ಕೂಡ ಇವತ್ತು ಮಾಡುತ್ತಿದ್ದೇವೆ. ಬಹುಶಃ ಯಾರಿಗಾದರೂ ಕೂಡ ಮಾತಿನ ಭರದಲ್ಲಿ, ವೇಗದಲ್ಲಿ ಈ ಸಹಕಾರ ಇಲಾಖೆ ಮುಳುಗುತ್ತಿದೆ, ಸರ್ಕಾರ ಸೂಪರ್‌ಸೀಡ್ ಮಾಡುತ್ತಿದೆಯೇನೋ, ಸೂಪರ್‌ಸೀಡ್ ಮಾಡುವುದು ಸಮಸ್ಯೆಗೆ ಮಂತ್ರವಲ್ಲ. ನನಗೂ ಕೂಡ ಗೊತ್ತು. ಆದರೆ ತಾವು ಕೆಲವಲ್ಲಾ ಹೇಳಿದರಲ್ಲಾ, ಮೂಕರೋಧನ, ಮೂಕ ವೇದನೆಗಳು ಇಲ್ಲೇ ಸುಳಿದಾಡುತ್ತಿವೆ. ಪಾಪ, ನಮ್ಮ ಶಿವಾನಂದ ಪಾಟೀಲರು ಬಹಳ ಮುಗ್ಧರು. ಅವರ ಮೇಲೆ ಬಹಳ ಅಭಿಮಾನ ನನಗೆ. ನಮಗೆ ಒಂದೊಂದು ಸಾರಿ ಏನಾಗುತ್ತದೆಂದರೆ ಶ್ರೀಮಾನ್ ಜಗದೀಶ್ ಶೆಟ್ಟರು, ಶ್ರೀಮಾನ್ ಕಾಗೇರಿಯವರು ಹೇಳಿದ ಹಾಗೆ ನಮಗೆ ರಾಮ, ರಾಮಾಯಣ ಎಲ್ಲಾ ಚೆನ್ನಾಗಿ ಗೊತ್ತಿದೆ. ಅದೇನೇ ಇರಲಿ. ಆದರೆ ಯಾವ ರಾಮ ನಮಗೆ ಗೊತ್ತು? ಪಾಪ, ಶಿವಾನಂದ ಪಾಟೀಲರು ಬಹಳ ಮುಗ್ಧರು. ನಮಗೆ ಯಾವ ರಾಮ ಗೊತ್ತಿದೆಯೆಂದರೆ ಕೈಕೇಯಿ ಮಂಥರೆಯ ಜೊತೆ ದಶರಥನ ಬರುವಲ್ಲಿಗೆ ರಾಮ ಏನು ಇದ್ದ, ಅವನಷ್ಟೇ ಗೊತ್ತು. ಮುಗ್ಧರಾಮ. ಆದರೆ ಆನಂತರದಲ್ಲಿ ಬಂದಂಥ ರಾಮನ ರಾಮಬಾಣ, ಲಕ್ಷ್ಮಣನ ಲಕ್ಷ್ಮಣ ರೇಖೆ, ಸೀತೆಯ ಮೋಹಿಸಿದ ಮಾಯಾಮೃಗ, ಮಾರುವೇಶದಲ್ಲಿ ಬಂದ ರಾವಣ, ಇವೆಲ್ಲವೂ ಕೂಡ ಇಲ್ಲಿವೆ. ಈ ರಾಮಾಯಣ ನಮಗೆ ಅರ್ಥವಾದರೆ ಬಹುಶಃ ಇಷ್ಟೊಂದು ವಿಶ್ಲೇಷಣೆ ಅಗತ್ಯವಿಲ್ಲ ಎಂಬುದು ನನ್ನ ಭಾವನೆ.

ಶ್ರೀ ಎ.ರಾಮದಾಸ್:- ಇಲ್ಲಿ ರಾವಣ ಯಾರು ಎಂದು ಹೇಳಿಬಿಡಿ. ತೃಪ್ತಿಯಾಗಿಬಿಡುತ್ತದೆ ಅವರಿಗೆ. ರಾವಣ ಯಾರು ಎಂದು ಹೇಳಿಬಿಟ್ಟರೆ ಶಿವಾನಂದರು ಅಟ್‌ಲೀಸ್ಟ್ ಎಚ್ಚರಿಕೆಯಿಂದ ಇರಬಹುದು.

ಶ್ರೀ ಹೆಚ್. ವಿಶ್ವನಾಥ್:- ಒಂದೊಂದು ಸಾರಿ ಜನ ಸಿಕ್ಕಿದಾಗ ನಮಗೂ ನಿಮಗೂ ಅವರನ್ನು ರಾಮನ ಬಗ್ಗೆಯೂ ಮಾಡಿಕೊಳ್ಳಬಹುದು. ರಾವಣನ ಬಗ್ಗೆಯೂ ಮಾಡಿಕೊಳ್ಳಬಹುದು.

ಶ್ರೀ ಶಿವಾನಂದ ಎಸ್. ಪಾಟೀಲ್:- ಅಲ್ಲ, ನಾನು ಈಗೇನು ಅಭಿಮನ್ಯುನಾ?

ಶ್ರೀ ಹೆಚ್.ವಿಶ್ವನಾಥ್:- ಅಲ್ಲ, ಅಲ್ಲ.. ಆದ್ದರಿಂದ ನಾನು ತಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಸದನದಲ್ಲಿ ಮಾತನಾಡಿದಂಥ ಹಿರಿಯರು ಸಹಕಾರಿ ಆಂಧೋಲನದ ಬಗ್ಗೆ ವ್ಯಕ್ತಪಡಿಸಿದ ತಮ್ಮ ಭಾವನೆಗಳು ಏನಿವೆ ಅವು ಖಂಡಿತವಾಗಿಯೂ ನನಗೆ ಅರ್ಥವಾಗುತ್ತವೆ. ಏಕೆಂದರೆ ಸ್ವಲ್ಪ ಕೆಲವು ವಿಚಾರದಲ್ಲಿ ಬಲು ಕಟುವಾಗಿ ಹೋಗುತ್ತೇವೆ. ನಮ್ಮ ಮೈಸೂರು ಜಿಲ್ಲೆಗೆ ನಾನು ಜಿಲ್ಲಾ ಉಸ್ತುವಾರಿ ಮಂತ್ರಿ. ನಮ್ಮ ಡಿಸಿಸಿ ಬ್ಯಾಂಕಿಗೆ ಸ್ಪೆಷಲ್ ಆಫೀಸರನ್ನು ಹಾಕಿದ್ದೇನೆ. ಏಕೆಂದರೆ ವಿಧಿಯೇ ಇಲ್ಲ ಎನ್ನುವ ಪರಿಸ್ಥಿತಿ ಉಂಟಾಗಿದೆ. ಆದರೆ ಬಿಜಾಪುರದ್ದು ವಿಶೇಷವಾದದ್ದು ನಾನು ಅದನ್ನು ಅಲ್ಲಿಗೆ ಹೋಲಿಸುತ್ತಿಲ್ಲ. ಆದ್ದರಿಂದ ಬಿಜಾಪುರದಲ್ಲಿ ಈಗ ಆಡಳಿತಾಧಿಕಾರಿಗಳ ನೇಮಕ, ಚುನಾವಣೆಯ ಮುಂದೂಡಿಕೆ, ಎರಡೂ ವಿಷಯಗಳು ಕೂಡ ರಾಜ್ಯದ ಉಚ್ಛ ನ್ಯಾಯಾಲಯದ ಎದುರು ಪ್ರಶ್ನಾರ್ಹವಾಗಿರುವುದರಿಂದ ಮತ್ತು ಆ ಬಗ್ಗೆ ಶಿವಾನಂದ ಪಾಟೀಲರು ಮತ್ತು ಶ್ರೀ ಜಗದೀಶ್ ಶೆಟ್ಟರ್‌ರವರು ಕೋರ್ಟ್‌ನಿಂದ ಡೈರೆಕ್ಷನ್ಸ್ ಬಂದಿದೆ ಎಂದು ಹೇಳುತ್ತಾರೆ, ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಆದ್ದರಿಂದ ಹೆಚ್ಚು ನಾವು ಇಲ್ಲಿ ಚರ್ಚೆಗೆ ಒಳಗಾದಾಗ, ಒಂದು ವಿಚಾರ ಕೋರ್ಟಿನ ಮುಂದೆ ಇರುವಾಗ ಸಬ್‌ಜುಡೀಸ್ ಎನ್ನುತ್ತೀರೋ ಏನೋ, ನನಗೆ ಆ ವಿಚಾರ ಗೊತ್ತಿಲ್ಲ. ಆದರೆ ಪ್ರತಿಕೂಲ ಪರಿಣಾಮಗಳು ಯಾವ ರೀತಿ ಬೀರಬಹುದು ಎನ್ನತಕ್ಕ ಹಿನ್ನೆಲೆಯಲ್ಲಿ ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ,

ಬಿಜಾಪುರ ಬ್ಯಾಂಕಿನ ವಿಷಯದ ಬಗ್ಗೆ ನಾನು ಖಂಡಿತವಾಗಿಯೂ ಕೂಡ ತಮ್ಮೆಲ್ಲರ ಜೊತೆ ಚರ್ಚೆ ಮಾಡಿ ಮತ್ತು ಈ ಕೋರ್ಟಿನ ಆದೇಶ ಏನು ಬರುತ್ತದೆ. ಆ ಆದೇಶದ ಆಧಾರದ ಮೇಲೆ ಮುಂದಿನ ಕ್ರಮವನ್ನು ಖಂಡಿತವಾಗಿಯೂ ಮಾಡುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟು ತಾವೆಲ್ಲಾ ಇದಕ್ಕೆ ಒಪ್ಪಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

+ಶ್ರೀ ಸಿ. ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೇ ಅದಕ್ಕೆ ಕಾರಣ ಏನೆಂದರೆ, ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ. ಇವರು ಈ ಕ್ರಮವನ್ನು ತೆಗೆದುಕೊಳ್ಳದ್ದೇ ಇದ್ದಿದ್ದರೆ ಕೋರ್ಟಿಗೆ ಮುಂದೆ ಯಾರೂ ಹೋಗುತ್ತಿರಲಿಲ್ಲ. ಈ ಕಾಸ್ ಆಫ್ ಆ್ಯಕ್ಷನ್ ಆಗಿರುವುದು ಸರ್ಕಾರದ ಕ್ರಮದಿಂದ ಇವತ್ತು ಅದರಿಂದ ನಾವು ಹಿಂತೆಗೆಯುತ್ತಿದ್ದೇವೆ ಎಂದು ನ್ಯಾಚುರಲ್ ಆಗಿ ಕೋರ್ಟಿನಲ್ಲಿರುವ ಸಮಸ್ಯೆ ಅದರ ಪಾಡಿಗೆ ಅದು ಸೆಟ್ಲ್ ಆಗುತ್ತದೆ. ಯಾರು ಕೋರ್ಟಿಗೆ ಹೋಗಿದ್ದಾರೋ ಅವರು ವಾಪಸ್ ಪಡೆಯುತ್ತಾರೆ. ಆದ್ದರಿಂದ ಈ ನೆಪ ಹೇಳಿ ನೀವು ತಪ್ಪಿಸಿಕೊಳ್ಳತಕ್ಕಂಥದ್ದಕ್ಕೆ ಸರ್ಕಾರ ಪ್ರಯತ್ನಪಡುತ್ತಿದೆ. ಸ್ವಾಮಿ, ಈಗ ಐದು ಸಕ್ಕರೆ ಕಾರ್ಖಾನೆಗಳು, ಒಂದು, ದೂದ್‌ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ. ಇದಕ್ಕೆ ರಿಟರ್ನಿಂಗ್ ಆಫೀಸರ್, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಕೃಷ್ಣನಗರ, ಬಿಜಾಪುರ ಜಿಲ್ಲೆ. ಯಾರು ಸ್ವಾಮಿ ಇದಕ್ಕೆ ಆಡಳಿತಾಧಿಕಾರಿ? ಅಲ್ಲಿ ಚುನಾವಣೆಯನ್ನು ನಡೆಸುತ್ತಾರೆ, ಒಂದೇ ಜಿಲ್ಲೆಯಲ್ಲಿ, ಅಲ್ಲಿ ಚುನಾವಣೆ ನಡೆಯುತ್ತದೆ ಮತ್ತೆ ರೆವಿನ್ಯೂ ಆ ಡಿವಿಜನ್‌ನಲ್ಲಿ ಚುನಾವಣೆ ನಡೆಯುತ್ತದೆ. ಬಿಜಾಪುರ ಜಿಲ್ಲಾ ಬ್ಯಾಂಕಿಗೆ ಮಾತ್ರ ಕ್ಷಾಮ ಬರುತ್ತದೆ ಅಥವಾ ತೊಂದರೆ ಇದೆ, ಅಲ್ಲಿರುವ ನಂದಿ ಸಹಕಾರ ಸಕ್ಕರೆ ಕಾರ್ಖಾನೆಗೆ ಚುನಾವಣೆ ನಡೆಯುವಾಗ ಅಲ್ಲಿ ಕ್ಷಾಮ ಇರಲಿಲ್ಲ. ಅದೇ ರೀತಿ ವಾಣಿವಿಲಾಸ ಸಹಕಾರ ಸಕ್ಕರೆ ಕಾರ್ಖಾನೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಮತ್ತೆ ಸೋಮೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ, ಬೈಲಹೊಂಗಲ, ಬೆಳಗಾವಿ ಜಿಲ್ಲೆ, ಇಲ್ಲೆಲ್ಲಾ ಚುನಾವಣೆಗಳು ನಡೆಯುತ್ತವೆ. ಇದು ಏಕೆ ಸ್ವಾಮಿ? ಇಲ್ಲೆಲ್ಲಾ ಬರಗಾಲ ಇಲ್ಲವೋ? ಬಿಜಾಪುರ ಡಿಸಿಸಿ ಬ್ಯಾಂಕಿಗೆ ಮಾತ್ರ ಬರಗಾಲವೇ? ನಾನು ಆಗಲೇ ಹೇಳಿದ್ದೇನೆ "ಕಳ್ಳನಿಗೆ ಒಂದು ಪಿಳ್ಳೆನೆವ" ಎಂದು. ನಾನು ಪ್ರೈಮರಿ ಸ್ಕೂಲಿನಲ್ಲಿರುವಾಗ ಒಂದು ಕತೆಯನ್ನು ಓದುತ್ತಿದ್ದೆ. ತೋಳ ಮತ್ತು ಕುರಿ ಕಥೆ. ತೋಳ ನೀರು ಕುಡಿಯುತ್ತಿರುವುದು ಮೇಲುಗಡೆ. ಕುರಿ ಕೆಳಗಡೆ ಹೋಗಿ ನೀರು ಕುಡಿಯುತ್ತದೆ. ಕೊನೆಗೆ ತೋಳಕ್ಕೆ ಕುರಿಯನ್ನು ತಿನ್ನಬೇಕೆನ್ನುವ ಮನಸ್ಸಾಯಿತು. ತೋಳವು ಕುರಿಯನ್ನು ನೋಡಿ, ನೀನು ನೀರು ಕುಡಿಯುತ್ತಿದ್ದೀಯ, ನಿನ್ನ ಎಂಜಲು ನೀರನ್ನು ನಾನು ಕುಡಿಯಬೇಕಾ ಎಂದು ಕೇಳಿತು. ಅರೆ, ಇದೇನಿದು, ನೀನು ಮೇಲಗಡೆ ನೀರು ಕುಡಿಯುತ್ತಿದ್ದೀಯ, ನೀನು ಕುಡಿದಂಥ ಎಂಜಲು ನೀರು ನನ್ನ ಕಡೆಗೆ ಬರುತ್ತಿದೆ. ನಾನು ಕೆಳಗಡೆ ಆ ನೀರನ್ನು ಕುಡಿಯುತ್ತಿದ್ದೇನೆ, ನನ್ನ ಮೇಲೆ ಈ ಅಪರಾಧ ಹೊರಿಸುತ್ತಿದ್ದೀಯಲ್ಲಾ ಎಂದು ಕೇಳಿದ್ದಕ್ಕೆ, ನೀನೋ ನಿಮ್ಮಪ್ಪನೋ ನಾನು ತಿನ್ನುವುದು ತಿನ್ನುವುದೇ ಎಂದು ಕೊನೆಗೆ ಕುರಿಯ ಮೇಲೆ ಎರಗಿ ತೋಳ ಆ ಕುರಿಯನ್ನು ಮುಗಿಸುತ್ತದೆ. ಆ ನ್ಯಾಯವನ್ನು ಇವತ್ತಿನ ದಿವಸ ಇಲ್ಲಿ ನಮಗೆ ಹೇಳುವುದಕ್ಕೆ ಹೊರಟಿದ್ದಾರೆ. ಕಾಸ್ ಆಫ್ ಆ್ಯಕ್ಷನ್ ಸರ್ಕಾರದಿಂದ ಬಂದಿರತಕ್ಕಂಥದ್ದು. ನೀವು ವಾಪಸ್ ತೆಗೆದುಕೊಳ್ಳಿ. ವಾಪಸ್ ತೆಗೆದುಕೊಂಡರೆ ತನ್ನಡೆಗೆ ಆ ರಿಟ್‌ನ್ನು ಯಾರು ಹಾಕಿದ್ದಾರೋ, ಅವರು ವಾಪಸ್ ತೆಗೆದುಕೊಳ್ಳುವುದಕ್ಕೆ ತಯಾರು ಇದ್ದಾರೆ. ನಾವು ತಪ್ಪು ಮಾಡಿದ್ದೇನೆನ್ನುವ ನಿಲುವನ್ನು ಕೋರ್ಟ್ ಮುಂದೆ ಸರ್ಕಾರ ತಾಳಿ, ಒಂದು ವೇಳೆ ಅವರು

ವಾಪಸ್ ಪಡೆಯದಿದ್ದರೂ ನಾವೇನು ತಪ್ಪು ಮಾಡಿದ್ದೇವೆ? ಆ ತಪ್ಪನ್ನು ಸರಿಪಡಿಸಿಕೊಂಡಿದ್ದೇವೆ. ಎನ್ನುವ ಸರ್ಕಾರದ ನಿಲುವನ್ನು ನ್ಯಾಯಾಲಯದ ಮುಂದೆ ತೋಡಿಕೊಂಡರೆ ಆಗ ತನ್ನ ಪಾಡಿಗೆ ತಾನೇ ಆ ನ್ಯಾಯಾಲಯದ ರಿಟ್ ಕೂಡ ಇನ್‌ಫ್ರಕ್ಚುಯಸ್ ಆಗುತ್ತದೆ. ಸ್ವಾಮಿ, ನಾನೇನು ನಿಮ್ಮ ಹಾಗೆ ವಕೀಲನಲ್ಲ. ಆದರೆ ಸಾಮಾನ್ಯ ಜ್ಞಾನ ಸ್ವಲ್ಪಮಟ್ಟಿಗಾದರೂ ಕೂಡ ಇದೆ. ಸಾಮಾನ್ಯ ಜ್ಞಾನದ ಆಧಾರ ಮೇಲೆ ನಾನು ಈ ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಇದೆಲ್ಲಾ ಈ ತೋಳ-ಕುರಿಮರಿ ನ್ಯಾಯ ಬೇಡ ಸ್ವಾಮಿ. ನ್ಯಾಯವಾಗಿ ನಡೆದುಕೊಳ್ಳುತ್ತೇವೆನ್ನುವ ಮಾತನ್ನು ದಯವಿಟ್ಟು ಹೇಳಿ. ಆ ಉತ್ತರವನ್ನು ನಾವು ನಿಮ್ಮಿಂದ ನಿರೀಕ್ಷಿಸುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಮೂಕವೇದನೆ ಎಂದು ಹೇಳಿದರು. ನಾವೆಲ್ಲ ಇಲ್ಲೇನು ಮಾತನಾಡಿದ್ದೇವೆ, ನಮ್ಮ ಭಾವನೆಗಳನ್ನು ಏನು ವ್ಯಕ್ತಮಾಡಿದ್ದೇವೆ; ನಾವು ನಿಮಗೆ ನಮ್ಮ ಮಾತಿನಲ್ಲಿ ಹೇಳುವುದಾದರೆ, ನೀವು ಅದನ್ನು ಬಹಳಷ್ಟು ಮನದಟ್ಟು ಮಾಡಿಕೊಂಡಿದ್ದೀರಿ. ಅದು ನಿಮ್ಮ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಅದರ ಜೊತೆಗೆ ಮೂಕ ವೇದನೆಯನ್ನೂ ಹೇಳಿದ್ದೀರಿ. ಅದಕ್ಕಾಗಿ ಇವತ್ತು ಆತ್ಮಸಾಕ್ಷಿಯಾಗಿ ನೀವು ಇವತ್ತು ಮಾತನಾಡಿದ್ದೀರಿ. ಅದನ್ನು ಒಪ್ಪತಕ್ಕದ್ದೇ. ಆದರೆ ಸುತ್ತುಮುತ್ತು ಮಾಡಿ ಕೋರ್ಟಿನಲ್ಲಿ ಕೇಸ್ ಇದೆ, ಕೋರ್ಟಿನಲ್ಲಿ ಏಕೆ ಕೇಸ್ ಇದೆ ಎನ್ನುವುದು ನಿಮಗೆ ಗೊತ್ತಿದೆ. ಅದಕ್ಕಾಗಿ ಇದು ನಿಮ್ಮ ಕೈಯಲ್ಲಿದೆ. ಕೋರ್ಟಿನಲ್ಲಿರುವ ಕೇಸ್ ನಿಮ್ಮಿಂದ ಆಗಿರುವುದು ಅದರ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಮುಂದೇನು ಅದು ಕಾಸ್ ಆಫ್ ಆ್ಯಕ್ಷನ್ ನಡೆಯಲಿಕ್ಕಿಲ್ಲ. ಅದನ್ನು ನಿಮ್ಮ ಮೇಲೆ ಬಿಟ್ಟಿದ್ದಾರೆ. ಈಗ ಎರಡು ವಾರಗಳ ಕಾಲ ಟೈಮ್ ಕೊಟ್ಟಿದ್ದಾರಲ್ಲಾ, ಆ ಅಧಿಕಾರವನ್ನು ನಿಮಗೆ ಕೊಟ್ಟಿದ್ದಾರೆ. ನಿಮಗೆ ಮನದಟ್ಟೂ ಆಗಿದೆ. ಅದಕ್ಕಾಗಿ ಸುತ್ತುಬಳಿಸಿ ಮಾಡುವಂಥದ್ದು ಬೇಡ. ಇದು ಯಾವುದೋ ಒತ್ತಡಕ್ಕೆ ಆಗಿದೆ ಎನ್ನುವುದನ್ನು ನೀವೇ ಹೇಳಿದಿರಿ. ಸುತ್ತುಬಳಸಿ ಮಾಡಿ ರಾಮಾಯಣದ ಕತೆಯನ್ನು ಹೇಳಿ, ಎಲ್ಲೆಲ್ಲಿ ಏನೇನು ಆಗಿದೆ ಎನ್ನುವುದನ್ನು ನೀವೇ ಹೇಳಿದಿರಿ. ಒಪ್ಪಿಕೊಂಡಿದ್ದೀರಿ. ಬಹುಶಃ ಇವತ್ತು ನನಗನಿಸುತ್ತದೆ. ಇವತ್ತೇ ಅದನ್ನು ನೀವು ಘೋಷಣೆ ಮಾಡಿಬಿಟ್ಟರೆ ಸರಿಯಾಗುತ್ತದೆ. ಅದಕ್ಕೆ ಕೋರ್ಟಿನಲ್ಲಿ ಕೇಸ್ ಇದೆ, ರಿಟ್ ಪಿಟಿಷನ್ ಫೈಲ್ ಇದೆ, ಅನ್ನುವಂಥದ್ದು ಒಂದು ಕಾರಣವಾಗಬಾರದು. ನಿಮ್ಮ ಉತ್ತರಕ್ಕೆ ತಡೆ ಹಾಕುವಂಥದ್ದು ಆಗಬಾರದು. ಈ ಚರ್ಚೆಗೆ ತಡೆ ಹಾಕುವುದು ಆಗಬಾರದು. ಸಬ್‌ಜುಡೀಸ್ ಎನ್ನುವ ಪ್ರಶ್ನೆ ಇಲ್ಲಿ ಬರುವುದೇ ಇಲ್ಲ. ಅದಕ್ಕಾಗಿ ನಿಮಗೆ ಮನದಟ್ಟಾಗಿದೆ. ಇದರ ಬಗ್ಗೆ ತಾವು ಎಳೆದುಕೊಂಡು ಹೋಗುವ ಅವಶ್ಯಕತೆ ಇಲ್ಲ.

ಶ್ರೀ ಸಿ.ಭೈರೇಗೌಡ:- ಅವರು ಮೂಕವೇದನೆಯನ್ನು ಅನುಭವಿಸುತ್ತಿದ್ದಾರೆ. ಆ ಮೂಕವೇದನೆಯಿಂದ ಹೊರಗಡೆ ಬರಬೇಕಾದರೆ ಈ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಅವರೇನು ತಪ್ಪು ಮಾಡಿದ್ದಾರೆ, ಆ ತಪ್ಪನ್ನು ಸರಿಪಡಿಸಿಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿಶ್ವನಾಥ್‌ರವರು ಈಗೇನು ಅರ್ಥ ಮಾಡಿಕೊಂಡಿದ್ದಾರೆ, ದಯವಿಟ್ಟು, ಅವರು ಆ ಕೋರ್ಟಿನ ಕೇಸು ಇವೆಲ್ಲಾ ಇದಕ್ಕೆ ಸಂಬಂಧ ಇಲ್ಲ, ಚುನಾವಣೆ ನಡೆಸುತ್ತೇವೆಂದು ಹೇಳಿ ಘೋಷಣೆ ಮಾಡಿಬಿಡಲಿ. ಏಕೆಂದರೆ ಬೇರೆ ಕಡೆ ಎಲ್ಲಾ ಚುನಾವಣೆ ನಡೆಸುತ್ತಿದ್ದಾರೆ. ಅದೇ ರೀತಿ ಇಲ್ಲಿಯೂ ಚುನಾವಣೆ ನಡೆಸುತ್ತೇವೆಂದು ಘೋಷಣೆ ಮಾಡಿಬಿಟ್ಟರೆ ಕೋರ್ಟು ಕೇಸ್ ಎಲ್ಲಾ ಮುಗಿಯುತ್ತದೆ. ಯಾರು ಪ್ರಜಾತಂತ್ರದ

ವ್ಯವಸ್ಥೆಯಲ್ಲಿ ಯಾರು ಬೇಕು ಎಂದು ಆ ಮತದಾರರು ತೀರ್ಮಾನವನ್ನು ತೆಗೆದುಕೊಳ್ಳಲಿ. ಅದು ಆಗಿಯೇ ಆಗುತ್ತದೆ. ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂದು ಅವರು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ಪ್ರಜಾತಂತ್ರದ ಒಂದು ಕತ್ತನ್ನು ಹಿಸುಕುವಂಥ ಕೆಲಸವಾಗಬಾರದು. ಅದು ನಿಮ್ಮಿಂದ ಆಗಬಾರದು ಎನ್ನುವಂಥದ್ದು, ಮತ್ತು ನೀವು ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೀರಿ. ಇದರ ಬಗ್ಗೆ ಮತ್ತೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ, ಮತ್ತೊಮ್ಮೆ ತೆಗೆದುಕೊಳ್ಳುತ್ತೇವೆನ್ನುವುದು ಬೇಡ. ಈಗೇನು ಕೋರ್ಟ್ ಡೈರೆಕ್ಷನ್ ಕೊಟ್ಟಿದೆ. ಆ ಪ್ರಕಾರ ತಕ್ಷಣವೇ ನೀವು ಚುನಾವಣೆಯನ್ನು ಘೋಷಣೆ ಮಾಡಿಬಿಡಿ.

ಶ್ರೀ ಪಿ.ಹೆಚ್.ಪೂಜಾರ್:- ಬಿಜಾಪುರ, ಬಾಗಲಕೋಟೆಯ ಷುಗರ್‌ಕೇನ್ ಗ್ರೋಯರ್ಸ್ ಎಲ್ಲರೂ ಸದಸ್ಯರುಗಳಿದ್ದಾರೆ. ಇಡೀ ಬಾಗಲಕೊಟೆ, ಬಿಜಾಪುರ ಕವರ್ ಆಗಿರುವಂಥದ್ದು. ಎರಡೂ ಜಿಲ್ಲೆಯಲ್ಲಿ ಬರಗಾಲ ಇದ್ದಂಥ ವ್ಯವಸ್ಥೆಯಲ್ಲಿ ಅಲ್ಲಿ ಚುನಾವಣೆಗಳು ನಡೆದಿವೆ. ಕೇವಲ ಎಂಟತ್ತು ದಿವಸದಲ್ಲಿ-ಇದೇನು ಅನ್ಯಾಯ? ದಯವಿಟ್ಟು ಚುನಾವಣೆ ನಡೆಸುವ ಬಗ್ಗೆ ಘೋಷಣೆ ಮಾಡಬೇಕು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್:- ಮೂಕವೇದನೆಯನ್ನು ತಾವು ಉಪಶಮನ ಮಾಡಿಕೊಳ್ಳಿ.

ಶ್ರೀ ಹೆಚ್.ವಿಶ್ವನಾಥ್:- ಮಾನ್ಯ ಬೈರೇಗೌಡರೂ ಕೂಡ ಮತ್ತೆ ಹೇಳಿದ್ದಾರೆ. ಅವರು ತೋಳ ಮತ್ತು ಕುರಿಮರಿ ಕಥೆಯನ್ನು ಹೇಳಿದ್ದಾರೆ. ನಾವೆಲ್ಲ ಓದುವಾಗ ಪರೀಕ್ಷೆ ಬಂದಾಗ ಮಾಡೆಲ್ ಕ್ವಶ್ಚನ್ ಪೇಪರ್ಸ್ ಎಂದು ಹೇಳಿ ಅದೆಲ್ಲಾ ಇಟ್ಟುಕೊಂಡು ಓದುತ್ತಿದ್ದೆವು. ಹಾಗೆ ಮಾಡೆಲ್ ಕೊಶ್ಚನ್ ಪೇಪರ್ಸ್‌ನಲ್ಲಿ ಈ ಬೈರೇಗೌಡರು ಬರೆದಿದ್ದನ್ನು ನಾವು ಹಿಂದೆ ಓದುತ್ತಿದ್ದೆವು. ನೀವೇನು ಹಿಂದೆ ಮಾಡೆಲ್ ಕ್ವೊಶ್ಚನ್ ಪೇಪರ್ ಬರೆದಿದ್ದೀರಿ ಅದನ್ನು ನಾವು ಓದುತ್ತಿದ್ದೆವು.

ಶ್ರೀ ಸಿ.ಬೈರೇಗೌಡ:- ನನ್ನ ಹತ್ತಿರ ಇನ್ನೊಂದು ಕ್ವೊಶ್ಚನ್ ಪೇಪರ್ ಇದೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ವಿಜಾಪುರ. ಇವರ ಕಾರ್ಯಕ್ರಮದ ನಡವಳಿಕೆಗಳು ಎಂದು ಹೇಳಿ ತಾರೀಖು 23.01.2003 ಎಂದು ಇದೆ. ಅದರಲ್ಲಿ ಏನು ಮಾಡಿದ್ದಾರೆ ಸ್ವಾಮಿ ಎಂದರೆ 43 ಸಹಕಾರ ಸಂಘಗಳಿಗೆ ಅಂದರೆ, ಮೀನುಗಾರರ ಸಹಕಾರ ಸಂಘ ಇದೆ, ಎಲ್ಲಾ ಪ್ರಾಥಮಿಕ ಸಹಕಾರ ಸಂಘಗಳು ಪತ್ತಿನ ಸಂಘಗಳು ಇವೆಲ್ಲಾ ಇವೆ. ಆ 43 ಸಹಕಾರ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಬೇಕು. ಅದಕ್ಕೆ ಚುನಾವಣಾಧಿಕಾರಿಯವನ್ನು ಇಂಥವರನ್ನು ನೇಮಕ ಮಾಡಿದ್ದೇವೆ ಎನ್ನತಕ್ಕ ಆಜ್ಞೆ ಹೊರಟಿದೆ. ಸ್ವಾಮಿ ಇದು ಒಂದು ಮಾಡೆಲ್ ಕ್ವೊಶ್ಚನ್ ಪೇಪರ್. ಆ ಮಾಡೆಲ್ ಕ್ವೊಶ್ಚನ್ ಪೇಪರ್‌ಗೆ ಅವರೇನೋ ಉತ್ತರ ತಯಾರಿಸಿದ ಹಾಗೆ ಇದೆ. ಈ ಕ್ವೊಶ್ಚನ್ ಪೇಪರ್‌ಗೆ ದಯವಿಟ್ಟು ಉತ್ತರ ಕೊಡಿ.

ಶ್ರೀ ಶಿವಾನಂದ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಇಲ್ಲಿಯವರೆಗೆ ಬಹಳ ನೊಂದು ಮಾತನಾಡಿದ್ದೀರಿ ಎಂದು ಅನಿಸುತ್ತಿದೆ. ಬಹುಶಃ ನೀವು ಧೃತರಾಷ್ಟ್ರ ಆಗಿದ್ದೀರೇನೋ ಎಂದು ಅನ್ನಿಸುತಿದೆ. ಮಾನ್ಯ ಮುಖ್ಯಮಂತ್ರಿಗಳು ಕಣ್ಣೇನಾದರೂ ಕಟ್ಟಿದ್ದಾರೇನೋ ಎಂದು ನನಗೆ ಸಂಶಯ ಬರುತ್ತಿದೆ. ಸ್ವಲ್ಪ ಏನಾದರೂ ಕೌರವರ ಪಾಳಿಯಲ್ಲಿದ್ದರೆ ಪಾಂಡವರ ಪಾಳಿಗೆ ಬರುವ ಪ್ರಯತ್ನ ಮಾಡಿ.

ಶ್ರೀ ಎಚ್. ವಿಶ್ವನಾಥ್:- ಮಾನ್ಯ ಉಪಾಧ್ಯಕ್ಷರೆ, ಒಟ್ಟಾರೆಯಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್, ನೀವು ಘೋಷಣೆ ಮಾಡಬೇಕು ಎಂದಿರಿ.

ನಾನು ಸುಪ್ರೋಮೋಟೋ ಮಾಡುವುದಕ್ಕೆ ಬರುವುದಿಲ್ಲ. ವಿಷಯ ಕೋರ್ಟ್ ಮುಂದೆ ಇದೆ. ಅವರು ಹೇಳಿದರು, ನೀವು 15 ದಿವಸದಲ್ಲಿ ಮಾಡಬೇಕು ಎಂದು ಕೋರ್ಟ್ ಏನೋ ಒಂದು ಇಂಟೀರಿಮ್ ಆದೇಶ ನೀಡಿದ್ದಾರೆ. I will go through it. ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಯಾವ ರೀತಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಪಾಟೀಲ್:- ಇಲ್ಲ, ನಾವೇನೂ ಕೇಸ್ ಹಾಕಿಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಅವರು ಇಲ್ಲಿ ಅಸೆಂಬ್ಲಿಯಲ್ಲಿ ಉಲ್ಟಾ ಮಾಡುತ್ತೇವೆಂದು ಒಪ್ಪಿಕೊಳ್ಳಬೇಕು. ಉಲ್ಟಾ ಮಾಡಿದ ಕೂಡಲೇ ನೀವು ಚುನಾವಣೆ ಮಾಡುತ್ತೇವೆಂದು ಒಪ್ಪಿಕೊಂಡರೆ ಮುಗಿದು ಹೋಗುತ್ತದಲ್ಲಾ?

ಶ್ರೀ ಶಿವಾನಂದ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, Series of events ನೋಡಿದರೆ ನಿಮಗೂ ಮನದಟ್ಟು ಆಗಿರಬಹುದು. ಯಾವುದೇ ರೀತಿ ಬೆಳವಣಿಗೆ, ಸಹಕಾರಿಯಲ್ಲಿ ಈ ಅಸಹಕಾರಿ ನೀತಿಯಿಂದ ಆಗಬಾರದು. I do admit. ನಿಮಗೊಂದು ಲಿಬರ್ಟಿ ಇದೆ. ನಿಮ್ಮ ಪವರ್ ಅನ್ನು ನೀವು ಎಕ್ಸರ್‌ಸೈಜ್ ಮಾಡಬಹುದು. ಆದರೆ ನೀವು ಎಕ್ಸರ್‌ಸೈಜ್ ಮಾಡತಕ್ಕ ಅನಾಹುತದಲ್ಲಿ ನಾಳೆ ಒಳ್ಳೆಯ ಅಧಿಕಾರಿಗಳು ಇದರಲ್ಲಿ ಸಿಕ್ಕಿ ಒದ್ದಾಡಬಾರದು ನಾನು ನಿಮಗೆ ಹೇಳಬೇಕಾದರೆ ಆ ಒಂದು ಪರಿಸ್ಥಿತಿ ಬರುತ್ತದೆ. ಅಡ್ಮಿನಿಸ್ಟ್ರೇಟರ್ ಅನ್ನು ನೀವು ಅಪಾಯಿಂಟ್‌ಮೆಂಟ್ ಮಾಡಬೇಕಾಗಿತ್ತು, ನಾನು ಬೇಡ ಎಂದು ಹೇಳಲಿಲ್ಲ. ನಿಮಗೆ ಗೊತ್ತಿದೆ, ನಿಮ್ಮ ಆಕ್ಟ್‌ನಲ್ಲಿ ಪ್ರಾವಿಜನ್ ಇದೆ. If the term of the Office expires, it is deemed to be assumed as a charge ಎಂದು ಇದೆ. ಆವಾಗ ನಿಮ್ಮ ಅಡ್ಮಿನಿಸ್ಟ್ರೇಟರ್ ಬಂದು ಚಾರ್ಜ್ ತೆಗೆದುಕೊಂಡಿದ್ದರೆ ನನಗೆ ಕೆಟ್ಟದ್ದು ಅನ್ನಿಸುತ್ತಿರಲಿಲ್ಲ. ಚುನಾವಣೆ ಘೋಷಣೆ ಮಾಡಿ ನೋಟೀಸನ್ನು ಹೊರಡಿಸಿ ನಾಮಿನೇಷನ್ಸ್ ಅನ್ನು ಫೈಲ್ ಮಾಡಿದ ಮೇಲೆ ಆಡಳಿತಾಧಿಕಾರಿಯನ್ನು ಫೆಬ್ರವರಿ 16ನೇ ತಾರೀಖಿಗೆ ತಾವು ನೇಮಿಸುತ್ತೀರಿ. ಆ ಸಂದರ್ಭದಲ್ಲಿ ತಾವು ಇರಲಿಲ್ಲ. ತಾವು ಪ್ರಾಯಶಃ ಮೈಸೂರಿನಲ್ಲಿ ಇದ್ದೀರಿ ಎಂಬುದು ನನಗೆ ಗೊತ್ತಿದೆ. ಅದಕ್ಕೆ ನಿಮ್ಮ ಜೊತೆ ನಾನೇನೂ ಮಾತನಾಡಲಿಲ್ಲ. 16ನೇ ತಾರೀಖಿಗೆ ಅಡ್ಮಿನಿಸ್ಟ್ರೇಟರ್ ಅನ್ನು ನೇಮಿಸುತ್ತಾರೆ. 17ನೇ ತಾರೀಖಿಗೆ ಅವನ ಕಡೆಯಿಂದಲೇ ಡ್ರಾಫ್ಟ್ ಇದೆ ಎಂದು ಹೇಳಿ ವರದಿ ಕೊಡು ಎಂದು ಒಂದು ವರದಿಯನ್ನು ತರಿಸುತ್ತಾರೆ. ಆಡಳಿತಾಧಿಕಾರಿಯನ್ನು 16ಕ್ಕೆ ನೇಮಿಸುತ್ತಾರೆ. ಅವರು 17ಕ್ಕೆ ವರದಿ ಕೊಡುತ್ತಾರೆ. 18ಕ್ಕೆ ಪುನಃ ಗವರ್ನಮೆಂಟ್ ಫ್ಯಾಕ್ಸ್‌ನಲ್ಲಿ ಆರ್ಡರ್ ಮಾಡುತ್ತದೆ. Though I am being a President, I could not get that copies. ಇಷ್ಟು ಡಾರ್ಕ್‌ನಲ್ಲಿ ಇಟ್ಟು ಆಡಳಿತ ನಡೆಸತಕ್ಕದ್ದು, ಬ್ಯಾಂಕ್ ಬೈಫರ್‌ಕೇಶನ್ ಇಶ್ಯೂನಲ್ಲಿ, ಬೈಲಾ ಅಪ್ರೂವಲ್ ಮಾಡುವುದರಲ್ಲಿ ಇದೆಲ್ಲ ಸರಿಯಲ್ಲ. ನಿಮಗೆ ಗೊತ್ತಿರಬಹುದು 14(1)ರಲ್ಲಿ ಮೊದಲು ಚುನಾವಣೆ ಡಿಕ್ಲೇರ್ ಮಾಡಿದರು. ಪುನಃ ತಮ್ಮದೇ ಆ ನೋಟೀಸನ್ನು ವಾಪಸ್ ತರಿಸಿಕೊಂಡು ಪುನಃ ಒಂದು ಅಮೆಂಡ್‌ಮೆಂಟ್ ಇಶ್ಯೂ ಮಾಡಿದಿರಿ. ಇಲ್ಲಿ 14(1) ರಲ್ಲಿ ತಪ್ಪಿದೆ 14(1)ಬಿನಲ್ಲಿ ಮಾಡುತ್ತೇವೆಂದು ಹೇಳಿದಿರಿ. ಚುನಾವಣೆ ಪ್ರಾರಂಭ ಆಯಿತು. ಪುನಃ 16ನೇ ತಾರೀಖಿಗೆ ಅಡ್ಮಿನಿಸ್ಟ್ರೇಟರ್ ಅನ್ನು ಅಪಾಯಿಂಟ್ ಮಾಡುತ್ತಾರೆ. ಅವನು 17 ನೇ ತಾರೀಖಿಗೆ ರಿಪೋರ್ಟ್ ಕೊಡುತ್ತಾನೆ. 28ಕ್ಕೆ ಚುನಾವಣೆ ಇದೆ. ಇಷ್ಟು ಅನಾಹುತಗಳು, series of events. ನಾಳೆ ಇದನ್ನು ಯಾರಾದರೂ ಚಾಲೆಂಜ್ ಮಾಡಬಹುದು. ನಾಳೆ ನಾನೇ ಇದನ್ನು

ಕೋರ್ಟ್‌ನಲ್ಲಿ ಛಾಲೆಂಜ್ ಮಾಡಿದರೆ, ಆಗ ಸ್ಟ್ರಿಕ್ಚರ್ಸ್ ಪಾಸ್ ಆದರೆ ನೀವೂ ನಿಲ್ಲುವುದಿಲ್ಲ, ನಾನೂ ನಿಲ್ಲುವುದಿಲ್ಲ. ಸ್ವಲ್ಪ ನಾನು ನಿಮಗೆ ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಪಾರ್ಟಿ ಇಂಟರೆಸ್ಟ್ ಸೇಫ್‌ಗಾರ್ಡ್ ಮಾಡುವುದು ಇದೆ ಎನ್ನುವುದು ಇದರಲ್ಲಿ ಬಹಿರಂಗ. ಅವರು ನಿಮ್ಮ ಪಕ್ಕಕ್ಕೇ ಕುಳಿತಿದ್ದಾರೆ. ಬಾಗಲ್‌ಕೋಟೆಯಲ್ಲಿ ಡಿಸಿಸಿ ಬ್ಯಾಂಕ್ ಅನ್ನು ಬೈಫರ್‌ಕೇಟ್ ಮಾಡಿ ಬೋರ್ಡ್ ನಾಮಿನೇಟ್ ಮಾಡಿಬಿಟ್ಟಿರಿ. ಅಲ್ಲಿ ಈಗ ಏನು ಅನಾಹುತ ಆಗುತ್ತಿದೆ? ಒಂದೇ ಜಾತಿಯವರ 7 ಜನರನ್ನು ನಾಮಿನೇಟ್ ಮಾಡಿದ್ದಾರೆ. ಅವರು ಅಲ್ಲಿ ಏನು ವಾದ ಮಾಡುತ್ತಿದ್ದಾರೆ ಎಂದು ನಿಮಗೂ ಗೊತ್ತು. ಈ ಎಲ್ಲಾ ಡೀಟೇಲ್ಸ್‌ಗೆ ನಾನು ಹೋಗುವುದಿಲ್ಲ. ಇದು ರಾಷ್ಟ್ರಕ್ಕೇ ಮಾದರಿ ಆಗಿರತಕ್ಕಂಥ ಬ್ಯಾಂಕು, ನನಗೆ ಒಂದು ಬಹಳ ಕೆಟ್ಟ ಅನಿಸುತ್ತದೆ; ಹೇಗೆ ಅಂದರೆ ಅಲ್ಖೈದಾದವರು ಬಂದು ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ಬಾಂಬ್ ಹಾಕಿ ಹೋದರು, ಒಂದು ತಿಂಗಳಿನಲ್ಲಿ ನೀವು ಇಡೀ ಬಿಜಾಪುರ ಡಿಸಿಸಿ ಬ್ಯಾಂಕನ್ನು ಸರ್ವನಾಶ ಮಾಡಿದಿರಿ ಎಂದು ನಾನು ಹೇಳಬೇಕಾಗುತ್ತದೆ. ಈ ಮಾತನ್ನು ನಾನು ಅನಿವಾರ್ಯವಾಗಿ ಹೇಳುತ್ತೇನೆ. ಇದು ಪೂರ್ತಿ ನೆಲಸಮ ಆಗಿ ಬಿಡುತ್ತದೆ. ಈಗ ಇಲ್ಲ ಎಂದರೂ ಇನ್ನು ಐದು ವರ್ಷಕ್ಕೆ ಇದರ ರಿಸಲ್ಟ್ ನಿಮ್ಮ ಕಣ್ಣೆದುರಿಗೆ ಬರುತ್ತದೆ. ದಯಮಾಡಿ ಈಗಲಾದರೂ ತಿದ್ದಿಕೊಳ್ಳಲಿಕ್ಕೆ ಸಮಯ ಇದೆ. ಆ ಸುಂದರ ವರ್ಧನ್ ಕಮಿಟಿಗೆ ಏನು ಲೋಕಲ್ ಸ್ಟ್ಯಾಂಡ್ ಇದೆ ನೀವೇ ಸ್ಟಡಿ ಮಾಡಿ, ನಾನು ಬೇಡ ಎಂದು ಹೇಳುವುದಿಲ್ಲ. ಧಾರವಾಡ ಕೆಸಿಸಿ ಬ್ಯಾಂಕ್ ಕೂಡ ಬೈಫರ್‌ಕೇಶನ್‌ಗೆ ಫೀಸಿಬಲ್ ಇದೆ ಎಂದು ಹೇಳಿ ರಿಪೋರ್ಟ್ ಕೊಟ್ಟಿರತಕ್ಕ ಕಮಿಟಿಯ ವರದಿಯ ಆಧಾರದ ಮೇಲೆ ನೀವು ಬ್ಯಾಂಕ್‌ಗಳನ್ನು ಬೈಫರ್‌ಕೇಟ್ ಮಾಡುತ್ತಾ ಹೋದರೆ ಭಾವೀ ದಿನಗಳಲ್ಲಿ ಆಗತಕ್ಕ ಸ್ಥಿತಿಗತಿ ಏನು ಎಂದು ತಾವೇ ಸ್ವಲ್ಪ ವಿಚಾರ ಮಾಡಿ. ಈಗ ಸೆಕ್ಷನ್ 11ನ್ನು ಕಾಂಪ್ಲೈ ಮಾಡಬೇಕಾಗಿರತಕ್ಕಂಥ 11 ಡಿಸಿಸಿ ಬ್ಯಾಂಕುಗಳಿವೆ. ಅವುಗಳನ್ನು ಏನಾದರೂ ಸುಧಾರಿಸುವ ಕಡೆಗೆ ಸ್ವಲ್ಪ ಪ್ರಯತ್ನ ಮಾಡಿದ್ದರೆ ಅದಕ್ಕೆ ಏನಾದರೂ ಮಾನ ಮರ್ಯಾದೆ ಇರುತ್ತಿತ್ತು. ಆದರೆ ಇದು ಮಾತ್ರ ಸರಿಯಲ್ಲ. ತಾವು ಏನಾದರೂ ತಪ್ಪು ತಿಳಿದುಕೊಳ್ಳಿ. ಇದರಂತಹ ಕೆಲಸ ಇನ್ನಾವುದೂ ಇಲ್ಲ. ನಾನು ನೀವು ಮಾಡಿದ್ದೀರಿ ಎಂದು ಹೇಳುವುದಿಲ್ಲ. ಅವರು ಯಾರೇ ಮಾಡಿರಲಿ, ಈ ಅನಾಹುತಕ್ಕೆ ಇಂದಲ್ಲ ನಾಳೆ ಅವರು ಸಾರ್ವಜನಿಕರ ದೃಷ್ಟಿಯಲ್ಲಿ ಭಾಗಸ್ಥರಾಗುತ್ತಾರೆ. ಇದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ತಾವು ದಯಮಾಡಿ ಈಗಲಾದರೂ ನಾನು ನಿಮಗೆ ಕೋರ್ಟ್ ಆದೇಶ ಕೊಟ್ಟಿದ್ದೇನೆ. ನೀವು ಅದನ್ನು ನೋಡಿದ್ದೀರಿ; ಫಸ್ಟ್ ಪ್ಯಾರಾದಲ್ಲೇ he has set aside the order and he has given liberty to Government to publish the calender of events or whatever, in case if you take cognizance of the drought, ಆ ಡ್ರೌಟ್ ಬಗ್ಗೆ ಕೂಡ ನಾನು ನಿಮಗೆ ಹೇಳುತ್ತೇನೆ. ಬೀದರ್ ಡಿಸಿಸಿ ಬ್ಯಾಂಕ್‌ಗೆ 22ನೇ ತಾರೀಖು ಎಲೆಕ್ಷನ್ ಇದೆ. ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ, ಬಿಜಾಪುರ ತಾಲ್ಲೂಕಿನಲ್ಲಿದೆ; ಅಲ್ಲಿ ಎಲೆಕ್ಷನ್ ಇದೆ. ಮಾನ್ಯ ಭೈರೇಗೌಡರು 45 ಸೊಸೈಟಿಗಳ ಎಲೆಕ್ಷನ್ ನಡೆದಿದೆ ಎಂದು ಹೇಳಿದರು. ಇವೆಲ್ಲಾ ಬಿಟ್ಟು ಬರೇ ಡಿಸಿಸಿ ಬ್ಯಾಂಕಿಗೆ ಮಾತ್ರ ಬರಗಾಲ ಬರುತ್ತದೆಯೇ? ದಯಮಾಡಿ ನೀವು ವಿಚಾರ ಮಾಡಿ. ನೀವು ಆತ್ಮ ವಿಮರ್ಶೆ ಮಾಡಿಕೊಂಡು ಉತ್ತರ ಕೊಡುತ್ತೀರಿ ಮತ್ತು ಆ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂದು ನಾನು ಭರವಸೆ ವ್ಯಕ್ತಪಡಿಸುತ್ತೇನೆ. ನೀವು ಮಾಡದೇ ಇದ್ದರೂ ನನಗೆ ಕೆಟ್ಟ ಅನ್ನಿಸುವುದಿಲ್ಲ. ಯಾರು ಬೇಕಾದವರನ್ನು ತಂದು ಕೂರಿಸಿ. ನಾನೇನೂ ಅಲ್ಲಿ ಮತ್ತೆ

ಹೋಗಬೇಕು ಎಂದು ಆಸೆ ಪಟ್ಟಿಲ್ಲ. 7 ವರ್ಷ ನನ್ನ ಆಡಳಿತ ಮಂಡಲಿ ಮತ್ತು ಅಲ್ಲಿರತಕ್ಕ ಸಿಬ್ಬಂದಿ ನನಗೆ ಸಹಕಾರ ಮಾಡಿದ್ದಾರೆ. ಸೆಕ್ಷನ್ 11ರಿಂದ ಹೊರಗೆ ತಂದು ಇಡೀ ರಾಷ್ಟ್ರಕ್ಕೇ ಒಂದು ಮಾದರಿ ಬ್ಯಾಂಕ್ ಮಾಡಿದ್ದೇವೆ. ಅದನ್ನು ಕೆಡಿಸತಕ್ಕಂಥವರು ನಾಳೆ ಬಂದು ಕುಳಿತರೆ ನಮ್ಮದೇನೂ ಅಭ್ಯಂತರವಿಲ್ಲ. ಆದಕ್ಕೆ ನಾಳೆ ನೀವೇ ಉತ್ತರ ಕೊಡಬೇಕಾಗುತ್ತದೆ. ದಯಮಾಡಿ ಇನ್ನು ಮೇಲಾದರೂ ತಿದ್ದುಪಡಿ ಮಾಡಿ.

ಶ್ರೀ ಬಿ. ಸೋಮಶೇಖರ್:- ಆ ಬ್ಯಾಂಕಿನ ಇತಿಹಾಸದ ಬಗ್ಗೆ ಅವರು ಎಲ್ಲರಿಗೂ ಒಂದು ಸರ್ಕುಲೇಟ್ ಮಾಡಿದ್ದಾರೆ. ಅದನ್ನು ನಾನು ಓದಿದ್ದೇನೆ.

ಶ್ರೀ ಸಿ.ಎಸ್.ನಾಡಗೌಡ:- ಮಾನ್ಯ ಉಪಾಧ್ಯಕ್ಷರೆ, ರೂಲ್ 69ರ ಕೆಳಗಡೆ ಯಾರು ಸಿಗ್ನೇಟರೀಸ್ ಇದ್ದಾರೆ, ಅವರೆಲ್ಲಾ ಮಾತನಾಡುತ್ತಾರೆ.

ಗೊಂದಲ

ಶ್ರೀ ಶಿವಾನಂದ ಪಾಟೀಲ್:- ಐದು ನಿಮಿಷ ಬಿಟ್ಟು ಮಾತನಾಡಿ. ನಾವೇ ನಿಮಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ. ನೀವು ಅದೇ ಜಿಲ್ಲೆಯವರು ಇದ್ದೀರಿ. ನಾವು 11 ದಿವಸ ಅವರ ಸಲುವಾಗಿ ಕಾಯ್ದಿದ್ದೇವೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಈ ಒಂದು ವಿಚಾರದಲ್ಲಿ ನೋಡುವುದಾದರೆ ಬಹಳ ವ್ಯಸನ ಆಗುತ್ತದೆ. ಏಕೆಂದರೆ ನಾವು ಆಡಳಿತ ಮಾಡಿದ್ದೇವೆ. ನಾವು ಕೆಲವು ಸಹಕಾರ ಸಂಘಗಳನ್ನು ಕಟ್ಟಿದ್ದೇವೆ. ಇದೇ ಹಿಂದಿನ ಸರ್ಕಾರದಲ್ಲಿ ನಮ್ಮ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದಾಗ ಸುಪ್ರೀಂ ಕೋರ್ಟ್‌ವರೆಗೆ ಹೋಗಿ. ಸರ್ಕಾರದ ಮೇಲೆ ಯಾವ ರೀತಿ ಸ್ಟ್ರಿಕ್ಚರ್ಸ್ ಪಾಸ್ ಮಾಡಿರುವುದು ಇದೆ. ಆದರೆ ತಾವು ಉದಾಹರಣೆಗೆ ಕೊಡತಕ್ಕವರು ನಮ್ಮ ಸಂವಿಧಾನದ ಅಡಿಯಲ್ಲಿ ಸಂಬಂಧಪಟ್ಟ ಮಂತ್ರಿಯವರು ಇವತ್ತು ಉತ್ತರ ಕೊಡಬೇಕಾಗುತ್ತದೆ. ಯಾರೋ ಮಾಡಿದ ತಪ್ಪಿಗೆ ಇವತ್ತು ಉತ್ತರ ಅವರು ಕೊಡಬೇಕಾಗುತ್ತದೆ. ಅವರು ಹೇಳಿದ ಪ್ರಕಾರ ಈ ಒಂದು ಆದೇಶ ಹೊರಡುವಾಗ ತಾವು ಇರಲಿಲ್ಲವೆಂಬುದು ವೇದ್ಯವಾಗಿದೆ. ತಾವು ಇಲ್ಲದೇ ಆದೇಶ ಹೇಗೆ ಹೊರಡಿಸಿದರು ? ಈ Transaction of Business Rules, ಪ್ರಕಾರ Government means concerned Minister, Chief Minister is also

7.10 ಪಿಎಂ

Government in respect of BDA, and other departments mentioned in the Notification and you are the Government for Cooperation Department ಮುಖ್ಯಮಂತ್ರಿಗಳು ಸೂಚನೆ ಕೊಟ್ಟರೂ, unless the concerned Minister passes order, it will not become a Government Order. I don't know how it has happened and how it has been given effect? ಸಂಬಂಧಪಟ್ಟ ಸೆಕ್ರೆಟರಿಗಳಾದರೂ ನ್ಯಾಯವಾಗಿ ಇಶ್ಯೂ ಮಾಡಲು ಬರುವುದಿಲ್ಲ. ಇವತ್ತಿನ ದಿವಸ ಈ ಪ್ರೊಸೀಡರ್ಸ್ ಎಲ್ಲಾ ಹಾಳಾಗಿಹೋಗಿಬಿಟ್ಟಿದೆ. Chief Minister is not the Government for all the departments. All the Ministers are government. ತಮ್ಮ ನೋವು ನನಗನ್ನಿಸುತ್ತಿದೆ. ನಿಮ್ಮ ಹಿನ್ನೆಲೆಯನ್ನು ನೋಡುವುದಾದರೆ ಇಂಥ ಕೆಟ್ಟ ಕೆಲಸಕ್ಕೆ ನೀವು ಕೈಹಾಕುತ್ತಿರಲಿಲ್ಲ. ಏಕೆಂದರೆ ತಾವು ಬಹಳ ವಿಚಾರವಾದಿಗಳು. ಒಳ್ಳೊಳ್ಳೆಯ ಕೆಲಸಗಳನ್ನು, ಕಾರ್ಯಕ್ರಮಗಳನ್ನು ಮಾಡಿದ್ದೀರಿ.

ಸಹಕಾರ ಇಲಾಖೆಗೆ ಬಂದ ತಕ್ಷಣವೇ ತಾವು "ಯಶಸ್ವಿನಿ" ಕಾರ್ಯಕ್ರಮವನ್ನು ಹಾಕಿಕೊಂಡು ಬಡವರು ಯಾರು ಸಹಕಾರಿ ಸಂಘಗಳಲ್ಲಿ ಸದಸ್ಯರಾಗುತ್ತಾರೆ ಅವರಿಗೆ ಆರೋಗ್ಯದ ಬಗ್ಗೆ ಕ್ಲೇಮ್ ಮಾಡುವ ಕಾರ್ಯಕ್ರಮ ಮಾಡಿದಿರಿ. ಅದು ಬಹಳ ಉತ್ತಮವಾದ ಕಾರ್ಯಕ್ರಮ. ಹಾಗೆಯೇ ಶಿಕ್ಷಣ ಇಲಾಖೆಯಲ್ಲಿದ್ದಾಗಲೂ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಾಕಿದ್ದೀರಿ. ಆದರೆ ತಾವು ಇವತ್ತು ಪೇಚಿಗೆ ಸಿಕ್ಕಿಹಾಕಿಕೊಂಡಿದ್ದೀರಿ. ತಾವು ಧೈರ್ಯವಾಗಿ ಮಾಡಿ. ನಮ್ಮನ್ನು ನಾವೇ ಹೇಳಿಕೊಳ್ಳಬಾರದು. ಆದರೂ, ಎಷ್ಟೋ ಸಲ ಕೆಲವು ಸೆಕ್ರೆಟರಿಗಳು ಸಂಬಂಧಪಟ್ಟ ಮಂತ್ರಿಗಳನ್ನು ಬೈಪಾಸ್ ಮಾಡಿ ಮುಖ್ಯಮಂತ್ರಿಗಳಿಂದ ಆರ್ಡರ್ಸ್‌ನ್ನು ಪಾಸ್ ಮಾಡಿಸಿಕೊಂಡು ಬಿಡುತ್ತಾರೆ. ಅನಂತರ ಅದನ್ನು ಇಶ್ಯೂ ಮಾಡಿಬಿಡುತ್ತಾರೆ. ನಾನೂ 1987ರಲ್ಲಿ ಅಂಥ ಆರ್ಡರ್‌ನ್ನು ಸ್ಟೇ ಮಾಡಿದ್ದೇನೆ. "I have not been consulted in this aspect. I have studied the file. I don't relieve this officer". ಎಂದು ಹೇಳಿದ್ದೇನೆ. You show that guts. You must uphold the highest traditions of democratic principles. ಈ ಪ್ರಕಾರ ಮಂತ್ರಿಗಳು ಮಾಡಿದಾಗ ಅದಕ್ಕೆ ಮುಖ್ಯಮಂತ್ರಿಗಳೂ ಸಹ ಕೈಹಾಕಲು ಹೋಗುವುದಿಲ್ಲ. Merit should not be the casualty. Even in this case the merited society has become the casualty and nobody will appreciate this action. ನಿಮ್ಮ ಸರ್ಕಾರಕ್ಕೆ, ನಿಮ್ಮ ಪಕ್ಷಕ್ಕೆ ಹೆಸರು ಬರುತ್ತದೆ. ಒಂದು ವೇಳೆ ಏನಾದರೂ ಸುಪ್ರೀಮ್ ಕೋರ್ಟ್‌ನವರಾಗಲಿ, ಹೈಕೋರ್ಟ್‌ನವರಾಗಲಿ ನಿಮ್ಮ ಫೈಲನ್ನು ಸ್ಕ್ರೂಟಿನೈಸ್ ಮಾಡಿದರೆ I don't think this Government will take the credit. They will ridicule your government. ದಯವಿಟ್ಟು ತಾವು ಅದಕ್ಕೆ ಭಾಗಿಯಾಗಬೇಡಿ, ಧೈರ್ಯವಾಗಿ ಹೇಳಿ, ಆಯಿತು ಇದರಲ್ಲಿ ಏನೋ ಆಗಿದೆ ಇನ್ನು ಹದಿನೈದು ದಿನದಲ್ಲಿ ಆದೇಶವನ್ನು ಮಾಡುತ್ತೇನೆಂದು ಹೇಳಿ. You will rise to the occasion. ದಯವಿಟ್ಟು ಅಷ್ಟು ಮಾಡಬೇಕು.

ಶ್ರೀ ಹೆಚ್. ವಿಶ್ವನಾಥ್:- ಈಗಾಗಲೇ ಸುಧೀರ್ಘವಾಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಮುಖ್ಯಮಂತ್ರಿಯ ವಿಚಾರವನ್ನೂ ಪ್ರಸ್ತಾಪ ಮಾಡಿದರು. ನಮ್ಮ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ನಾವೆಲ್ಲಾ ಕೆಲಸಮಾಡುತ್ತೇವೆಯೇ ಹೊರತು ಮಂತ್ರಿಯ ನಾಯಕತ್ವದಲ್ಲಿ ಮುಖ್ಯಮಂತ್ರಿ ಕೆಲಸ ಮಾಡುವುದಿಲ್ಲವೆಂಬ ಕಟುಸತ್ಯ ನಮಗೆಲ್ಲಾ ಗೊತ್ತು. ಈ ಚರ್ಚೆ ಬಹಳ ಸೌಜನ್ಯವಾದ ವಾತಾವರಣದಲ್ಲಿ ನಡೆದಿದೆ. ಆದರೆ ಶ್ರೀಮಾನ್ ಶಿವಾನಂದಪಾಟೀಲರು ಮಾತನಾಡುವಾಗ ಕೊನೆಯಲ್ಲಿ ಬಹಳ ಉದ್ವೇಗದಿಂದ ಪದವನ್ನು ಬಳಸಿದ್ದಾರೆ. ಆ ಪದವನ್ನು ದಯಮಾಡಿ ಕಡತದಿಂದ ತೆಗೆಸಬೇಕು.

ಉಪಾಧ್ಯಕ್ಷರು:- ಆ ಪದವನ್ನು ಈಗಾಗಲೇ ಕಡತದಿಂದ ತೆಗೆಸಿಹಾಕಿದ್ದೇನೆ. ಅದು ಅಸಂಸ್ಕೃತಿಯ ಪದವಾಗುತ್ತದೆ.

ಶ್ರೀ ಶಿವಾನಂದಪಾಟೀಲ್ ಎಸ್.:- ನಾನು ಆ ಪದವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಏಕೆಂದರೆ, I apologise for that. ಆ ನೋವು ನಮಗಾಗಿದೆ. I swear ನನಗೆ ಆ ರೀತಿಯಾದ ಭಾವನೆಯೂ ಇರಲಿಲ್ಲ. ಆದರೆ ನಾಳೆ ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ ಹೇಳಿ? The Bank which was started with Rs. 35,000/- share capital, has crossed Rs. 600 crore of working capital. ನೀವೇ ಹೇಳಿ, 35 ಸಾವಿರ

ರೂಪಾಯಿಗಳಿಂದ ಪ್ರಾರಂಭವಾಗಿ 690 ಕೋಟಿ ರೂಪಾಯಿಗಳವರೆಗೆ ವ್ಯವಹಾರ ಮಾಡತಕ್ಕಂಥ ಸಂಸ್ಥೆಯನ್ನು ಒಂದೇ ಒಂದು ತಿಂಗಳಿನಲ್ಲಿ ಎರಡು ಭಾಗ ಮಾಡಿ ಮನಸೋ ಇಚ್ಛೆ ಆದೇಶಗಳನ್ನು ಮಾಡಿದರೆ ಅದರಿಂದ ನಮ್ಮ ಮನಸ್ಸಿಗೆ ಸ್ವಲ್ಪ ನೋವಾಗಿದೆ. I withdraw that word.

10) ಪ್ರಕಟಣೆ

ಉಪಾಧ್ಯಕ್ಷರು:- ಈಗ ಒಂದು ಪ್ರಕಟಣೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ:13ನೇ ಮಾರ್ಚ್ 2003ರಂದು 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ತಿದ್ದುಪಡಿ ವಿಧೇಯಕ, 2002'ನ್ನು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ. ಇಲ್ಲಿಗೆ ಇಂದಿನ ಕಲಾಪವನ್ನು ಮುಗಿಸಿ, ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7-16ಕ್ಕೆ ಮುಂದೂಡಲ್ಪಟ್ಟು ಪುನಃ 18-4-2003ರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

11. ಅನುಬಂಧ I

ಸೂಳ್ಯ ಕ್ಷೇತ್ರದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡುವ ಜಮೀನುಗಳ ಬಗ್ಗೆ

1179(1824) ಶ್ರೀ ಅಂಗಾರ ಎಸ್.(ಸೂಳ್ಯ) : ಮಾನ್ಯ ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅನೇಕ ಕುಟುಂಬಗಳು ಹಲವಾರು ವರ್ಷಗಳಿಂದ ಒತ್ತುವರಿ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕುಟುಂಬಗಳು ಎಷ್ಟು ವಿಸ್ತೀರ್ಣವನ್ನು ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಒತ್ತುವರಿ ಮಾಡಿದ್ದಾರೆ; (ಕುಟುಂಬವಾರು ವಿವರವನ್ನು ನೀಡುವುದು);

ಇ) ಸದರಿ ಅಕ್ರಮ ಒತ್ತುವರಿ ಮಾಡಿಕೊಂಡು ಬರುತ್ತಿರುವ ಕುಟುಂಬಗಳ ಸ್ಥಳವನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬಂದಿದೆ.

ಆ) ಒಟ್ಟು 1058 ಕುಟುಂಬಗಳು 691.416 ಹೆ. ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುತ್ತಾರೆ. (ವಲಯವಾರು ವಿವರಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ).

ಇ) ರಾಜ್ಯದಲ್ಲಿ 1978ರ ಪೂರ್ವದಲ್ಲಿ ಆಗಿರುವ ಕೆಲವು ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಈಗಾಗಲೇ ನಿರ್ದೇಶನ ನೀಡಿದೆ. ಭಾರತ ಸರ್ಕಾರದ ನಿರ್ದೇಶನದನ್ವಯ 1980ರ ನಂತರ ಆಗಿರುವ ಅರಣ್ಯ ಭೂಮಿ ಅತಿಕ್ರಮಣವನ್ನು ಸಕ್ರಮಗೊಳಿಸಲು ಸಾಧ್ಯವಿರುವುದಿಲ್ಲ.